ಗ್ರಾಮೀಣಾಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್. ಪದವಿಗಾಗಿ
(ಅಭಿವೃದ್ಧಿ ಅಧ್ಯಯನ)
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು :

ಜಯರಾಮನ್ ಓ.ಎಮ್.
ನೋಂದಣಿ ಸಂಖ್ಯೆ ೧೬೧೧೧೧೦೩೨೦೩೧

ಮಾರ್ಗದರ್ಶಕರು

ಡಾ|| ವಾಲ್ಟರ್ ಡಿ'ಸೋಜಾ
ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ಬಲ್ಮಠ, ಮಂಗಳೂರು
೨೦೧೮

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು - ೫೭೫೦೦೧

ಗ್ರಾಮೀಣಾಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್. ಪದವಿಗಾಗಿ
(ಅಭಿವೃದ್ಧಿ ಅಧ್ಯಯನ)
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು :

ಜಯರಾಮನ್ ಸಿ.ಎಮ್.

ನೋಂದಣಿ ಸಂಖ್ಯೆ ೧೭೧೧೧೧೦೩೦೦೩೧

ಮಾರ್ಗದರ್ಶಕರು :

ಡಾ॥ ವಾಲ್ಟರ್ ಡಿ'ಸೋಜಾ

ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ಬಲ್ಮಠ, ಮಂಗಳೂರು

೨೦೧೮

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು – ೫೭೫೦೦೧

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ. ಫಿಲ್. ಪದವಿಗಾಗಿ ಸಾದರಪಡಿಸಿದ **"ಗ್ರಾಮೀಣಾಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ"** ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ। ವಾಲ್ಟರ್ ಡಿ.ಸೋಜ ಅವರ ಮಾರ್ಗದರ್ಶದಲ್ಲಿ ಸಿದ್ದಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಗಳಿಕೆಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇವೆ.

ಜಯರಾಮನ್ ಸಿ.ಎಮ್.

ಸಂಶೋಧಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ

ಕೇಂದ್ರ ಬಲ್ಮಠ, ಮಂಗಳೂರು.

ದಿನಾಂಕ : 26-09-2018

ಯೋಗ್ಯತಾ ಪತ್ರ

ಜಯರಾಮನ್ ಸಿ. ಎಮ್. ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **"ಗ್ರಾಮೀಣಾಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ"** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ. ಫಿಲ್. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ವಾಲ್ಟರ್ ಡಿ.ಸೋಜಾ

ಸಂಶೋಧನ ಮಾರ್ಗದರ್ಶಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ

ಕೇಂದ್ರ, ಬಲ್ಮಠ, ಮಂಗಳೂರು.

Dr. Walter D Souza
Assistant Professor
Govt. First Grade College For Women
Balmatta, MANGALURU - 575 001

ದಿನಾಂಕ : 26-9-2018

"ಗ್ರಾಮೀಣಾಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ"

ಅಧ್ಯಯನದ ವಿವರಗಳು

ಕೋಷ್ಟಕಗಳ ಪಟ್ಟಿ

೧.೧ ಪ್ರವೇಶ

ಭಾರತ ಹಳ್ಳಿಗಳ ದೇಶ. ಇಲ್ಲಿ ಸುಮಾರು ೫ ಲಕ್ಷಕ್ಕಿಂತಲೂ ಅಧಿಕ ಹಳ್ಳಿಗಳಿವೆ. ಒಟ್ಟು ಜನಸಂಖ್ಯೆಯ ೭೨% ಕ್ಕಿಂತಲೂ ಅಧಿಕ ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಇದರಲ್ಲಿ ಹೆಚ್ಚಿನವರು ಕೃಷಿ-ಕಾರ್ಮಿಕರು, ದುರ್ಬಲವರ್ಗದವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದವರು, ಬಡತನ ರೇಖೆಗಿಂತ ಕೆಳಗಿನವರಾಗಿದ್ದಾರೆ. ಕಳೆದ ಐದು ದಶಕಗಳ ಅಭಿವೃದ್ಧಿಯ ಕಾರ್ಯಕ್ರಮಗಳು ಗ್ರಾಮೀಣ ಭಾಗದ ಸಮಸ್ಯೆಗಳನ್ನು ಸಂಪೂರ್ಣವಾಗಿ ನಿವಾರಿಸುವಲ್ಲಿ ಪರಿಣಾಮಕಾರಿಯಾಗಿಲ್ಲ.

ಬಡತನ, ನಿರುದ್ಯೋಗ, ಅನಾರೋಗ್ಯ ಮೂಲಭೂತ ಸೌಕರ್ಯಗಳ ಅಭಾವ, ಮುಂತಾದ ಸಮಸ್ಯೆಗಳು ಗ್ರಾಮೀಣ ಭಾರತ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಾಗಿವೆ. ಭಾರತವು ಕೃಷಿ ಪ್ರಧಾನ ದೇಶವಾಗಿದ್ದರೂ, ಸಂಪತ್ತು ಗ್ರಾಮೀಣ ಪ್ರದೇಶದಲ್ಲಿ ಸೃಷ್ಟಿಯಾಗುತ್ತಿದ್ದರೂ ಹಳ್ಳಿಗಳು ಉಪೇಕ್ಷೆಗೆ ಒಳಗಾಗಿವೆ. ಇಡೀ ದೇಶಕ್ಕೆ ಬೇಕಾದ ಕೃಷಿ ವಸ್ತುಗಳ ಉತ್ಪಾದನೆ ಮಾಡುವ ಗ್ರಾಮಕ್ಕೆ, ಗ್ರಾಮೀಣ ಜನಜೀವನಕ್ಕೆ ಪಾಧಾನ್ಯತೆ ಇಲ್ಲದಾಗಿದೆ. "ನೈಜವಾದ ಭಾರತವನ್ನು ಹಳ್ಳಿಯಲ್ಲಿ ಕಾಣಬಹುದು" ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹೇಳುತ್ತಿದ್ದರು. "ಹಳ್ಳಿಗಳ ಅಭಿವೃದ್ಧಿಯೇ ಭಾರತದ ಅಭಿವೃದ್ಧಿ, ಹಳ್ಳಿಗಳನ್ನು ಅಲಕ್ಷಿಸಿ ಭಾರತ ಅಭಿವೃದ್ಧಿಗೊಳ್ಳುವುದು ಸಾಧ್ಯವಿಲ್ಲ" ಎಂಬುದು ಗಾಂಧೀಜಿಯವರ ಅಭಿಮತವಾಗಿತ್ತು.

ಈ ಹಿಂದಿನ ಸರ್ಕಾರಗಳ ಆಡಳಿತದಲ್ಲಿ ಗ್ರಾಮೀಣ ಭಾರತದ ಅಭಿವೃದ್ಧಿಗೆ ಹತ್ತು-ಹಲವಾರು ಯೋಜನೆಗಳನ್ನು ನೀಡಿದ್ದರೂ ಅವುಗಳು ಅನುಷ್ಠಾನಗೊಳ್ಳುವಲ್ಲಿ ವಿಳಂಬ ಹಾಗೂ ಹಳ್ಳಿಯ ಜನರಿಗೆ ತಲುಪುವಲ್ಲಿ ವಿಫಲವಾಗುತ್ತಿರುವುದು ದುರದೃಷ್ಟಕರ. ಹಲವಾರು ಸಂದರ್ಭಗಳಲ್ಲಿ ಅನುಷ್ಠಾನಗೊಳ್ಳದೆ ಯೋಜನೆಯು ರದ್ದಾಗುವಂತಹದು ಹೆಚ್ಚಾಗುತ್ತಿದೆ. ಆಡಳಿತ ವರ್ಗದವರು, ಅಧಿಕಾರಿಗಳು, ಅರ್ಥಶಾಸ್ತ್ರಜ್ಞರು, ರಾಜಕಾರಣಿಗಳು ಎಲ್ಲರೂ ಹಳ್ಳಿಗಳ ಉದ್ಧಾರಕ್ಕಾಗಿ ಶ್ರಮಿಸಿದರೂ ತೃಪ್ತಿದಾಯಕ ಅಭಿವೃದ್ಧಿ ಕಂಡು ಬಂದಿರುವುದಿಲ್ಲ. ಹಳ್ಳಿಯಲ್ಲಿ ಸೃಷ್ಟಿಯಾಗುವ ಸಂಪತ್ತಿನ್ನು ಬಹುಭಾಗ ನಗರ ವಾಸಿಗಳ ಪಾಲಾಗುತ್ತಿದೆ. ಸರ್ಕಾರ ಅನೇಕ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಘೋಷಿಸುತ್ತಾ ಬಂದಿದೆ. ಆದರೆ ಫಲ ಮಾತ್ರ ಪರಿಣಾಮಕಾರಿಯಾಗಿಲ್ಲ. ಗ್ರಾಮೀಣಾಭಿವೃದ್ಧಿಗೆ ಸಾಕಷ್ಟು ಹಣವನ್ನು ಮೀಸಲಿರಿಸುತ್ತಿದೆಯಾದರೂ ಕಾರ್ಯಕ್ರಮಗಳು ಅನುಷ್ಠಾನಗೊಳಿಸುವ ಹಂತದಲ್ಲಿ ಸಂಪತ್ತು ಸೋರಿಕೆ ಹೆಚ್ಚುತ್ತಿದ್ದು ಹಳ್ಳಿಗಳು ಅಭಿವೃದ್ಧಿ ಆಗದೆ ಉಳಿದಿವೆ.

ಗ್ರಾಮೀಣ ಪ್ರದೇಶದ ಉತ್ಪಾದನ ಚಟುವಟಿಕೆಗಳ ಬೆಳವಣಿಗೆಯನ್ನು ಗ್ರಾಮೀಣಾಭಿವೃದ್ಧಿ ಎನ್ನುವರು. ಕೃಷಿ ಮತ್ತು ಕೃಷಿಯೇತರ ಉತ್ಪಾದನ ಚಟುವಟಿಕೆಯನ್ನು ಆರ್ಥಿಕ ದೃಷ್ಟಿಕೋನದಿಂದ ಅಭಿವೃದ್ಧಿ ಪಡಿಸುವುದನ್ನು ಗ್ರಾಮೀಣಾಭಿವೃದ್ಧಿ ಎಂದು ಕೆರಯುವರು. ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದರುವ ಬಡಜನರ ಜೀವನಮಟ್ಟವನ್ನು ಸುಧಾರಿಸುವುದು ಮತ್ತು ಅವರ ಅಭಿವೃದ್ಧಿ ಪ್ರಕ್ರಿಯೆಯನ್ನು ಸಂರಕ್ಷಣೆ ಮಾಡುವುದನ್ನು ಗ್ರಾಮೀಣಾಭಿವೃದ್ಧಿ ಎಂದು ಕರೆಯಲಾಗುತ್ತದೆ.

ಗ್ರಾಮೀಣಾಭಿವೃದ್ಧಿಯು ಕೃಷಿ ಬೆಳವಣಿಗೆಗೆ, ನೀರಾವರಿ, ಸಾರಿಗೆ, ಸಂಪರ್ಕಾಭಿವೃದ್ಧಿ, ಶಿಕ್ಷಣ, ಆರೋಗ್ಯ, ವಸತಿ, ಉದ್ಯೋಗ ತರಬೇತಿ, ಸಾಮಾಜಿಕ ಯೋಗಕ್ಷೇಮ ಇವೇ ಮುಂತಾದ ಚಟುವಟಿಕೆಯನ್ನು ಒಳಗೊಂಡಿರುವ ಒಂದು ವಿಸ್ತೃತ ಅಭಿವೃದ್ಧಿ ಕಾರ್ಯಕ್ರಮವಾಗಿದ್ದು, ಗ್ರಾಮೀಣ ಜೀವನದ ಎಲ್ಲಾ ಆಯಾಮಗಳನ್ನು ಸ್ಪರ್ಶಿಸುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಕೃಷಿಕರು, ಕಾರ್ಮಿಕರು ದುರ್ಬಲವರ್ಗದವರು, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಾಗೂ ಬಡತನ ರೇಖೆಗಿಂತ ಕೆಳಗೆ ಜೀವಿಸುವ ಎಲ್ಲಾ ಜನರ ಜೀವನ ಮಟ್ಟದ ಸುಧಾರಣೆಯನ್ನು ಒಟ್ಟಾಗಿ ಗ್ರಾಮೀಣಾಭಿವೃದ್ಧಿ ಎಂದು ವ್ಯಾಖ್ಯಾನಿಸಬಹುದು.

ಭಾರತದಲ್ಲಿ ಬಡತನದ ನಿವಾರಣೆಗಾಗಿ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗಾಗಿ, ಸದೃಡ ದೇಶದ ನಿರ್ಮಾಣಕ್ಕಾಗಿ ಹಲವು ಪಂಚ ವಾರ್ಷಿಕ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರು, ಹಲವಾರು ಕಾರಣಗಳಿಂದ ಅದು ಸಂಪೂರ್ಣ ಯಶಸ್ಸು ಹೊಂದಲಿಲ್ಲ. ಆದರೂ ಜನರ ಜೀವನದಲ್ಲಿ ಮತ್ತು ಸಮಾಜದಲ್ಲಿ ಬದಲಾವಣೆ ತರುವ ಉದ್ದೇಶದಿಂದ ಕೆಲವು ಸಮಾನ ಮನಸ್ಕ ವ್ಯಕ್ತಿಗಳ ಸಂಘಗಳು ಮತ್ತು ಸಂಸ್ಥೆಗಳು ಹುಟ್ಟಿಕೊಂಡವು. ಈ ಸಂಸ್ಥೆಗಳು ಸರ್ಕಾರದ ಹಸ್ತಕ್ಷೇಪವಿಲ್ಲದೆ ಕಾರ್ಯವೆಸಗುತ್ತದೆ. ಈ ಸರ್ಕಾರೇತರ ಸಂಸ್ಥೆಗಳು ಬಡಜನರ, ಅಶಕ್ತರ, ವೃದ್ಧರ, ರೋಗಿಗಳ ಏಳಿಗೆಗಾಗಿ ಶ್ರಮಿಸುತ್ತಿವೆ. ಅಲ್ಲದೆ ಈ ಸರ್ಕಾರೇತರ ಸಂಸ್ಥೆಗಳು ಜನರನ್ನು ಸಂಘಟಿಸಿ ತಮ್ಮ ಅಗತ್ಯತೆಗಳನ್ನು ಗುರುತಿಸಿ, ಅವುಗಳಿಗೆ ತಾವೇ ಪರಿಹಾರ ಕಂಡುಕೊಳ್ಳುವಂತೆ ಪ್ರೇರೇಪಿಸುತ್ತದೆ.

ಸರ್ಕಾರೇತರ ಸಂಸ್ಥೆಗಳು ಸರ್ವೇ ಸಾಮಾನ್ಯವಾಗಿ ಸೇವಾಮನೋಭಾವದಿಂದ ಸ್ಥಾಪನೆಗೊಂಡಿರುತ್ತದೆ. ಹೀಗಾಗಿ ಅವುಗಳನ್ನು ಸ್ವಯಂ ಸೇವಾ ಸಂಸ್ಥೆಗಳು ಅಥವಾ ಮೂರನೇ ಕ್ಷೇತ್ರದ ಸಂಸ್ಥೆಗಳೆಂದು ಕರೆಯುವರು. ಮೊದಲೆರಡು ಸಂಸ್ಥೆಗಳೆಂದರೆ ಖಾಸಗೀ ಉದ್ಯಮ ಮತ್ತು ಸಾರ್ವಜನಿಕ ಉದ್ಯಮಗಳಾಗಿವೆ. ಈ ಸ್ವಯಂ ಸೇವಾ ಸಂಸ್ಥೆಗಳಿಗೆ ಲಾಭಗಳಿಕೆಯ ಉದ್ದೇಶವಿರದು, ಹೀಗಾಗಿ ಅವುಗಳನ್ನು ಲಾಭರಹಿತ ಸಂಘಟನೆಗಳು ಎಂದು ಕರೆಯುವುದು ವಾಡಿಕೆಯಲ್ಲಿದೆ. ಶಿಕ್ಷಣ, ಆರೋಗ್ಯ ಸೇವೆಗಳು, ಕೃಷಿ, ಕೆರೆ ನಿರ್ವಹಣೆ, ಅಂಗ ಪರಿಮಿತರಿಗೆ, ವೃದ್ಧರಿಗೆ, ಅನಾಥ ಮಕ್ಕಳಿಗೆ, ಸಾಮಾಜಿಕ ಸಂಕಷ್ಟಕ್ಕೊಳಗಾದ ಮಹಿಳೆಯರಿಗೆ ವಸತಿ ಮತ್ತು ಶಿಕ್ಷಣ ಹಾಗೂ ಮನರಂಜನೆ ನೀಡುವ ಸಂಸ್ಥೆಗಳಾಗಿವೆ.

ವಿಶ್ವ ಸಂಸ್ಥೆಯ ಮಾಜಿ ಅಧ್ಯಕ್ಷ ಕೋಫಿ ಅನ್ನಾನ್ 21ನೇ ಶತಮಾನವನ್ನು ಸರ್ಕಾರೇತರ ಸಂಸ್ಥೆಗಳ ಯುಗ ಎಂದು ಬಣ್ಣಿಸಿದ್ದಾರೆ. (ಕೃಪೆ : ಯೋಜನಾ, ನವೆಂಬರ್ ೨೦೧೧, ಜೋಮಾನ್ ಮ್ಯಾಥ್ಯು, ಜೊಬೈ ವರ್ಗೀಸ್)

"ವಿಶ್ವ ಬ್ಯಾಂಕ್"ನ ವರದಿ ಪ್ರಕಾರ ಸರ್ಕಾರೇತರ ಸಂಸ್ಥೆಗಳಾಗಿದ್ದು ಖಾಸಗಿ ಸಂಸ್ಥೆಗಳು ಸಂಕಷ್ಟದಲ್ಲಿರುವವರಿಗೆ ಪರಿಹಾರ ದೊರಕಿಸುವ ಚಟುವಟಿಕೆಯಲ್ಲಿ ತೊಡಗಿರುತ್ತವೆ. ಅಲ್ಲದೆ ಬಡವರ ಹಿತರಕ್ಷಣೆ, ಪರಿಸರ ಕಾಳಜಿ, ಪ್ರಾಥಮಿಕ ಸಾಮಾಜಿಕ ಸೇವೆಗಳನ್ನು ಒದಗಿಸುವುದು ಇಲ್ಲವೆ ಸಮುದಾಯದ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವುದು ಅವುಗಳ ಕಾರ್ಯಗಳಾಗಿವೆ.

ವಾಸ್ತವವಾಗಿ ಸರ್ಕಾರೇತರ ಸಂಸ್ಥೆಗಳು ಸರ್ಕಾರದಿಂದ ಪ್ರತ್ಯೇಕಗೊಂಡು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದು ಸಮಾಜದ ಸೇವೆ ಮುಖ್ಯ ಉದ್ದೇಶವಾಗಿಟ್ಟುಕೊಂಡಿರುವ ಸಂಸ್ಥೆಗಳ ಲಾಭರಹಿತದ ಸೇವೆಯ ಬದ್ಧತೆ ಇರುವ ಸಂಸ್ಥೆಗಳಾಗಿವೆ. ಸಾರ್ವಜನಿಕ ಹಿತರಕ್ಷಣೆ, ಮಾನವ ಹಕ್ಕುಗಳ ರಕ್ಷಣೆ, ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವುದು ಇವುಗಳ ಮೂಲ ಉದ್ದೇಶಗಳಾಗಿವೆ.

ಕೆಲವು ಸಂದರ್ಭಗಳಲ್ಲಿ ಸರ್ಕಾರೇತರ ಸಂಸ್ಥೆಗಳು ಪೂರ್ಣ ಅಥವಾ ಭಾಗಶಃ ದೇಣಿಗೆಯನ್ನು ಸರ್ಕಾರದಿಂದ ಪಡೆದುಕೊಳ್ಳುತ್ತವೆ. ಸರ್ಕಾರೇತರ ಸಂಸ್ಥೆ ಎನ್ನಿಸಿಕೊಳ್ಳಲು ಸರ್ಕಾರಿ ಪ್ರತಿನಿಧಿಗಳನ್ನು ತನ್ನ ಸಂಸ್ಥೆಯ ಪ್ರತಿನಿಧಿತ್ವದಿಂದ ಅಥವಾ ಸದಸ್ಯತ್ವದಿಂದ ಹೊರಗಿರಿಸುತ್ತದೆ. ಹಾಗೆಯೇ ಸರ್ಕಾರೇತರ ಸಂಸ್ಥೆಗಳು ಎಂದಾಗ ಅವುಗಳು ಯಾವುದೇ ರಾಷ್ಟ್ರೀಯ ಇಲ್ಲವೇ ಅಂತರಾಷ್ಟ್ರೀಯ ಕಾನೂನುಗಳಿಗೆ ಅನುಗುಣವಾಗಿ ಕಾನೂನು ಪರಿಹಾರ ದೊರಕಿಸಿಕೊಡುವ ಸಂಸ್ಥೆಗಳಲ್ಲ ಎನ್ನುವುದು ಗಮನೀಯ.

ವಿಶ್ವ ಬ್ಯಾಂಕ್‌ನ ಪ್ರಕಾರ ಎರಡು ರೀತಿಯ ಸರ್ಕಾರೇತರ ಸಂಸ್ಥೆಗಳಿವೆ.

೧. ಕಾರ್ಯಾತ್ಮಕ ಸರ್ಕಾರೇತರ ಸಂಸ್ಥೆಗಳು

೨. ಸಲಹಾತ್ಮಕ ಸರ್ಕಾರೇತರ ಸಂಸ್ಥೆಗಳು

ಕಾರ್ಯಾತ್ಮಕ ಸರ್ಕಾರೇತರ ಸಂಸ್ಥೆಗಳು ರಾಷ್ಟ್ರೀಯ, ಅಂತರಾಷ್ಟ್ರೀಯ ಮತ್ತು ಸಮುದಾಯ ಆಧಾರಿತ ಸಂಘಟನೆಗಳೆಂದು ವರ್ಗೀಕರಿಸಬಹುದು. ಸಲಹಾತ್ಮಕ ಸರ್ಕಾರೇತರ ಸಂಸ್ಥೆಗಳನ್ನು ಅಂತರಾಷ್ಟ್ರೀಯ ಸಂಘಟನೆಗಳೆಂದು ಕರೆಯಲಾಗುತ್ತದೆ. ಅವುಗಳಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುವುದರ ಜೊತೆಗೆ ನೀತಿ ನಿರೂಪಣೆಗಳನ್ನು ರೂಪಿಸುವಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ಇವೆರಡರ ಪ್ರಮುಖ ಉದ್ದೇಶಗಳು ಅಭಿವೃದ್ಧಿ ಆಧಾರರಿತ ಯೋಜನೆಗಳನ್ನು ವಿನ್ಯಾಸಗೊಳಿಸಿ ಅವುಗಳನ್ನು ಅನುಷ್ಠಾನಗೊಳಿಸುವುದು.

ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನಲೆಯುಳ್ಳ ಹಾಗೂ ಸ್ವಸಹಾಯ ಮತ್ತು ಪರಸ್ಪರ ಸಹಾಯದ ಮೂಲಕ ಆರ್ಥಿಕ ಉನ್ನತಿಯನ್ನು ಸಾಧಿಸಿಕೊಳ್ಳುವ ಗುರಿಯನ್ನು ಹೊಂದಿರುವ ಜನರು ಸರ್ಕಾರೇತರ ಸಂಸ್ಥೆಯ ಸದಸ್ಯರು ಅಥವಾ ಫಲಾನುಭವಿಗಳು ಇದರ ಸದಸ್ಯರೆಲ್ಲರೂ ಮಹಿಳೆಯರಾಗಿರಬಹುದು ಅಥವಾ ಎಲ್ಲರೂ ಪುರುಷರಾಗಿರಬಹುದು ಅಥವಾ ಮಹಿಳೆಯರ ಮತ್ತು ಪುರುಷರ ಸದಸ್ಯತ್ವದಿಂದ ಕೂಡಿಕೊಂಡಿರಬಹುದು. ನಿರಂತರ ಉಳಿತಾಯ, ಆಂತರಿಕ ಸಾಲ, ಬಾಹ್ಯ ಸಾಲ, ವೈಯುಕ್ತಿಕ ಮತ್ತು ಗುಂಪು, ಆರ್ಥಿಕ ಚಟುವಟಿಕೆಗಳ ನಿರ್ವಹಣೆ ಮೊದಲಾದವುಗಳ ಮೂಲಕ ಬಡತನ ರೇಖೆಯಿಂದ ತಾವು ಮೇಲೆ ಬರುವುದು ಮತ್ತು ಇತರರನ್ನು ತಮ್ಮೊಂದಿಗೆ ತರುವುದು ಈ ಸದಸ್ಯರ ಧ್ಯೇಯವಾಗಿರುತ್ತದೆ. ಉಳಿತಾಯಗಳನ್ನು ನಿರಂತರವಾಗಿ ಕೂಡಿಸಲು, ಒಗ್ಗಟ್ಟನ್ನು ಪ್ರದರ್ಶಿಸಲು ಮತ್ತು ಗುಂಪು ಚಟುವಟಿಕೆಗಳನ್ನು ಬಲಪಡಿಸಲು ವಾರದ ಅಥವಾ ಮಾಸಿಕ ಸಭೆಗಳು ಮುಖ್ಯವಾಗಿರುತ್ತದೆ. ಸರ್ಕಾರೇತರ ಸಂಸ್ಥೆಗಳು ಸ್ವ ಸಹಾಯ ಗುಂಪುಗಳ ರಚನೆಯನ್ನು ಮಾಡಿಕೊಂಡು, ಸ್ವ ಸಹಾಯದ ಮಹತ್ವದ ಬಗ್ಗೆ ತಿಳುವಳಿಕೆ ನೀಡಿ, ಗ್ರಾಮೀಣ ಜನರಲ್ಲಿ ಅಭಿವೃದ್ಧಿಯ ಜಾಗೃತಿ ಮೂಡಿಸುತ್ತಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ, ಕೆನರಾ ಅಭಿವೃದ್ಧಿ ಮತ್ತು ಶಾಂತಿ ಸಂಸ್ಥೆ, ಮೈರಾಡಾ, ನಬಾರ್ಡ್ ಸಂಸ್ಥೆಗಳ ನುರಿತ ಅಧಿಕಾರಿಗಳು ಮತ್ತು ಕೆಲವು ಬ್ಯಾಂಕುಗಳ ಸಿಬ್ಬಂಧಿಗಳು ಜನರ ಮನಸ್ಸನ್ನು ಗೆದ್ದು ಅವರ ಮನವೊಲಿಸಿ ಸ್ವ ಸಹಾಯ ಗುಂಪುಗಳನ್ನು ರಚಿಸುವುದರ ಮೂಲಕ ಗ್ರಾಮೀಣಾಭಿವೃದ್ಧಿಯನ್ನು ಸಾಧಿಸುತ್ತಿದೆ. ಸಾರ್ವಕಾಲಿಕವಾಗಿ ಸ್ವ ಸಹಾಯ ಗುಂಪುಗಳ ರಚನೆ ಮತ್ತು ಅವುಗಳ ಅಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ ಅವರ್ಣನೀಯವಾದುದು.

ಗ್ರಾಮೀಣ ಜನರಲ್ಲಿ ಉಳಿತಾಯ ಪ್ರವೃತ್ತಿ ಮೂಡಿಸುವಿಕೆಯು ಸರ್ಕಾರೇತರ ಸಂಸ್ಥೆಯ ಒಂದು ಮುಖ್ಯ ಕಾರ್ಯ. ಫಲಾನುಭವಿಗಳು ತಮ್ಮ ಉಳಿತಾಯದ ಹಣವನ್ನು ಕೂಡಿಸುವ ಮೂಲಕ ಮುಂದಿನ ಅನುಕೂಲತೆಗಳನ್ನು ಪಡೆಯುವುದಕ್ಕಾಗಿ ಸ್ವ ಸಹಾಯ ಗುಂಪುಗಳನ್ನು ರಚಿಸಿಕೊಳ್ಳುತ್ತಾರೆ. ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ಯಶಸ್ವಿಯಾಗುತ್ತಾರೆ. ಆದುದರಿಂದ ಈ ಸಂಶೋಧನೆಯಲ್ಲಿ ಸರ್ಕಾರೇತರ ಸಂಸ್ಥೆಗಳು ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಅಧ್ಯಯನ ನಡೆಸಲು ಉದ್ದೇಶಿಸಲಾಗಿದೆ.

೧.೨ ಸಮಸ್ಯೀಕರಣ

ಗ್ರಾಮೀಣಾಭಿವೃದ್ಧಿಗೆ ಗ್ರಾಮೀಣ ಪ್ರದೇಶದಲ್ಲಿ ಹಲವಾರು ಯೋಜನೆಗಳನ್ನು ಜಾರಿಗೆ ತಂದರೂ ಅದು ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ಬರಲು ಸಾಧ್ಯವಾಗಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಶಿಕ್ಷಣ, ಉತ್ತಮ ಆರೋಗ್ಯ ಮುಂತಾದವುಗಳ ಅಭಾವ ಕಂಡು ಬರುತ್ತದೆ. ಸರ್ಕಾರದ ಯೋಜನೆಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಸರ್ಕಾರದ ಹಾಗೂ ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಪ್ರದೇಶದ ಅಭಿವೃದ್ಧಿಯಲ್ಲಿ ತೊಡಗಿದ್ದರೂ ಜನರ ಅಗತ್ಯಗಳನ್ನು ಸರಿಯಾದ ರೀತಿಯಲ್ಲಿ ಈಡೇರಿಸಲು ಸಾಧ್ಯವಾಗುತ್ತಿಲ್ಲ.

ಗ್ರಾಮೀಣಾಭಿವೃದ್ಧಿ ಹಾಗೂ ಸರ್ಕಾರೇತರ ಸಂಸ್ಥೆಗಳ ಬಗ್ಗೆ ಹಲವಾರು ಅಧ್ಯಯನಗಳು ನಡೆದಿದ್ದರೂ ಕೇರಳದ ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ಸರ್ಕಾರೇತರ ಸಂಸ್ಥೆಗಳ ಬಗ್ಗೆ ಅಧ್ಯಯನ ನಡೆದಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಮಂಜೇಶ್ವರ ತಾಲೂಕಿನ ಗ್ರಾಮೀಣಾಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳು ಕೈಗೆತ್ತಿಕ್ಕೊಂಡ ವಿವಿಧ ಕಾರ್ಯಕ್ರಮಗಳು, ಸರ್ಕಾರೇತರ ಸಂಸ್ಥೆಗಳ ಫಲಾನುಭವಿಗಳು, ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು, ಆರ್ಥಿಕ ಅಭಿವೃದ್ಧಿಗೆ ಹಣಕಾಸಿನ ನೆರವು, ಈ ತರದ ಸಂಸ್ಥೆಗಳ ಯೋಜನೆಗಳು ಸಾಕಾರಗೊಳ್ಳುವಿಕೆಯ ಮೇಲೆ ಪ್ರಭಾವ ಬೀರುವ ವಿಷಯಗಳನ್ನು ಒಳಗೊಳ್ಳಿಸಲಾಗಿದೆ.

೧.೩ ಅಧ್ಯಯನದ ಉದ್ದೇಶಗಳು

ಕೇರಳದ ಕಾಸರಗೋಡು ಜಿಲ್ಲೆಯ ಗಡಿನಾಡಿನ ತಾಲೂಕಾದ ಮಂಜೇಶ್ವರದಲ್ಲಿ ಕೈಗೊಂಡ "ಗ್ರಾಮೀಣಾಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ" ಎಂಬ ಶೀರ್ಷಿಕೆಯ ಈ ಸಂಶೋಧನೆಯಲ್ಲಿ ಈ ಕೆಳಗಿನ ಉದ್ದೇಶಗಳು ಒಳಗೊಂಡಿವೆ.

೧. ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪ್ರಯೋಜನವನ್ನು ಪಡೆಯುವ ಫಲಾನುಭವಿಗಳ ಸಾಮಾಜಿಕ ಸ್ಥಾನಮಾನವನ್ನು ಅಧ್ಯಯನ ಮಾಡುವುದು.

೨. ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪ್ರಯೋಜನವನ್ನು ಪಡೆಯುವ ಫಲಾನುಭವಿಗಳ ಆರ್ಥಿಕ ಸ್ಥಾನವನ್ನು ವಿಶ್ಲೇಷಣೆ ಮಾಡುವುದು.

೩. ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ (ಶಿಕ್ಷಣ, ಕೃಷಿ, ಮಹಿಳೆಯರ) ಅಭಿವೃದ್ಧಿಗೆ ನೀಡಿರುವ ಕೊಡುಗೆಗಳ ಕುರಿತು ಅಧ್ಯಯನ ಮಾಡುವುದು.

೧.೪ ಅಧ್ಯಯನದ ಊಹೆಗಳು

೧. ಮಂಜೇಶ್ವರ ತಾಲೂಕಿನಲ್ಲಿ ಕಾರ್ಯಪ್ರವೃತ್ತವಾಗಿರುವ ಸರ್ಕಾರೇತರ ಸಂಸ್ಥೆಗಳು ಉತ್ತಮ ಸ್ಥಿತಿಯಲ್ಲಿ ಸಮಾಜಸೇವೆ ಮಾಡುತ್ತಿವೆ.

೨. ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಫಲಾನುಭವಿಗಳಿಗೆ ಈ ಸಂಸ್ಥೆಗಳು ಪ್ರಯೋಜನಕಾರಿಯಾಗಿದೆ.

೩. ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ, ಕೃಷಿ, ಮತ್ತು ಮಹಿಳೆಯರ ಅಭಿವೃದ್ಧಿಗೆ ಶ್ರಮಿಸುತ್ತವೆ.

೧.೫ ಅಧ್ಯಯನದ ಮಹತ್ವ

ಕೇರಳದ ಅತೀ ಉತ್ತರದ ತಾಲೂಕದ ಮಂಜೇಶ್ವರ ಕೇರಳ ಮತ್ತು ಕರ್ನಾಟಕದ ಗಡಿನಾಡಿನ ತಾಲೂಕು. ಕನ್ನಡಿಗರು ಅತೀ ಹೆಚ್ಚು ಇರುವ ಆದರೆ ಮಲಯಾಳಂ ಆಡಳಿತ ಭಾಷೆಯಾಗಿರುವ ರಾಜ್ಯದ ಒಂದು ತಾಲೂಕು. ಈ ತಾಲೂಕು ಅತ್ತ ಕೇರಳದಿಂದಲೂ ಇತ್ತ ಕರ್ನಾಟಕದಿಂದಲೂ ಆರೈಕೆಯಿಲ್ಲದೆ ಕಡೆಗಣಿಸಲ್ಪಟ್ಟ ಪ್ರದೇಶವಾಗಿದೆ. ಕೇರಳದ ಕಾಸರಗೋಡಿನ ಇತರ ಮೂರು ತಾಲೂಕುಗಳಿಗೆ ಹೋಲಿಸುವಾಗ ಅಭಿವೃದ್ಧಿ ಕುಂಠಿತಗೊಂಡಿರುವ ತಾಲೂಕು ಮಂಜೇಶ್ವರ. ಅದರಲ್ಲೂ ಗ್ರಾಮೀಣ ಪ್ರದೇಶಗಳು ಉಪೇಕ್ಷೆಗೊಳಗಾಗಿದೆ. ಮಂಜೇಶ್ವರ ಕೇರಳದ ಭಾಗವಾದುದರಿಂದ ಕರ್ನಾಟಕದಿಂದಲೂ ಆರ್ಥಿಕ ಅಭಿವೃದ್ಧಿಗೆ ಗ್ರಾಮೀಣ ಜನರ ಏಳಿಗೆಗೆ ಯಾವುದೇ ಅನುದಾನ ಇಲ್ಲದಾಗಿದೆ. ಈ ಪರಿಸ್ಥಿತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಜನರಿಗೆ ಶಿಕ್ಷಣದ ಅಗತ್ಯತೆಯ ಬಗ್ಗೆ ಅರಿವು ಮೂಡಿಸಿ, ಗ್ರಾಮೀಣಾ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರುವ, ಅದೇ ರೀತಿ ಗ್ರಾಮೀಣ ಪ್ರದೇಶದಲ್ಲಿ ಜನರ ಆರೋಗ್ಯ ಪರಿಸರದ ನೈರ್ಮಲ್ಯದ ಬಗ್ಗೆ ಗ್ರಾಮೀಣ ಜನತೆಗೆ ಹಾಗೂ ಮಾನವ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಬಳಕೆಯ ಅರಿವು ಮೂಡಿಸುವುದು ಹಾಗೂ ಇವುಗಳ ಮುಖಾಂತರ ಗ್ರಾಮೀಣ ಪ್ರದೇಶದಲ್ಲಿ ನೆಲೆ ನಿಂತಿರುವ ಕಡುದಾರಿದ್ರ್ಯವನ್ನು ನಿರ್ಮೂಲನೆ ಮಾಡುವುದು ಮತ್ತು ಜನರಿಗೆ ಅದರ ಬಗ್ಗೆ ತಿಳುವಳಿಕೆ ನೀಡುವ ಮಹತ್ವವನ್ನು ಈ ಅಧ್ಯಯನವು ಒಳಗೊಂಡಿದೆ.

೧.೬ ಅಧ್ಯಯನದ ವಿಧಾನ

೧. ಈ ಅಧ್ಯಯವನ್ನು ಸೀಮಿತ ಕಾಲಾವಧಿಗೆ ಸಂಬಂಧ ಪಟ್ಟಂತೆ ನಿರ್ದಿಷ್ಟ ಪ್ರದೇಶದಲ್ಲಿ ಸರಕಾರೇತರ ಸಂಸ್ಥೆಗಳು ಗ್ರಾಮೀಣಾಭಿವೃದ್ಧಿಯನ್ನು ಸಾಧಿಸಲು ನೀಡಿದ ಕೊಡುಗೆಯನ್ನು ಕಂಡುಕೊಳ್ಳಲು, ೫

ವರ್ಷಗಳಲ್ಲಿ ಧನಾತ್ಮಕ ಬದಲಾವಣೆಯನ್ನು ಪ್ರಮಾಣಾತ್ಮವಾಗಿ ಹಾಗೂ ಗುಣಾತ್ಮಕವಾಗಿ ಸಂಖ್ಯೆಗಳಲ್ಲಿ ಮತ್ತು ಅಧ್ಯಯನ ಮಾಡುವುದು ಈ ಉದ್ದೇಶಕ್ಕಾಗಿ ಪ್ರಾಥಮಿಕ ಮಾಹಿತಿ ಸಂಗ್ರಹದ ಮುಖಾಂತರ ವಿಷಯ ಕ್ರೋಢೀಕರಿಸಲಾಗಿದೆ.

೨. ಅನುಷಂಗಿಕ ಅಥವಾ ಸೈದ್ಧಾಂತಿಕ ಮಾಹಿತಿ ಸಂಗ್ರಹದ ಮೂಲಕ ಸರ್ಕಾರೇತರ ಸಂಸ್ಥೆಗಳ ಕಾರ್ಯವಿಧಾನ, ಬೆಳವಣಿಗೆ ಮತ್ತು ಯೋಜನೆಗಳನ್ನು ತಿಳಿಯಪಡಿಸುವುದು.

೩. ಮಂಜೇಶ್ವರ ತಾಲೂಕಿನ ಒಟ್ಟು ೫ ಪಂಚಾಯತುಗಳಲ್ಲಿ ಕಳೆದ ೫ ವರ್ಷಗಳಿಂದ ಅಸ್ತಿತ್ವದಲ್ಲಿರುವ ನೋಂದಾಯಿತ ಮತ್ತು ನೋಂದಾಯಿತವಲ್ಲದ ಸರ್ಕಾರೇತರ ಸಂಸ್ಥೆಗಳ ಒಟ್ಟು ೮೦ ಮಂದಿ ಸದಸ್ಯರಿಂದ ನಿಗದಿತ ಪ್ರಶ್ನಾವಳಿಗಳ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಿ ತದನಂತರ ಅವುಗಳನ್ನು ವರ್ಗೀಕರಿಸಿ ವಿವಿಧ ಕೋಷ್ಟಕಗಳ ಮೂಲಕ ವಿಶ್ಲೇಷಣೆ ಒಳಪಡಿಸಿ ನಿರ್ದಿಷ್ಠ ವ್ಯಾಖ್ಯಾನಕ್ಕೆ ಒಳಪಡಿಸುವುದು.

೧.೭ ಅಧ್ಯಯನದ ವ್ಯಾಪ್ತಿ

೧. ಈ ಅಧ್ಯಯನವು ಮಂಜೇಶ್ವರ ತಾಲೂಕಿನ ಒಟ್ಟು ೮ ಪಂಚಾಯತ್‌ಗಳಲ್ಲಿ ಅತೀ ಹಿಂದುಳಿದ ೫ ಪಂಚಾಯತ್‌ಗಳಿಗೆ ಸೀಮಿತವಾಗಿರುತ್ತದೆ.

೨. ಈ ಅಧ್ಯಯನದಲ್ಲಿ ನೋಂದಾಯಿತ ಮತ್ತು ನೋಂದಾಯಿತವಲ್ಲದ ಸರ್ಕಾರೇತರ ಸಂಸ್ಥೆಗಳನ್ನು ಒಳಪಡಿಸಲಾಗಿದೆ.

೩. ಈ ಅಧ್ಯಯನದಲ್ಲಿ ಫಲಾನುಭವಿಗಳ ಆರ್ಥಿಕ, ಸಾಮಾಜಿಕ ಶೈಕ್ಷಣಿಕ ವಿಷಯದಲ್ಲಿ ಸರ್ಕಾರೇತರ ಸಂಸ್ಥೆಗಳ ಕೊಡುಗೆಗಳಿಗೆ ಸೀಮಿತಗೊಳಿಸಲಾಗಿದೆ.

೧.೮ ಅಧ್ಯಯನದ ಇತಿಮಿತಿಗಳು

೧. **"ಗ್ರಾಮೀಣಾಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ"** ಎಂಬ ಅಧ್ಯಯನದ ವ್ಯಾಪ್ತಿಯನ್ನು ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲೂಕಿನ ಗ್ರಾಮೀಣ ಪ್ರದೇಶಗಳಿಗೆ ಸೀಮಿತಗೊಳಿಸಲಾಗಿದೆ.

೨. ಈ ಅಧ್ಯಯನದಲ್ಲಿ ಗ್ರಾಮೀಣ ಪ್ರದೇಶದ ಸಮಸ್ಯೆಗಳನ್ನು ಅಧ್ಯಯನ ಮಾಡಲು ಸರ್ಕಾರೇತರ ಸಂಸ್ಥೆಗಳ ಫಲಾನುಭವಿಗಳ ಅಂಕಿ ಅಂಶಗಳನ್ನು ಮಾತ್ರ ಉಪಯೋಗಿಸಲಾಗಿದೆ.

೩. ಈ ಅಧ್ಯಯನವನ್ನು ಮಂಜೇಶ್ವರ ತಾಲೂಕಿನ ಕೆಲವು ಸರ್ಕಾರೇತರ ಸಂಸ್ಥೆಗಳಿಗೆ ಸೀಮಿತಗೊಳಿಸಲಾಗಿದೆ.

೪. ಅಧ್ಯಯನದ ನಿಖರತೆಗಾಗಿ ತಾಲೂಕಿನ ಎಲ್ಲಾ ಸರ್ಕಾರೇತರ ಸಂಸ್ಥೆಗಳನ್ನು ಅಧ್ಯಯನದಲ್ಲಿ ಸೇರಿಸದೆ ಆಯ್ದ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

೧.೯ ಸಾಹಿತ್ಯ ಸಮೀಕ್ಷೆ

ಸತೀಶ ಎ : ಇವರ ಅಧ್ಯಯನದ ಪ್ರಕಾರ ಜನರ ಬದುಕಿನಲ್ಲಿ ಮತ್ತು ಸಮಾಜದಲ್ಲಿ ಪರಿವರ್ತನೆ ತರುವ ಉದ್ದೇಶದಿಂದ ಕೆಲವು ಸಮಾನ ಮನಸ್ಕ ವ್ಯಕ್ತಿಗಳು ಅಥವಾ ಸ್ವಯಂ ಸೇವಾ ಸಂಸ್ಥೆಗಳು ಹುಟ್ಟಿಕೊಂಡಿದ್ದು ಗ್ರಾಮೀಣ ಹಿಂದುಳಿದ ಜನರ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಈ ಸರ್ಕಾರೇತರ ಸಂಸ್ಥೆಗಳು ಸೃಷ್ಟಿಯ ಉದ್ದೇಶ ಗ್ರಾಮೀಣ ಹಿಂದುಳಿದ ಜನರ ಅಭಿವೃದ್ಧಿ. ಈ ಸರ್ಕಾರೇತರ ಸಂಸ್ಥೆಗಳು ಜನರನ್ನು ಸಂಘಟಿಸಿ ತಮ್ಮ ಅಗತ್ಯತೆಗಳನ್ನು ಗುರುತಿಸಿ, ಅವುಗಳಿಗೆ ತಾವೇ ಪರಿಹಾರ ಕಂಡುಕೊಳ್ಳುವಂತೆ ಪ್ರೇರೇಪಿಸುತ್ತವೆ. ಎಂಬುದನ್ನು ಈ ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ. ಸರ್ಕಾರವು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಸಮಸ್ಯೆಗಳ ನಿವಾರಣೆಯಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ ಎಂದು ತಿಳಿಯಲಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಮಂಜೇಶ್ವರ ತಾಲೂಕಿನಲ್ಲಿರುವ ಗ್ರಾಮೀಣ ಪ್ರದೇಶದ ಸರ್ಕಾರೇತರ ಸಂಸ್ಥೆಗಳ ಮತ್ತು ಫಲಾನುಭವಿಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲಾಗುವುದು.

ಚೇತನ್ : ಇವರ ಅಧ್ಯಯನದ ಪ್ರಕಾರ ಅತೀ ಹೆಚ್ಚು ಫಲಾನುಭವಿಗಳು ಸರ್ಕಾರೇತರ ಸಂಸ್ಥೆಗಳ ಸದಸ್ಯರಾಗಿದ್ದು ತಮ್ಮ ವೈಯುಕ್ತಿಕ ಆಸಕ್ತಿ ಮತ್ತು ಅಭಿವೃದ್ಧಿಯನ್ನು ಹೊಂದುವ ಉದ್ದೇಶದಿಂದ ಫಲಾನುಭವಿಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ವೈಯುಕ್ತಿಕ ಮಟ್ಟದಲ್ಲಿ ಅಭಿವೃದ್ಧಿಯನ್ನು ಸಾಧಿಸುತ್ತಿದ್ದಾರೆ. ಜನರಿಗೆ ಸರ್ಕಾರೇತರ ಸಂಸ್ಥೆಗಳ ಬಗ್ಗೆ ಅರಿವು ಮೂಡಿಸಲಾರಂಭಿಸಿದೆ. ಸರ್ಕಾರೇತರ ಸಂಸ್ಥೆಗಳು ಅಭಿವೃದ್ಧಿಯನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಈ ಅಧ್ಯಯನದ ಮೂಲಕ ತಿಳಿಯಲಾಗಿದೆ. ಅದಲ್ಲದೆ ಸರ್ಕಾರೇತರ ಸಂಸ್ಥೆಗಳು ಹಮ್ಮಿಕೊಂಡಿರುವ ಸ್ವ–ಉದ್ಯೋಗ ಅವಕಾಶಗಳು, ಶಿಕ್ಷಣ, ಕೃಷಿ ಮತ್ತು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಸಾಕಷ್ಟು ಮಟ್ಟಿಗೆ ಯಶಸ್ವಿಯಾಗಿರುವುದನ್ನು ಈ ಅಧ್ಯಯನದಿಂದ ತಿಳಿಯಬಹುದು. ಪ್ರಸ್ತುತ ಅಧ್ಯಯನದಲ್ಲಿ ಮಂಜೇಶ್ವರ ತಾಲೂಕಿನಲ್ಲಿರುವ ಗ್ರಾಮೀಣ ಪ್ರದೇಶದ ಸರ್ಕಾರೇತರ ಸಂಸ್ಥೆಗಳ ಮತ್ತು ಫಲಾನುಭವಿಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲಾಗುವುದು.

ಸ್ಟಾಫನ್ : ಇವರ ಅಧ್ಯಯನದ ಪ್ರಕಾರ ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಪ್ರದೇಶದ ಮೂಲ ಸೌಕರ್ಯದ ಅಭಿವೃದ್ಧಿಗೆ ಮತ್ತು ಗ್ರಾಮೀಣ ಜನಜೀವನದ ಅಭಿವೃದ್ಧಿ ಕೊಡುಗೆಯನ್ನು ನೀಡಿವೆ. ಅದರೊಂದಿಗೆ ಕೃಷಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಮಾಹಿತಿ ಮತ್ತು ತರಬೇತಿಯನ್ನು ನೀಡುವುದರಿಂದ ಕೃಷಿಕ್ಷೇತ್ರದಲ್ಲಿ ಗಣನೀಯ ಅಭಿವೃದ್ಧಿ ಸಾಧ್ಯವೆಂದು, ಸರ್ಕಾರೇತರ ಸಂಸ್ಥೆಗಳು ಜನರ ಮತ್ತು ಸರಕಾರದ ಮಧ್ಯೆ ನಿಂತು ಸವಲತ್ತುಗಳ ಬಗ್ಗೆ ಸಲಹೆಗಳನ್ನು ನೀಡಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಕೊಡುಗೆಯನ್ನು ನೀಡುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ಮಂಜೇಶ್ವರ ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿಗೆ ಕೊಡುಗೆ ನೀಡುವ ಸರ್ಕಾರೇತರ ಸಂಸ್ಥೆಗಳ ಬಗ್ಗೆ ಅಧ್ಯಯನ ನಡೆಸಲಾಗುವುದು.

ಜೋಯನ್ ಎಂ.ಜಿ. : ಇವರ ಅಧ್ಯಯನದ ಪ್ರಕಾರ ಸರ್ಕಾರೇತರ ಸಂಸ್ಥೆಗಳು ಸಮಯಕ್ಕೆ ಮತ್ತು ಸಂದರ್ಭಕ್ಕೆ ಅನುಸಾರವಾಗಿ ಬದಲಾಯಿಸಬಲ್ಲ ತನ್ನದೇ ಆದ ದೃಷ್ಟಿಕೋನವನ್ನು ಹೊಂದಿದ್ದು ತನ್ನ ಉದ್ದೇಶವನ್ನು ಈಡೇರಿಸುತ್ತದೆ. ಇವರ ಪ್ರಕಾರ ಸರ್ಕಾರೇತರ ಸಂಸ್ಥೆಗಳು ಜನರೊಂದಿಗೆ ಅದರ ಉದ್ದೇಶದ

ಬಗ್ಗೆ ಚರ್ಚಿಸುವುದರಿಂದ ಉತ್ತಮ ಫಲಿತಾಂಶ ಸಿಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಅಭಿವೃದ್ಧಿಗೆ ನೀಡಿದ ಕೊಡುಗೆಯ ಬಗ್ಗೆ ವಿಶ್ಲೇಷಣೆ ನಡೆಯಲಿರುವುದು.

ದಿನಾಂಕ ೧೬ ಎಪ್ರಿಲ್ ೨೦೧೬ ಹಿಂದು ದಿನಪತ್ರಿಕೆಯಲ್ಲಿ ಪ್ರಕಟವಾದಂತೆ ಕೇರಳದ ಕಾಸರಗೋಡು ಜಿಲ್ಲೆಯ ಸುಮಾರು ೯ ಗ್ರಾಮಗಳಲ್ಲಿ ವಿಷಕಾರಿ ಎಂಡೋಸಲ್ಫಾನ್ ಸಿಂಪಡಿಸುವಿಕೆಯ ಕಾರಣದಿಂದಾಗಿ ಈ ಪ್ರದೇಶದಲ್ಲಿ ಇಂದಿಗೂ ಸಾವಿರಾರು ಜನರು ವಿವಿಧ ರೋಗಗಳಿಗೆ ತುತ್ತಾಗಿದ್ದಾರೆ. ಪ್ಲಾಂಟೇಶನ್ ಕಾರ್ಪೊರೇಶನ್ ಆಫ್ ಕೇರಳ ಎಂಬ ಸಂಸ್ಥೆಯು ಈ ವಿಷಕಾರಿ ಎಂಡೋಸಲ್ಫಾನ್ ಬೆಳೆದ ಗೇರು ಮರಕ್ಕೆ ಸಿಂಪಡಿಸಿದ ಕಾರಣದಿಂದ ಜನರು ರೋಗ ಪೀಡಿತರಾಗಿದ್ದಾರೆ ಎಂಬುದನ್ನು ಮನಗಂಡು ಕೇರಳ ಸರಕಾರ ೨೦೧೧ರಲ್ಲಿ ಎಂಡೋಸಲ್ಫಾನ್ ಸಿಂಪಡಿಸುವಿಕೆಯನ್ನು ನಿಷೇಧಿಸಿದೆ. ಕರ್ನಾಟಕದಲ್ಲೂ ಇದರ ದುಷ್ಪರಿಣಾಮ ಕಂಡುಬಂದಿದ್ದು ಕೊಕ್ಕಡ ಮತ್ತು ಕ್ಯೊಲದಲ್ಲಿ ಎಂಡೋಸಲ್ಫಾನ್ ಪೀಡಿತರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಡೇ ಕೇರ್ ಸೆಂಟರನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಪ್ರಾರಂಭಿಸಿದೆ. ಕೇರಳ ಮತ್ತು ಕರ್ನಾಟಕ ಸರ್ಕಾರವು ಎಂಡೋಸಲ್ಫಾನ್ ಪೀಡಿತರ ಪುನರ್ವಸತಿಗೆ ಸರ್ಕಾರೇತರ ಸಂಸ್ಥೆಗಳ ಮುಖಾಂತರ ಅನುದಾನವನ್ನು ನೀಡಿದೆ.

ಅಧ್ಯಯನದ ರೂಪೀಕರಣ

ಅಧ್ಯಾಯ ೧ : ಅಧ್ಯಯನದ ಸ್ವರೂಪ ಮತ್ತು ಉದ್ದೇಶ

೧.೧ ಪ್ರವೇಶ

೧.೨ ಸಮಸ್ಯೀಕರಣ

೧.೩ ಅಧ್ಯಯನದ ಉದ್ದೇಶಗಳು

೧.೪ ಅಧ್ಯಯನದ ಊಹೆಗಳು

೧.೫ ಅಧ್ಯಯನದ ಮಹತ್ವ

೧.೬ ಅಧ್ಯಯನದ ವಿಧಾನಗಳು

೧.೭ ಅಧ್ಯಯನದ ವ್ಯಾಪ್ತಿ

೧.೮ ಆಧ್ಯಯನದ ಇತಿಮಿತಿಗಳು

೧.೯ ಸಾಹಿತ್ಯ ಸಮೀಕ್ಷೆ

ಅಧ್ಯಾಯ ೨ : ಗ್ರಾಮೀಣ ಅಭಿವೃದ್ಧಿ ಮತ್ತು ಸರ್ಕಾರೇತರ ಸಂಸ್ಥೆಗಳ ನಿರೂಪಣೆ

೨.೧ ಗ್ರಾಮೀಣಾಭಿವೃದ್ಧಿಯ ಬಗ್ಗೆ ಸೈದ್ಧಾಂತಿ ಚಿತ್ರಣ

೨.೨ ಸರ್ಕಾರೇತರ ಸಂಸ್ಥೆಗಳ ಚಿತ್ರಣ

೨.೩ ಗ್ರಾಮೀಣಾಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ

೨.೪ ಸಂಶೋಧನಾ ಕ್ಷೇತ್ರದ ಪರಿಚಯ

೨.೫ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪರಿಚಯ

ಅಧ್ಯಾಯ ೨

ಗ್ರಾಮೀಣಾಭಿವೃದ್ಧಿ ಮತ್ತು ಸರ್ಕಾರೇತರ ಸಂಸ್ಥೆಗಳ ನಿರೂಪಣೆ

೨.೧ ಗ್ರಾಮೀಣಾಭಿವೃದ್ಧಿ ಬಗ್ಗೆ ಸೈದ್ಧಾಂತಿಕ ಚಿತ್ರಣ

ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡಜನರ ಜೀವನವನ್ನು ಸುಧಾರಿಸುವುದು ಮತ್ತು ಅವರ ಅಭಿವೃದ್ಧಿ ಪ್ರಕ್ರಿಯೆಯನ್ನು ಸಂರಕ್ಷಣೆ ಮಾಡುವುದನ್ನು ಗ್ರಾಮೀಣಾಭಿವೃದ್ಧಿ ಎಂದು ಕರೆಯುವರು. ಅದೊಂದು ನಿರಂತರ ಮತ್ತು ವ್ಯಾಪಕ ಸಾಮಾಜಿಕ ಮತ್ತು ಆರ್ಥಿಕ ಪ್ರಕ್ರಿಯೆಯಾಗಿದ್ದು ಗ್ರಾಮೀಣ ಜೀವನವನ್ನು ಎಲ್ಲಾ ವಿಧದಲ್ಲಿ ಸುಧಾರಿಸುವ ಗುರಿಯನ್ನು ಹೊಂದಿರುತ್ತದೆ. ಗ್ರಾಮೀಣಾಭಿವೃದ್ಧಿಯು ಕೃಷಿಯ ಬೆಳವಣಿಗೆ, ನೀರಾವರಿ, ಸಾರಿಗೆ–ಸಂಪರ್ಕಾಭಿವೃದ್ಧಿ , ಶಿಕ್ಷಣ, ಆರೋಗ್ಯ, ವಸತಿ, ಉದ್ಯೋಗ ಮುಂತಾದ ಚಟುವಟಿಕೆಗಳನ್ನು ಒಳಗೊಂಡಿರುವ ಒಂದು ವಿಸ್ತಾರವಾದ ಅಭಿವೃದ್ಧಿ ಕಾರ್ಯಕ್ರಮಗಳಾಗಿದ್ದು ಗ್ರಾಮೀಣ ಜೀವನದ ಎಲ್ಲಾ ಆಯಾಮಗಳನ್ನು ಸ್ಪರ್ಶಿಸುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿರುವ ಮಾನವ ಮತ್ತು ಪ್ರಾಕೃತಿಕ ಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಕೃಷಿಕರು, ಕೃಷಿ ಕಾರ್ಮಿಕರು, ದುರ್ಬಲವರ್ಗದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹಾಗೂ ಬಡತನದ ರೇಖೆಗಿಂತ ಕೆಳಗೆ ಜೀವಿಸುವ ಎಲ್ಲಾ ಜನರ ಜೀವನ ಮಟ್ಟದ ಸುಧಾರಣೆಗೆ ಹಾಕಿಕೊಳ್ಳಲಾಗುವ ಕಾರ್ಯಕ್ರಮಗಳನ್ನು ಒಟ್ಟಾಗಿ ಗ್ರಾಮೀಣಾಭಿವೃದ್ಧಿ ಕರ್ಯಕ್ರಮ ಎಂದು ಕರೆಯಲಾಗುತ್ತದೆ.

೨.೧.೧. ಗ್ರಾಮೀಣಾಭಿವೃದ್ಧಿಯಲ್ಲಿ ಕೃಷಿಯ ಪಾತ್ರ

ಕೃಷಿಯ ಪ್ರಗತಿಯೊಡನೆ ಗ್ರಾಮೀಣಾಭಿವೃದ್ಧಿಯು ಬೆಸುಗೆ ಹಾಕಿಕೊಂಡಿರುತ್ತದೆ. ಕೃಷಿಯು ಅಭಿವೃದ್ಧಿ ಆಗುವುದರೊಂದಿಗೆ ಸಮಗ್ರ ಗ್ರಾಮೀಣಾಭಿವೃದ್ಧಿಯಾಗಲು ಕಾರಣವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕೃಷಿಯ ಪ್ರಗತಿಯೊಡನೆ ಗ್ರಾಮೀಣ ಸಾರಿಗೆ–ಸಂಪರ್ಕ ವ್ಯವಸ್ಥೆ ಸುಧಾರಣೆಯಾಗುತ್ತದೆ. ಗ್ರಾಮೀಣ ಪ್ರದೇಶದ ಸಮತೋಲನದ ಸರ್ವಾಂಗೀಣ ಬೆಳವಣಿಗೆ ಆದಾಗ ಕೃಷಿ ರಂಗ ಮತ್ತು ಗ್ರಾಮೀಣ ವ್ಯವಸ್ಥೆ ಸುಧಾರಿಸುತ್ತದೆ.

ಕೃಷಿಗೆ ವಿದ್ಯುತ್ ಪೂರೈಕೆಯಾಗುವಾಗ ಗ್ರಾಮೀಣ ಪ್ರದೇಶದಲ್ಲಿ ವಿಧ್ಯುತ್ ಸಂಪರ್ಕ ಸಮರ್ಪಕವಾಗುತ್ತದೆ. ಗ್ರಾಮೀಣ ಕೃಷಿ ಅಭಿವೃದ್ಧಿಯು ಗ್ರಾಮೀಣ ಪ್ರದೇಶದಲ್ಲಿರುವ ಸಣ್ಣ ಮತ್ತು ಗುಡಿಕೈಗಾರಿಕೆಗಳಿಗೆ ಕಚ್ಚಾ ಸಾಮಾಗ್ರಿಗಳನ್ನು ಪೂರೈಸುತ್ತದೆ.

ಕೃಷಿ ಉತ್ಪನ್ನಗಳನ್ನು ಮತ್ತು ಸಣ್ಣ ಮತ್ತು ಗುಡಿಕೈಗಾರಿಕೆಗಳ ಉತ್ಪನ್ನಗಳನ್ನು ಸಾಗಟ ಮಾಡಲು ಗ್ರಾಮೀಣ ಸಾರಿಗೆ–ಸಂಪರ್ಕ ವ್ಯವಸ್ಥೆಯು ಅಭಿವೃದ್ಧಿಗೊಳ್ಳುತ್ತದೆ. ಕೃಷಿಯಿಂದಾಗಿ ಗ್ರಾಮೀಣ ಪ್ರದೇಶದ ನೀರು ಪೂರೈಕೆಯ ವ್ಯವಸ್ಥೆಯು ಅಭಿವೃದ್ಧಿಗೊಳ್ಳುತ್ತದೆ. ಸರಕಾರದ ನಿರುದ್ಯೋಗ ಮತ್ತು ಬಡತನ ನಿವಾರಣಾ ಯೋಜನೆಗಳು ಕೃಷಿಯ ಪ್ರಗತಿಯಿಂದ ಪುಷ್ಠಿಗೊಳ್ಳುತ್ತದೆ. ಕೃಷಿ ಮತ್ತು ಕೃಷಿ ಸಂಬಂಧಿತ ವಸ್ತುಗಳ ಉತ್ಪಾದನೆಯ ಹೆಚ್ಚಳದಿಂದ ಕಡಿಮೆ ಬೆಲೆಗೆ ವಿಷಮುಕ್ತ ಪೌಷ್ಠಿಕಾಹಾರ ಜನರಿಗೆ ಲಭ್ಯವಾಗುತ್ತದೆ. ಕೃಷಿ ಉತ್ಪನ್ನದ ಹೆಚ್ಚುವರಿ ಉತ್ಪಾದನೆಯಿಂದ ಕೃಷಿಕರ ಆದಾಯ ಹೆಚ್ಚಾಗಿ ಜೀವನ ಮಟ್ಟವು ಸುಧಾರಿಸಲ್ಪಡುತ್ತದೆ.

ಹಿಂದುಳಿದ ದೇಶಗಳು ಕೃಷಿ ಆರ್ಥಿಕತೆಯ ಅವಲಂಬಿತ ದೇಶಗಳಾಗಿದ್ದು ಕೃಷಿಯ ಅಭಿವೃದ್ಧಿಯಿಂದಾಗಿ ಅಭಿವೃದ್ಧಿ ಹೊಂದುತ್ತದೆ.

ಹೀಗೆ ಕೃಷಿಯು ಗ್ರಾಮೀಣಾಭಿವೃದ್ಧಿಯಲ್ಲಿ ಮಹತ್ತರವಾದ ಸಾಧನೆಯನ್ನು ಸಾಧಿಸುತ್ತಿದೆ. ಬದುಕಿಗೆ ಅಗತ್ಯವಾದ ಅಕ್ಕಿ, ಗೋಧಿ, ರಾಗಿ, ಜೋಳ ಮತ್ತಿತರ ಆಹಾರ ವಸ್ತುಗಳನ್ನು ಹಾಗೂ ತರಕಾರಿ, ಬೀಜ, ಎಣ್ಣೆ, ಹಣ್ಣು–ಹಂಪಲು ಮೊದಲಾದವುಗಳನ್ನು ಉತ್ಪಾದಿಸುವ ಕೃಷಿಕರು, ಕೃಷಿ ಕಾರ್ಮಿಕರು ನಿಜವಾಗಿಯು ದೇಶದ ಬೆನ್ನೆಲುಬು ಎನ್ನಿಸುತ್ತಾರೆ. ಹಿಂದುಳಿದ ಮತ್ತು ಮುಂದುವರಿಯುತ್ತಿರುವ ದೇಶಗಳ ಅಭಿವೃದ್ಧಿಯು ಕೃಷಿಯನ್ನು ಅವಲಂಬಿಸಿಕೊಂಡಿರುತ್ತದೆ.

ಆದುದರಿಂದ ಸರ್ಕಾರ ಭೂಸುಧಾರಣೆ, ಸಹಕಾರ ಪದ್ಧತಿ, ಗ್ರಾಮೀಣ ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ, ಕೃಷಿಯ ಆಧುನೀಕರಣ, ಬಡತನ ಮತ್ತು ನಿರುದ್ಯೋಗ ನಿವಾರಣಾ ಕ್ರಮಗಳ ಅನುಷ್ಠಾನ ಹೀಗೆ ಹತ್ತು – ಹಲವಾರು ಯೋಜನೆಗಳ ಮೂಲಕ ಕೃಷಿಕ್ಷೇತ್ರವನ್ನು ಬಲಪಡಿಸಿ ಸಮಗ್ರ ಗ್ರಾಮೀಣಾಭಿವೃದ್ಧಿ ಸಾಧಿಸಲು ಯತ್ನಿಸುತ್ತಿವೆ.

೨. ೧.೨. ಗ್ರಾಮೀಣಾಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ

ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಬಡಜನರಿಗೆ ಸಾಮಾನ್ಯ ಶಿಕ್ಷಣವನ್ನು ನೀಡುವುದು ಅತೀ ಅಗತ್ಯವಾಗಿದೆ. ಗ್ರಾಮೀಣ ಸಮುದಾಯದ ಜನರಿಗೆ ಶಿಕ್ಷಣ ನೀಡುವುದರಿಂದ ಅವರಿಗೆ ತಮ್ಮ ಗ್ರಾಮದ ಮತ್ತು ದೇಶದ ಸಮಸ್ಯೆಗಳನ್ನು ತಾವಾಗಿಯೇ ತಿಳಿದುಕೊಳ್ಳಲು ಸಹಾಯವಾಗುತ್ತದೆ. ಗ್ರಾಮೀಣ ಪ್ರದೇಶದ ಮತ್ತು ದೇಶದ ಸಮಸ್ಯೆಗಳನ್ನು ಕೇವಲ ಸರಕಾರವೇ ನಿವಾರಿಸಲು ಸಾಧ್ಯವಾಗದು. ಗ್ರಾಮೀಣ ಜನತೆಗೆ ಶಿಕ್ಷಣ ನೀಡುವುದರಿಂದ ಸ್ವ–ಸಹಾಯ ಪದ್ಧತಿಯನ್ನು ಕಲ್ಪಿಸುವುದು ಮತ್ತು ಅವರು ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರ ಕಂಡುಕೊಳ್ಳಲು ಶಿಕ್ಷಣದಿಂದ ಸಾಧ್ಯವಾಗುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಸಂಪ್ರದಾಯ ಬದ್ಧವಾಗಿ ಬೆಳೆದು ಬಂದ ಮೂಡನಂಬಿಕೆಯ ಆಚರಣೆಗಳು, ಅರ್ಥಹೀನ ಸಂಪ್ರದಾಯಗಳು ತಮ್ಮ ಆಗಾಧವಾದ ಪ್ರಭಾವವನ್ನು ಗ್ರಾಮೀಣ ಸಮಾಜದ ಮೇಲೆ ಬೀರಿರುವುದು ಕಂಡು ಬರುತ್ತದೆ. ಸ್ತ್ರೀಯರಿಗೆ ಪುರುಷರಂತೆ ಎಲ್ಲಾ ಸ್ಥಾನಮಾನಗಳು ಗ್ರಾಮೀಣ ಸಮಾಜದಲ್ಲಿ ಇನ್ನೂ ಲಭ್ಯವಾಗುತ್ತಿಲ್ಲ. ಇದರಿಂದ ಗ್ರಾಮೀಣಾಭಿವೃದ್ಧಿಯು ಕುಂಠಿತಗೊಳ್ಳುತ್ತದೆ. ಗ್ರಾಮೀಣ ಪ್ರದೇಶದಲ್ಲಿರುವ ಎಲ್ಲರಿಗೂ ಶಿಕ್ಷಣವನ್ನು ನೀಡುವುದರ ಮುಖಾಂತರ ಅನಿಷ್ಠ ಆಚರಣೆಗಳನ್ನು ನಿಲ್ಲಿಸಿ ಅಭಿವೃದ್ಧಿಗೆ ನಾಂದಿಯಾಡಲು ಸಾಧ್ಯವಾಗಬಹುದು.

೨.೧.೩. ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ

ಭಾರತದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಸುಮಾರು ಶೇಕಡಾ ೮೦ರಷ್ಟು ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಗ್ರಾಮಗಳಲ್ಲಿ ಕೃಷಿಯ ಹೆಚ್ಚಿನ ಚಟುವಟಿಕೆಗಳು ಮಹಿಳೆಯರನ್ನು ಆಧರಿಸಿರುವುದರಿಂದ, ಕೃಷಿಯಲ್ಲಿ ಮಹಿಳೆಯರು ಕೇಂದ್ರ ಬಿಂದುವಾಗಿದ್ದಾರೆ.

ಆರ್ಥಿಕ ಚಟುವಟಿಕೆಗಳಲ್ಲಿ ನಗರಗಳ ಮಹಿಳೆಯರಿಗೆ ಹೋಲಿಸಿದರೆ ಗ್ರಾಮೀಣ ಮಹಿಳೆಯರು ಮೇಲುಗೈ ಸಾಧಿಸಿದ್ದಾರೆ. ದುಡಿಮೆಯ ಕ್ಷೇತ್ರದಲ್ಲಿ ಗ್ರಾಮೀಣ ಮಹಿಳೆಯರ ಪಾಲ್ಗೊಳ್ಳುವಿಕೆ, ನಗರದ ಮಹಿಳೆಯರಿಗೆ ಹೋಲಿಸಿದಾಗ ಗಣನೀಯವಾಗಿ ಹೆಚ್ಚಿದೆ. ಕಳೆದ ನಾಲ್ಕು ದಶಕಗಳಲ್ಲಿ ದುಡಿಮೆಯ ಕ್ಷೇತ್ರದಲ್ಲಿ ಮಹಿಳೆಯ ಪಾಲ್ಗೋಳ್ಳುವಿಕೆ ಸುಧಾರಿಸಿದೆ ಎಂಬುದು ಕೆಳಗಿನ ತಖ್ತೆಯಿಂದ ವ್ಯಕ್ತವಾಗುತ್ತದೆ.

ವರ್ಷ	ಶೇಕಡಾ
೧೯೮೧	೧೯.೬೭
೧೯೯೧	೨೨.೭೩
೨೦೦೧	೨೫.೬೮
೨೦೧೧	೩೧.೬೦

ಹಳ್ಳಿಗಳಲ್ಲಿ ಹೆಚ್ಚಿನ ಮಹಿಳೆಯರು ಕೃಷಿಕರು ಅಥವಾ ಕೃಷಿ ಕಾರ್ಮಿಕರು ನಗರ ಪ್ರದೇಶಗಳಲ್ಲಿ ಮಹಿಳೆಯರು ಗೃಹ ಕೈಗಾರಿಕೆ, ಸಣ್ಣ ಪುಟ್ಟ ವ್ಯಾಪರ, ಸೇವಾ ಕ್ಷೇತ್ರ, ಕಟ್ಟಡ ನಿರ್ಮಾಣ ಕ್ಷೇತ್ರಗಳಲ್ಲಿ ದುಡಿಮೆಯಲ್ಲಿದ್ದಾರೆ. ಸಂಘಟಿತ ವಲಯಕ್ಕಿಂತ ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಿದೆ.

ಗ್ರಾಮಗಳಲ್ಲಿ ಹೊರ ವಲಯದ ಯಾವುದೇ ಕೆಲಸಗಳಿರಲಿ, ಇಂದಿನ ದಿನಗಳಲ್ಲಿ ಮಹಿಳೆಯರಿಗೆ ಬೇಡಿಕೆ ಹೆಚ್ಚು. ಭತ್ತದ ಬೇಸಾಯದಲ್ಲಿ, ಅಡಿಕೆ, ತೆಂಗು, ಕಾಫಿ–ಚಾ, ಏಲಕ್ಕಿ ತೋಟಗಳಲ್ಲಿ ಹಣ್ಣು–ಹಂಪಲುಗಳ ತೋಟದಲ್ಲಿ ದೇಶದ ಮೂಲೆ–ಮೂಲೆಯ ಗ್ರಾಮೀಣ ಪ್ರದೇಶದಲ್ಲಿ ದುಡಿಮೆಯಲ್ಲಿ ಗ್ರಾಮೀಣ ಮಹಿಳೆಯರು ಮುಂದಿದ್ದಾರೆ.

ಹೊರ ದುಡಿತವಲ್ಲದೆ ಮನೆಯಲ್ಲಿಯೇ ಕುಳಿತು ನಿರ್ವಹಿಸಬಹುದಾದ, ಆರ್ಥಿಕ ಅಭಿವೃದ್ಧಿಗೆ ಪ್ರಯೋಜನಕಾರಿಯಾಗುವಂತಹ ಅನೇಕ ಉದ್ಯೋಗಗಳಲ್ಲಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೇರಳ – ಕರ್ನಾಟಕದ ಗಡಿ ಭಾಗದಲ್ಲಂತೂ ಬೀಡಿ ಕಟ್ಟುವ ವೃತ್ತಿ ಅನೇಕ ಅನಕ್ಷರಸ್ಥ ಮಹಿಳೆಯರಿಗೆ ವರದಾನವಾಗಿದ್ದು, ಲಕ್ಷಾಂತರ ಕುಟುಂಬಗಳ ಜೀವನ ನಿರ್ವಹಣೆಗೆ ಸಹಾಕಾರಿಯಾಗಿದೆ. ಬೀಡಿ ಕಟ್ಟುವ ವೃತ್ತಿ, ಮೇಣದ ಬತ್ತಿ ತಯಾರಿಕೆ, ತಿಂಡಿ – ತಿನಸುಗಳ ತಯಾರಿಕೆ, ಹೋಲಿಗೆ ವೃತ್ತಿ ಮಲ್ಲಿಗೆ ಕೃಷಿ ಮೊದಲಾದ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಕೊಡುಗೆಯನ್ನು ನೀಡುತ್ತಿದ್ದಾರೆ.

೨.೧.೪. ಗ್ರಾಮೀಣಾಭಿವೃದ್ಧಿಯ ಉದ್ದೇಶಗಳು

ಗ್ರಾಮೀಣ ಬಡಜನರ ಜೀವನ ಮಟ್ಟ ಸುಧಾರಣೆಯನ್ನು ಮಾಡುವುದು ಮತ್ತು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಜನವರ್ಗವನ್ನು ಸಮಾಜದ ಮುಖ್ಯ ವಾಹಿನಿಗೆ ತರುವುದು, ದೇಶದ ಜನತೆಯ ಹಸಿವನ್ನು ನೀಗಿಸುವ ಗ್ರಾಮೀಣ ಕೃಷಿ ಪದ್ಧತಿಯನ್ನು ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಅಭಿವೃದ್ಧಿ ಪಡಿಸುವುದು. ಗ್ರಾಮೀಣ ಪ್ರದೇಶದಲ್ಲಿ ಸಣ್ಣ ಮತ್ತು ಗೃಹ ಕೈಗಾರಿಕೆಗಳನ್ನು

ಅಭಿವೃದ್ಧಿ ಪಡಿಸುವುದು ಮತ್ತು ಅದಕ್ಕೆ ಪೂರಕವಾದ ಜನರ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಸಾರಿಗೆಸಂಪರ್ಕ, ತರಬೇತಿ, ಮಾಹಿತಿ ಮುಂತಾದವುಗಳ ಅಭಿವೃದ್ಧಿಯನ್ನು ಸಾಧಿಸಲು ಪ್ರೇರಣೆ ನೀಡುವುದು, ಗ್ರಾಮೀಣ ಭಾರತದಲ್ಲಿ ನೆಲೆನಿಂತಿರುವ ಸಾಮಾಜಿಕ ಪಿಡುಗುಗಳನ್ನು ನಿವಾರಣೆ ಮಾಡಲು ಮತ್ತು ರಾಜಕೀಯವಾಗಿ ಸದೃಢರನ್ನಾಗಿ ಮಾಡಲು ಪ್ರಯತ್ನಿಸುವುದು. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಮುಖ್ಯ ಉದ್ದೇಶಗಳಾಗಿರುತ್ತವೆ.

೨.೧.೫. ಗ್ರಾಮೀಣ ಪ್ರದೇಶದ ಸಮಸ್ಯೆಗಳು

ಕಳೆದ ಐದು ದಶಕಗಳ ಅಭಿವೃದ್ಧಿಯ ಕಾರ್ಯಕ್ರಮಗಳು ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ನಿವಾರಿಸುವಲ್ಲಿ ವಿಫಲಗೊಂಡಿದ್ದು ಗ್ರಾಮೀಣ ಭಾರತ ಹಲವು ಸಮಸ್ಯೆಗಳ ಆಗರವಾಗಿಯೇ ಉಳಿದುಕೊಂಡಿದೆ. ನಗರಗಳು ನಿರಂತರವಾಗಿ ಅಭಿವೃದ್ಧಿ ಹೊಂದುತ್ತಲೇ ಇವೆ. ಗ್ರಾಮೀಣ ಪ್ರದೇಶದ ಜನತೆ ಅಜ್ಞಾನ, ಬಡತನ, ನಿರುದ್ಯೋಗ ಅನಕ್ಷರತೆ, ಸಮರ್ಪಕ ವಸತಿ ಸೌಲಭ್ಯದ ಕೊರತೆ, ಆರೋಗ್ಯ ಸೌಲಭ್ಯಗಳ ಕೊರತೆ, ನೈರ್ಮಲ್ಯದ ಅಲಕ್ಷತೆ, ಮಾನಸಿಕ ಅಶಾಂತಿ, ಪೌಷ್ಠಿಕ ಆಹಾರದ ಕೊರತೆ ಆಧುನಿಕ ತಂತ್ರಜ್ಞಾನದ ಅರಿವು ಇಲ್ಲದಿರುವುದು ಅಸಹಾಯಕ ಪರಿಸ್ಥಿಸಿ ಮುಂತಾದ ಗಂಭೀರ ಸಮಸ್ಯೆಗಳಿಂದ ಬಳಲುತ್ತಿದ್ದಾರೆ.

ಭಾರತದಲ್ಲಿ ಶ್ರೀಮಂತರು ಇನ್ನೂ ಹೆಚ್ಚು ಶ್ರೀಮಂತರಾಗಿ ಬೆಳೇಯುತ್ತಾರೆ. ಬಡವರು ಇನ್ನೂ ಕಡು ಬಡತನಕ್ಕೆ ತಳ್ಳಲ್ಪಡುತ್ತಾರೆ. ಸಂಪತ್ತಿನ ಅಸಮರ್ಪಕ ವಿತರಣೆಯಿಂದ ಇಂತಹ ಸಮಸ್ಯೆಗಳು ಭಾರತದಲ್ಲಿ ಮುಂದುವರಿಯುತ್ತಿದೆ. ಉತ್ಪಾದಿತ ಸಂಪತ್ತು ಶ್ರೀಮಂತರಲ್ಲಿ ಕೇಂದ್ರಿಕೃತವಾಗಿ, ಗ್ರಾಮೀಣ ಬಡವರಿಗೆ ಸರಿಯಾದ ಆರ್ಥಿಕ ಸಾಮಾಜಿಕ ಮತ್ತು ಶೈಕ್ಷಣಿಕ ಸವಲತ್ತುಗಳು ದೊರೆಯುತ್ತಿಲ್ಲ. ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಕೇಂದ್ರ – ರಾಜ್ಯ ಸರಕಾರಗಳು ಹಲವು ಯೋಜನೆಗಳನ್ನು ಮಾಡುತ್ತಿದ್ದರು. ಅವುಗಳು ಅನುಷ್ಠಾನಗೊಳ್ಳುವಲ್ಲಿನ ಲೋಪದೋಷಗಳಿಂದ ಗ್ರಾಮಗಳ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದುಕೊಂಡಿದೆ.

ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ಅನಭಿವೃದ್ಧಿ ಮತ್ತು ಅಪೂರ್ಣ ಅಭಿವೃದ್ಧಿ ಆಗಿದೆ. ಗ್ರಾಮಗಳ ಮೂಲಭೂತ ಸೌಲಭ್ಯಗಳಾದ ರಸ್ತೆ, ಮಾರುಕಟ್ಟೆ, ಆರೋಗ್ಯ ಸೇವೆಗಳು, ಶಿಕ್ಷಣ, ಕುಡಿಯುವ ನೀರಿನ ಪೂರೈಕೆ, ಶೌಚಾಲಯದ ಸೌಲಭ್ಯ, ವಿದ್ಯುತ್ ಪೂರೈಕೆ ಮುಂತಾದ ಸೌಲಭ್ಯವಂಚಿತರಾಗಿ ಗ್ರಾಮೀಣ ಪ್ರದೇಶದ ಜನರು ನಗರಗಳಿಗೆ ವಲಸೆ ಹೋಗುವುದು ತೀವ್ರವಾಗಿದೆ. ನಗರಗಳಿಗೆ ಉದ್ಯೋಗ ನಿಮಿತ್ತ ಬಂದ ಜನರು ನಗರದಲ್ಲಿ ಕಡಿಮೆ ಸಂಬಳಕ್ಕೆ ದುಡಿಯುತ್ತಾರೆ. ಇದು ಹಳೆಯ ಜೀತ ಪದ್ಧತಿಯನ್ನು ಹೋಲುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಬಾಲ ಕಾರ್ಮಿಕ ಪದ್ಧತಿಯನ್ನು ಇಂದು ಕಾಣಬಹುದಾಗಿದೆ.

ಭಾರತ ಗ್ರಾಮಗಳಲ್ಲಿ ನಿರಂತರವಾಗಿ ಹೆಚ್ಚುತ್ತಿರುವ ಜನಸಂಖ್ಯೆ ಹಲವು ತರದ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಜನಸಂಖ್ಯೆ ಹೆಚ್ಚಿದಂತೆ ಪ್ರತಿ ಕುಟುಂಬಕ್ಕೆ ಸಾಗುವಳಿಗೆ ಲಭಿಸುವ ಭೂ ಹಿಡುವಳಿಯ ಪ್ರಮಾಣ ಕಡಿಮೆಯಾಗುತ್ತದೆ. ಹಾಗಾಗಿ ಕೃಷಿಕರ ಮತ್ತು ಕೃಷಿ ಕಾರ್ಮಿಕರ ಆದಾಯ ಕಡಿಮೆಗೊಂಡು ಅವರು ಬಡತನ ರೇಖೆಗಿಂತ ಕೆಳಗಿರುವಂತೆ ಮಾಡಿದೆ. ಜನಸಂಖ್ಯೆ ಸ್ಫೋಟದಿಂದ ಹೆಚ್ಚಿನ ಗ್ರಾಮೀಣ ಜನರು ನಿರುದ್ಯೋಗ ಅಥವಾ ಅಪೂರ್ವ ಉದ್ಯೋಗದಿಂದ ಜೀವಾನೋಪಯಕ್ಕೆ ಬೇರೆ ದಾರಿಯಿಲ್ಲದೆ ಸಮಸ್ಯೆಗೊಳಗಾಗುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ಬೆಳವಣಿಗೆಗೆ ಆಗುತ್ತಿರುವ ದೊಡ್ಡ ಕೈಗಾರಿಕೆಗಳು ಪ್ರಾಕೃತಿಕ ಅಸಮತೋಲನಕ್ಕೆ ಕಾರಣವಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕ್ ಸಾಲ ವ್ಯವಸ್ಥೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ಉತ್ಪಾದಿಸಿದ ವಸ್ತುಗಳಿಗಿರುವ ಮಾರುಕಟ್ಟೆಗಳು ಅಪರಿಪೂರ್ಣವಾಗಿದೆ. ಇದರಿಂದಾಗಿ ಕೃಷಿಕರು, ವ್ಯಾಪರಿಗಳು ಶೋಷಣೆಗೊಳಗಾಗಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ನೆಲೆ ನಿಂತಿರುವ ಗ್ರಾಮೀಣ ಆಚಾರಗಳು, ನಂಬಿಕೆಗಳು, ಜನರ ಭಾವನೆಗಳು ಗ್ರಾಮೀಣಾಭಿವೃದ್ಧಿಗೆ ವಿರುದ್ಧವಾಗಿದೆ. ಗ್ರಾಮೀಣ ಪ್ರದೇಶದಲ್ಲಿರುವ ಜಾತಿ ಪದ್ಧತಿ, ಧಾರ್ಮಿಕ ವೈಷಮ್ಯಗಳು ಗ್ರಾಮದ ಜನರ ಸಹಬಾಳ್ವೆಯನ್ನು ಗ್ರಾಮೀಣ ಒಗ್ಗಟ್ಟು ನಾಶಗೊಳಿಸಿ ದೇಶದ ಐಕ್ಯತೆಗೆ ಭಂಗತರುತ್ತದೆ.

ಭಾರತ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಲ್ಲಿ ಬಡತನವೂ ಒಂದಾಗಿದೆ. ಕಳೆದ ಐದು ದಶಕಗಳ ಆರ್ಥಿಕ ಯೋಜನೆಗಳ ಫಲವಾಗಿಯೂ ಬಡತನ ಗಂಭೀರ ಸಮಸ್ಯೆಯಾಗಿಯೇ ಉಳಿದುಕೊಂಡಿದೆ. ಗ್ರಾಮೀಣ ಬಡತನದಿಂದಾಗಿ ಯಾವುದೇ ಅಭಿವೃದ್ಧಿ ಯೋಜನೆಗಳು ಗ್ರಾಮಗಳಲ್ಲಿ ಫಲಕಾರಿಯಾಗದೇ ಉಳಿದಿದೆ. ಗ್ರಾಮೀಣ ಜನರು ಎರಡು ಹೊತ್ತಿನ ಊಟಕ್ಕೂ ಪರದಾಡಬೇಕಾದ ಪರಿಸ್ಥಿತಿ ಇದ್ದು ಆತ ಬಡತನದ ರೇಖೆಯ ಕೆಳಗಿನವನೆಂದು ಹಣೆ ಪಟ್ಟಿಯಿಂದ ಬದುಕುತ್ತಿದ್ದಾನೆ. ಆದರೆ ಬಡತನ ನಿರ್ಧಾರಕ್ಕೆ ಸರಿಯಾದ ಮಾನದಂಡಗಳು ಇಲ್ಲದಿರುವುದು ಸಮಸ್ಯೆಯಾಗಿದೆ.

ಹೀಗೆ ಸರ್ಕಾರ ಗ್ರಾಮೀಣ ಬಡತನದ ಮತ್ತು ಸಮಸ್ಯೆಯ ನಿವಾರಣೆಗೆ ನಿರಂತರವಾಗಿ ಪ್ರಯತ್ನ ಪಡುತ್ತಲೇ ಇದೆ. ಆದರೂ ಸಮಸ್ಯೆಗಳು ಇಂದಿಗೂ ನೆಲೆನಿಂತಿರುವುದನ್ನು ಕಾಣಬಹುದು.

೨.೨. ಸರ್ಕಾರೇತರ ಸಂಸ್ಥೆಗಳ ಚಿತ್ರಣ

ಸರ್ಕಾರದ ಪ್ರತಿನಿಧಿಗಳಿಲ್ಲದೆ, ಶಾಸಕಾಂಗ ಮತ್ತು ಕಾರ್ಯಾಂಗಗಳ ಹಸ್ತಕ್ಷೇಪಕ್ಕೆ ಅವಕಾಶವಿಲ್ಲದೆ ಅಭಿವೃದ್ಧಿಗಾಗಿ ಪ್ರಯತ್ನಿಸುವ ಖಾಸಗಿ ಸೇವಾ ಸಂಸ್ಥೆಗಳನ್ನು ಸರ್ಕಾರೇತರ ಸಂಸ್ಥೆ ಎಂದು ಕರೆಯಲಾಗುತ್ತದೆ. ಇದರ ಕಾರ್ಯಕರ್ತರು ಜನರ ಅಭಿವೃದ್ಧಿ ವಿಷಯದಲ್ಲಿ ನಿಪುಣರಾಗಿರುವವರೂ ಜನರಲ್ಲಿ ನಿರಂತರ ಸಂಪರ್ಕದಲ್ಲಿರುವವರೂ ಆಗಿದ್ದಾರೆ. ಹಿಂದುಳಿದ ಮತ್ತು ಮುಂದುವರಿಯುತ್ತಿರುವ ದೇಶಗಳಲ್ಲಿ ಅನೇಕ ಸರಕಾರೇತರ ಸಂಸ್ಥೆಗಳು, ಸಾಮಾಜಿಕ ರಂಗದಲ್ಲಿ ಸಕ್ರಿಯವಾಗಿದೆ. ಅವು ಸಾಮಾಜಿಕ ಕೆಡುಕುಗಳ ನಿವಾರಣೆಗೆ ಮತ್ತು ಲಭ್ಯವಿರುವ ಮಾನವ ಸಂಪನ್ಮೂಲ, ಪ್ರಾಕೃತಿಕ ಸಂಪನ್ಮೂಲಾಭಿವೃದ್ಧಿಗೆ ಪ್ರಯತ್ನ ಪಡುವ ಸ್ವಯಂ ಸೇವಾ ಸಂಘಟನೆಗಳಾಗಿವೆ.

ಕಳೆದ ಹಲವಾರು ವರ್ಷಗಳಿಂದ ಗ್ರಾಮೀಣ ಪ್ರದೇಶದ ಅಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತಿವೆ. ಸರ್ಕಾರೇತರ ಸಂಸ್ಥೆಗಳು ಸರ್ವೇಸಾಮಾನ್ಯವಾಗಿ ಸೇವಾ ಮನೋಭಾವದಿಂದ ಸ್ಥಾಪನೆಗೊಂಡ ಸಂಸ್ಥೆಗಳಾಗಿರುತ್ತದೆ. ಈ ಸ್ವಯಂಸೇವಾ ಸಂಸ್ಥೆಗಳಿಗೆ ಲಾಭಗಳಿಕೆಯ ಉದ್ದೇಶವಿಲ್ಲದ ಕಾರಣ ಅವುಗಳನ್ನು ಲಾಭರಹಿತ ಸಂಸ್ಥೆಗಳು ಎಂದು ಕರೆಯುವರು.

ಭಾರತದಲ್ಲಿ ಸರ್ಕಾರೇತರ ಸಂಸ್ಥೆಗಳು ೧೯ನೇ ಶತಮಾನದಲ್ಲಿಯೇ ಪ್ರಾರಂಭಗೊಂಡು ಈಗ ದೇಶವ್ಯಾಪ್ತಿಯಾಗಿ ಈ ಸಂಸ್ಥೇಗಳು ಜನಸೇವೆಯನ್ನು ಮಾಡುತ್ತಿವೆ. ಸರ್ಕಾರೇತರ ಸಂಸ್ಥೆಗಳು ಖಾಸಗಿ ಸಂಸ್ಥೆಗಳಾಗಿದ್ದು ಬಡವರ, ಪರಿಶಿಷ್ಟ ಜಾತಿ, ಪಂಗಡದವರ ಏಳಿಗೆಗೆ, ಪರಿಸರ ರಕ್ಷಣೆ ಮತ್ತು ಸಮುದಾಯದ ಅಭಿವೃದ್ಧಿಯಲ್ಲಿ ಮುಂಪಕ್ತಿಯಲ್ಲಿದೆ. ಸರ್ಕಾರೇತರ ಸಂಸ್ಥೆಗಳು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಶೈಕ್ಷಣಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಿವೆ. ಭಾರತದಲ್ಲಿ ಕಾರ್ಯಾಚರಿಸುತ್ತಿರುವ ಸರ್ಕಾರೇತರ ಸಂಸ್ಥೆಗಳು ಉತ್ತಮ ಶಿಕ್ಷಣ ಆರೋಗ್ಯ ಸೇವೆ, ಸ್ವ-ಉದ್ಯೋಗ, ಆರ್ಥಿಕ ಸಾಲವನ್ನು ನೀಡುವ ಮತ್ತು ಅದರ ನಿರ್ವಹಣೆಯನ್ನು ಸರಿಯಾದ ರೀತಿಯಲ್ಲಿ ಮಾಡಲು ಪ್ರಯತ್ನಿಸುತ್ತಿವೆ.

ಭಾರತದಲ್ಲಿ ಕೈಗೊಂಡ ಕೆಲವು ಸಮೀಕ್ಷೆಗಳ ಪ್ರಕಾರ ಸುಮಾರು ೧೨ ಲಕ್ಷ ಸರ್ಕಾರೇತರ ಸಂಸ್ಥೆಗಳಿದ್ದು, ಅವುಗಳು ಗ್ರಾಮೀಣಾಭಿವೃದ್ಧಿಗೆ ಪ್ರಯತ್ನಿಸುತ್ತಿದೆ. ೧೯ನೇ ಶತಮಾನದ ಆದಿ ಕಾಲದಲ್ಲಿ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ನೆಲೆ ನಿಂತಿದ್ದ ಜಾತಿಪದ್ಧತಿ, ಅಸ್ಪೃಶ್ಯತೆ, ಬಾಲ್ಯವಿವಾಹ, ಸತಿಪದ್ಧತಿ, ಮೂಡನಂಬಿಕೆ ಮುಂತಾದ ಸಾಮಾಜಿಕ ಪಿಡುಗುಗಳ ವಿರುದ್ಧ ಸ್ವಯಂ ಪ್ರೇರಿತ ಚಳುವಳಿ ಆರಂಭವಾಗಿದ್ದು ಇಂತಹ ಚಳುವಳಿಗಳು ಮುಂದೆ ಖಾಸಗಿ ಸಂಸ್ಥೆಗಳಾಗಿ ರೂಪುಗೊಂಡಿತು. ಲಭ್ಯವಿರುವ ಸಂಪನ್ಮೂಲಗಳ ಬಳಕೆ, ಮಾಹಿತಿ ಕಾರ್ಯಗಾರ, ಕುಟುಂಬ ಯೋಜನೆ, ಆರೋಗ್ಯ, ಶಿಕ್ಷಣ, ಕೆರೆ ನಿರ್ವಹಣೆ, ಅಂಗಪರಿಮಿತರ, ವಯೋವೃದ್ಧರ, ಅನಾಥ ಮಕ್ಕಳ, ಸಾಮಾಜಿಕ ಸಂಕಷ್ಟಕ್ಕೊಳಗಾದ ಮಹಿಳೆಯರ ಸಂರಕ್ಷಣೆ ಮೊದಲಾದ ಕಾರ್ಯ ಚಟುವಟಿಕೆಗಳನ್ನು ಭಾರತದಲ್ಲಿ ಕಾರ್ಯಾಚರಿಸುತ್ತಿರುವ ಸರ್ಕಾರೇತರ ಸಂಸ್ಥೆಗಳು ಮಾಡುತ್ತಿವೆ. ಭಾರತದಲ್ಲಿ ಗ್ರಾಮೀಣಾಭಿವೃದ್ಧಿಯಲ್ಲಿ ತೊಡಗಿರುವ ಸರ್ಕಾರೇತರ ಸಂಸ್ಥೆಗಳಲ್ಲಿ ಪ್ರಮುಖವಾದವುಗಳು.

ಭಾರತೀಯ ಆಗ್ರೊ ಇಂಡಸ್ಟ್ರೀಸ್ ಪೌಂಢೇಶನ್

ಭಾರತೀಯ ಗ್ರಾಮೀಣ ಮಹಿಳಾ ಸಂಘ

ಸರ್ವೋದಯ ಶ್ರಮದಾನ ಚಳುವಳಿ

೨.೨.೧. ಸರ್ಕಾರೇತರ ಸಂಸ್ಥೆಗಳು ಕೈಗೊಂಡಿರುವ ಗ್ರಾಮೀಣಾಭಿವೃದ್ಧಿ ಯೋಜನೆಗಳು

ಭಾರತ ಸ್ವಾತಂತ್ರ್ಯವನ್ನು ಪಡೆದ ನಂತರ ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಅಭಿವೃದ್ಧಿಯಲ್ಲಿ ಸಕ್ರಿಯವಾಗಿದ್ದು ಹಲವು ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

೧. ಸರ್ಕಾರೇತರ ಸಂಸ್ಥೇಗಳು ದುರ್ಬಲ ಜನರನ್ನು ಸಂಘಟಿಸಿ ಅವರ ಮೇಲೆ ಆಗುತ್ತಿರುವ ಶೋಷಣೆಯನ್ನು ಎದುರಿಸುವಲ್ಲಿ ಶ್ರಮಿಸುತ್ತಿದೆ.

೨. ಗ್ರಾಮೀಣ ಪ್ರದೇಶದಲ್ಲಿರುವ ಸರ್ಕಾರೇತರ ಸಂಸ್ಥೆಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯ ಪ್ರಯೋಜನಗಳನ್ನು ಗ್ರಾಮೀಣ ಜನರಿಗೆ ಅರಿವು ಮೂಡಿಸುವ ಕೆಲಸ ಮಾಗುತ್ತಿವೆ.

೩. ಸ್ಥಳೀಯ ಸಂಪನ್ಮೂಲಗಳ ಬಳಕೆಯ ಬಗ್ಗೆ ತಿಳುವಳಿಕೆಯನ್ನು ಕೊಡುತ್ತಿವೆ.

೪. ಜನರೊಂದಿಗೆ ಸರ್ಕಾರಿ ಇಲಾಖೆಗಳಿಗಿಂತಲೂ ಹೆಚ್ಚು ಹತ್ತಿರವಿರುವ ಸರ್ಕಾರೇತರ ಸಂಸ್ಥೆಗಳು ವಯಸ್ಕರ ಶಿಕ್ಷಣಕ್ಕೆ ಪೂರಕವಾಗಿ ಸೇವೆ ಸಲ್ಲಿಸುತ್ತದೆ.

೫. ಗ್ರಾಮೀಣ ಪ್ರದೇಶದಲ್ಲಿ ಭೂ-ಸುಧಾರಣೆ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರೇತರ ಸಂಸ್ಥೆಗಳು ಸಹಾಯ ಮಾಡುತ್ತದೆ.

೬. ಸಮಾಜದ ತಳಮಟ್ಟದಲ್ಲಿರುವ ಜನರಿಗೆ ಸರ್ಕಾರದ ಯೋಜನೆಗಳ ಮಾಹಿತಿಯನ್ನು ಸರ್ಕಾರೇತರ ಸಂಸ್ಥೆಗಳು ನೀಡುತ್ತದೆ.

೭. ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಮಹಿಳೆಯರ ಸ್ಥಾನ-ಮಾನಗಳನ್ನು ಉತ್ತಮ ಪಡಿಸಿ ಪುರುಷ ಸಮಾನ ಸ್ಥಾನ ಮಹಿಳೆಯರಿಗೂ ಲಭಿಸುವಂತೆ ಪ್ರಯತ್ನ ಪಡುತ್ತದೆ.

೮. ಹಿಂದುಳಿದ ಜನರಿಗೆ ಶಿಕ್ಷಣದ ಮಹತ್ವದ ಅರಿಯನ್ನು ಮೂಡಿಸಿ ಗ್ರಾಮೀಣ ಜನತೆ ಶಿಕ್ಷಿತರಾಗಲು ಸರ್ಕಾರೇತರ ಸಂಸ್ಥೆಗಳು ಪ್ರಯತ್ನ ಪಡುತ್ತದೆ.

ಒಟ್ಟಾರೆ ಸರ್ಕಾರ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಯೋಜನೆಗಳನ್ನು ಸಾಕಾರಗೊಳಿಸಲು ಸರ್ಕಾರ ಮತ್ತು ಜನರ ಮಧ್ಯೆ ಕೊಂಡಿಯಾಗಿ ಸರ್ಕಾರೇತರ ಸಂಸ್ಥೆಗಳು ಸೇವೆಸಲ್ಲಿಸುತ್ತವೆ.

೨.೩. ಗ್ರಾಮೀಣಾಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ

ಗ್ರಾಮೀಣಾಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳು ಮಹತ್ತರವಾರ ಕೊಡುಗೆಗಳನ್ನು ನೀಡುತ್ತವೆ. ಬಹುತೇಕ ಸರ್ಕಾರೇತರ ಸಂಸ್ಥೆಗಳು ಸ್ವಯಂ ಸೇವಾ ಸಂಘಟನೆಗಳಾಗಿರುತ್ತವೆ. ಇಂತಹ ಸಂಸ್ಥೆಗಳು ಸೇವೆಗೆ ಮಹತ್ವ ನೀಡುತ್ತವೆ. ಕಷ್ಟದಲ್ಲಿರುವರಿಗೆ ಸಹಾಯವನ್ನು ನೀಡುವ ಪ್ರಧಾನ ಉದ್ದೇಶವನ್ನುಟ್ಟಿಕೊಂಡು ಸ್ಥಾಪನೆಗೊಂಡ ಸಂಸ್ಥೆಗಳಾಗಿವೆ. ಸ್ವಂತ ಹಿತಕ್ಕಿಂತಲೂ ಇತರರ ಸೇವೆಯೇ ಮಿಗಿಲು ಎಂದು ಭಾವಿಸಿಕೊಂಡಿರುತ್ತದೆ, ಸಂಪನ್ಮೂಲಗಳನ್ನು ಸಂಗ್ರಹಿಸಿ ಅದರ ಅಗತ್ಯ ಇರುವವರಿಗೆ ವಿತರಣೆ ಮಾಡುವ ಪ್ರಯತ್ನವನ್ನು ಈ ಸಂಸ್ಥೆಗಳು ಮಾಡುತ್ತವೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ದೌರ್ಬಲ್ಯವುಳ್ಳವರಿಗೆ ಸಹಾಯ ನೀಡುತ್ತವೆ. ಸಾಮಾಜಿಕ ಸಂಕಷ್ಟಗಳು ಬಂದಂತಹ ಸಂದರ್ಭದಲ್ಲಿ ಈ ಸಂಸ್ಥೆಗಳು ಶಮನಕಾರಕದಂತೆ ಸೇವೆ ಸಲ್ಲಿಸುತ್ತವೆ.

ನಮ್ಮ ಈ ಸಮಾಜದಲ್ಲಿ ಹಲವಾರು ವ್ಯವಹಾರ ಸಂಸ್ಥೆಗಳು ಇವೆ. ಆದಾಯಗಳಿಸುವ ಅಥವಾ ಲಾಭದ ಉದ್ದೇಶದಿಂದ ಮಾತ್ರಹುಟ್ಟಿಕೊಂಡ ಸಂಸ್ಥೆಗಳು ಇವು ಆದರೆ ಸರ್ಕಾರೇತರ ಸಂಸ್ಥೆಗಳು ಇವು. ಆದರೆ ಸರ್ಕಾರೇತರ ಸಂಸ್ಥೆಗಳು ಲಾಭಗೊಳಿಸುವ ಉದ್ದೇಶವನ್ನುಟ್ಟುಕೊಂಡು ಸ್ಥಾಪನೆಗೊಂಡಿಲ್ಲ ಅವುಗಳ ಉದ್ದೇಶ ಸಮಾಜದಲ್ಲಿ ಸಂಕಷ್ಟದಲಲಿರುವ, ದೀನರ, ದಲಿತರ, ಬಡವರ, ಶೋಷಣೆ ಮತ್ತು ದೌರ್ಜನ್ಯಕ್ಕೊಳಗಾದವರ ಸೇವೆಯನ್ನು ಮಾಡುವುದು. ಸಾಮಾಜಿಕವಾಗಿ, ಆರ್ಥಿಕವಾಗಿ ನೊಂದವರಿಗೆ ನ್ಯಾಯ ಒದಗಿಸುವ ಸಂಸ್ಥೆಗಳಾಗಿ ಅವು ಕಾರ್ಯನಿರವಾಗಿದೆ.

ಸರ್ಕಾರ ಗ್ರಾಮೀಣಾಭಿವೃದ್ಧಿಗೆ ಹತ್ತು-ಹಲವಾರು ಯೋಜನೆಗಳನ್ನು ಕೈಗೊಂಡವರೂ ಅದು ಗ್ರಾಮೀಣ ಅರ್ಹ ಜನತೆಗೆ ತಲುಪುದು ಬಹಳ ವಿರಳ. ಇದಕ್ಕೆ ಮುಖ್ಯ ಕಾರಣ ಯೋಜನೆಗಳ ಬಗ್ಗೆ

ಅರಿವಿಲ್ಲದಿರುವುದು ಸರ್ಕಾರೇತರ ಸಂಸ್ಥೆಗಳು ಸರ್ಕಾರ ಮತ್ತು ಜನರ ನಡುವೆ ಮಧ್ಯವರ್ತಿಯಾಗಿ ಕಾರ್ಯವೆಸಗುತ್ತದೆ. ಹಿಂದುಳಿದ ದೇಶಗಳಲ್ಲಿ ಸರಕಾರಗಳು ಬಡತನ ನಿರ್ಮೂಲನಕ್ಕೆ ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಮತ್ತು ಕುಟುಂಬ ಕಲ್ಯಾಣಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತದೆ. ಸರ್ಕಾರದ ಯೋಜನೆಗಳ ಫಲವನ್ನು ಅನುಭವಿಸಲು ಜನರ ಅಜ್ಞಾನ, ಹಿಂಜರಿಕೆ ಮತ್ತು ಆತ್ಮವಿಶ್ವಾಸದ ಕೊರತೆ ಕಾರಣವಾಗುತ್ತದೆ. ಹಲವಾರು ಸರ್ಕಾರೇತರ ಸಂಸ್ಥೆಗಳು ಸರಕಾರ ಮತ್ತು ಜನರ ನಡುವೆ ಕೊಂಡಿಯಾಗಿ ನಿಂತು ಯೋಜನೆಗಳ ಪೂರ್ಣಫಲ ಜನರಿಗೆ ತಲುಪಲು ನೆರವಾಗುತ್ತದೆ. ಹೀಗೆ ಸರ್ಕಾರದ ಗ್ರಾಮೀಣಾಭಿವೃದ್ಧಿ ಯೋಜನೆಗಳು ಜನರಿಗೆ ತಲುಪಲು ಸರ್ಕಾರೇತರ ಸಂಸ್ಥೆಗಳು ನೆರವಾಗುತ್ತವೆ.

ಸರ್ಕಾರೇತರ ಸಂಸ್ಥೆಗಳು ಪರಿಸರ ಸ್ನೇಹಿ ಸಂಸ್ಥೆಗಳನ್ನು ಪರಿಸರಕ್ಕೆ ಹಾನಿ ಉಂಟುಮಾಡದ ಕೈಗಾರಿಕೆಗಳನ್ನು ಮತ್ತು ಉದ್ದಿಮೆಗಳನ್ನು ಪ್ರೋತ್ಸಾಹಿಸುತ್ತವೆ. ಜೀವ ಕೈಗಾರಿಕೆಗಳನ್ನು ಮತ್ತು ಉದ್ದಿಮೆಗಳನ್ನು ಪ್ರೋತ್ಸಾಹಿಸುತ್ತವೆ. ಜೀವ ಪರಿಸರದ ಸಮತೋಲನ ಮತ್ತು ಜೀವ ವೈವಿಧ್ಯತೆ ಕಾಪಾಡಲು ಅವು ಯತ್ನಿಸುತ್ತವೆ. ಅನೇಕ ಸರ್ಕಾರೇತರ ಸಂಸ್ಥೇಗಳು ಜಲನಿರ್ವಹಣೆ ನೀರಾವರಿಯಂತಹ ಜನಪರ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತವೆ.

ಹಲವು ವ್ಯಾಪರಿಗಳು ಲಾಭದ ಉದ್ದೇಶದಿಂದ ಬಡಜನರನ್ನು ಅಳತೆ, ತೂಕಗಳಲ್ಲಿ ಮೋಸ ಮಾಡುತ್ತಾರೆ. ವಸ್ತುಗಳಿಗೆ ಕಲಬೆರಕೆ ಮಾಡುವುದು, ಅವಧಿ ಮೀರಿದ ವಸ್ತುಗಳ ಮಾರಾಟ ಬೆಲೆ ಮತ್ತು ಉತ್ಪಾದನ ದಿನಾಂಕ ನಮೂದಿಸದ ಉತ್ಪನ್ನಗಳ ವಿಲೇವಾರಿ ಹೀಗೆ ಹಲವು ರೀತಿಯಲ್ಲಿ ಜನರನ್ನು ವಂಚಿಸಲು ಪ್ರಯತ್ನ ಪಡುತ್ತಾರೆ. "ವ್ಯಾಪಾರಂ ದ್ರೋಹ ಚಿಂತನಂ" (ಕೌಟಿಲ್ಯ)ನ್ನು ನೆನಪಿಸಬಹುದು. ಗ್ರಾಹಕರನ್ನು ಈ ರೀತಿಯ ಶೋಷಣೆಯಿಂದ ಮುಕ್ತಗೊಳಿಸಲು ಸರ್ಕಾರೇತರ ಸಂಸ್ಥೆಗಳು ಪ್ರಯತ್ನ ಪಡುತ್ತದೆ.

ಹಿಂದಿನ ಕಾಲದಲ್ಲಿ ನಮ್ಮ ಸಮಾಜದಲ್ಲಿ ನೆಲೆನಿಂತಿದ್ದ ವರದಕ್ಷಿಣೆ, ಅಸ್ಪೃಶ್ಯತೆ, ಬಾಲ್ಯವಿವಾಹ, ಸತಿಪದ್ಧತಿಯಂತಹ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲೆಂದೇ ಹಲವು ತರದ ಚಳುವಳಿ ರೂಪುಗೊಂಡವು. ಗ್ರಾಹಕ ಚಳುವಳಿ, ವರದಕ್ಷಿಣೆ ವಿರೋಧ ಚಳುವಳಿ, ಜಾತೀಯತೆ ನಿರ್ಮೂಲನ ಚಳುವಳಿ, ಸಾಕ್ಷರತಾ ಅಂದೋಲನ ಇತ್ಯಾದಿ ಜನಪರ ಚಳುವಳಿಗಳು ಮುಂದೊಂದು ದಿನ ಸಂಸ್ಥೆ-ಸಂಘಟನೆಗಳಾಗಿ ಬೆಳೆದು ಸ್ಥಳೀಯ ಸಂಸ್ಕೃತಿಯನ್ನು ಕಾಯ್ದುಕೊಳ್ಳಲು ಪ್ರಯತ್ನ ಮಾಡುತ್ತವೆ.

ಜನರ ಆರೋಗ್ಯದ ಬಗ್ಗೆ ಕಾಳಜಿ ಇರುವ ಸರ್ಕಾರೇತರ ಸಂಸ್ಥೆಗಳು ಅನೇಕ ಸಾಂಕ್ರಮಿಕ ರೋಗಗಳ ಬಗ್ಗೆ ಜನರಿಗೆ ಜಾಗೃತಿಯನ್ನು ಮೂಡಿಸುವ ಕೆಲಸವನನ್ನು ಮಾಡುತ್ತವೆ. ಹಿಂದುಳಿದ ದೇಶಗಳಲ್ಲಿ ಆರೋಗ್ಯದ ಬಗ್ಗೆ ನಿರ್ಲಕ್ಷ್ಯದಿಂದಾಗಿ ಕ್ಷಯ, ಕ್ಯಾನ್ಸರ್, ಮಲೇರಿಯಾ, ಫೈಲೇರಿಯಾದಂತಹ ಸಾಂಪ್ರದಾಯಿಕ ಮತ್ತು ಎಡ್ಸ್, ಹಕ್ಕಿಜ್ವರ, ಕೋಳಿಜ್ವರ, ಹಂದಿಜ್ವರ, ಚಿಕನ್‌ಗುನ್ಯದಂತಹ ಆಧುನಿಕ ಮಾರಕ ರೋಗಗಳು ಜನರು ಬಾಧಿಸಿದಾಗ ಸರ್ಕಾರೇತರ ಸಂಸ್ಥೆಗಳು ಜನರ ಆರೋಗ್ಯ ಸಂರಕ್ಷಣೆಗಾಗಿ ಬೃಹತ್ ಶಿಬಿರಗಳನ್ನು ಏರ್ಪಡಿಸುತ್ತವೆ. ಇಂತಹ ಸಂದರ್ಭದಲ್ಲಿ ಸರ್ಕಾರ ಮತ್ತು ಸಮಾಜ ಕಲ್ಯಾಣದ ಮತ್ತು ಆರೋಗ್ಯ ಕ್ಷೇಮ ಕಾರ್ಯಕ್ರಮಗಳು ಜನರನ್ನು ಮುಟ್ಟುವಂತೆ ನೋಡಿಕೊಳ್ಳುತ್ತದೆ.

ಸರ್ಕಾರೇತರ ಸಂಸ್ಥೆಗಳು ಮಾನವೀಯ ಮೌಲ್ಯಗಳಾದ ಪ್ರೀತಿ, ದಯೆ, ಅನುಕಂಪ, ಪರೋಪಕಾರ, ಇತ್ಯಾದಿಗಳನ್ನು ಸಂರಕ್ಷಣೆ ಮಾಡುತ್ತವೆ. ಬಹುತೇಕ ವಿದ್ಯಾವಂತರು ಸಮಾಜ ಸೇವೆಗೆ ನೆರವು ನೀಡದೆ, ಎಲ್ಲಾರನ್ನೂ ಟೀಕಿಸುತ್ತಾ, ತಾವು ಮಾತ್ರ ಶ್ರೇಷ್ಠರೆಂಬ ನೆಲೆಯಲ್ಲಿ ಕೆಲವೊಮ್ಮೆ ಅವರು ಜಾತಿ ಮತ್ತು ಕೋಮು ಸಂಘಟನೆಗಳ ಸಕ್ರಿಯ ಸದಸ್ಯರಾಗಿ ದೇಶವನ್ನು ತೆಗಳುವ ಪ್ರಯತ್ನ ಮಾಡುತ್ತಾರೆ. ಇಂತಹ ಸಮಯ ಸಾಧಕ ಬುದ್ಧಿವಂತರನ್ನು ಸರಿಪಡಿಸಲು ಸರಕಾರೇತರ ಸಂಸ್ಥೆಗಳು ಪ್ರಯತ್ನಿಸುತ್ತವೆ.

ಸ್ಥಳೀಯವಾಗಿ ಲಭ್ಯವಾಗುವ ಸಂಪನ್ಮೂಲಗಳ ಬಳಕೆಗೆ ಸರ್ಕಾರೇತರ ಸಂಸ್ಥೆಗಳು ಪ್ರೋತ್ಸಾಹ ನೀಡುತ್ತದೆ. ಕೆಲವೊಂದು ಸಂಘ ಸಂಸ್ಥೆಗಳು ಗ್ರಾಮೀಣ ಪ್ರದೇಶದಲ್ಲಿರುವ ಜನರ ಅಭಿವೃದ್ಧಿ ಕಾರ್ಯಗಳಿಗೆ ಹಣಕಾಸಿನ ನೆರವನ್ನು ನೀಡುತ್ತದೆ. ಸಂಪನ್ಮೂಲಗಳು ದುರಪಯೋಗವಾಗದಂತೆ ಅಭಿವೃದ್ಧಿ ಸಾಧಿಸುವ ಮಾರ್ಗೋಪಾಯಗಳನ್ನು ಅವು ಪರಿಷ್ಕರಿಸುತ್ತವೆ.

ಮುಂದುವರಿದ ದೇಶಗಳಲ್ಲಿನ ಸರ್ಕಾರೇತರ ಸಂಸ್ಥೆಗಳು ಹಿಂದುಳಿದ ದೇಶದಲ್ಲಿರುವ ಸರ್ಕಾರೇತರ ಸಂಸ್ಥೆಗಳ ಮುಖಾಂತರ ಸಮಾಜ ಸೇವೆಗೆ ಅನುದಾನವನ್ನು ನೀಡುತ್ತಾವೆ. ಕೆಲವು ಸರ್ಕಾರೇತರ ಸಂಸ್ಥೆಗಳು ಉನ್ನತ ಶಿಕ್ಷಣಕ್ಕೆ ಪ್ರತಿಭಾವಂತರಿಗೆ ಅನುದಾನ ನೀಡುತ್ತಾವೆ. ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳಿಗೆ ಹಣಕಸಿನ ನೆರವು ನೀಡುತ್ತವೆ. ಹೀಗೆ ಸರ್ಕಾರೇತರ ಸಂಸ್ಥೆಗಳು ದೇಶಿಯ ಸಂಸ್ಕೃತಿಯ ಉಳಿವಿಗೆ ನೆರವಾಗುತ್ತವೆ.

ಸರ್ಕಾರೇತರ ಸಂಸ್ಥೆಗಳು ಹಿಂದುಳಿದ ದೇಶಗಳ ಸಮಗ್ರ ಗ್ರಾಮೀಣಾಭಿವೃದ್ಧಿಗೆ ಪೂರಕವಾಗುವ ಕಾರ್ಯಗಳನ್ನು ಮಾಡುತ್ತಿರುತ್ತವೆ. ಅವುಗಳ ಪ್ರಭಾವ ಹೀಗಿರುತ್ತದೆ.

೧. ಸರ್ಕಾರೇತರ ಸಂಸ್ಥೆಗಳು ಜಾತ್ಯತೀತ, ರಾಜಕೀಯೇತರ ಸಂಗಟನೆಗಳಾಗಿರುವುದರಿಂದ ಜಾತ್ಯತೀತ ವ್ಯವಸ್ಥೆಯನ್ನು ಬಲಪಡಿಸುತ್ತದೆ.

೨. ಅವು ಕೋಮು ಅಥವಾ ಮತ, ಪಕ್ಷ ಅಥವಾ ಭಾಷೆಯ ಹೆಸರಲ್ಲಿ ನಡೆಯುವ ಸ್ವಾರ್ಥ ರಾಜಕಾರಣದ ವಿರುದ್ಧ ಜನಜಾಗೃತಿ ಮೂಡಿಸುತ್ತವೆ.

೩. ಸರ್ಕಾರೇತರ ಸಂಸ್ಥೆಗಳು ಜನರನ್ನು ಬೀದಿಪಾಲು ಮಾಡುವ ಆರ್ಥಿಕ ಯೋಜನೆಗಳನ್ನು ವಿರೋದಿಸುತ್ತದೆ.

೪. ಕೆಲವು ಸರ್ಕಾರೇತರ ಸಂಸ್ಥೆಗಳು ಕಲೆ, ಕ್ರೀಡೆ ಮತ್ತು ಸಾಂಸ್ಕೃತಿಕ ಸಂಪತ್ತನ್ನು ಉಳಿಸಲು ಮತ್ತು ಬೆಳೆಸಲು ಸಹಾಯ ಮಾಡುತ್ತವೆ.

೨.೪. ಸಂಶೋಧನಾ ಕ್ಷೇತ್ರದ ಪರಿಚಯ

ಕೇರಳದ ಅತೀ ಉತ್ತರದ ಜಿಲ್ಲೆಯಾದ ಕಾಸರಗೋಡಿನ ನಾಲ್ಕು ತಾಲೂಕುಗಳಲ್ಲಿ ಅತ್ಯಂತ ಉತ್ತರದಲ್ಲಿರುವ ತಾಲೂಕು ಮಂಜೇಶ್ವರ. ಅದಲ್ಲದೆ ಕೇರಳ ರಾಜ್ಯದ ಅತ್ಯಂತ ಉತ್ತರದ ತಾಲೂಕು ಎಂಬ ವಿಶೇಷತೆಯು ಮಂಜೇಶ್ವರ ತಾಲೂಕಿಗಿದೆ. ಈ ತಾಲೂಕಿನ ಉತ್ತರಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ

ಮಂಗಳೂರು, ದಕ್ಷಿಣಕ್ಕೆ ಕಾಸರಗೋಡು, ಪೂರ್ವಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಪಶ್ಚಿಮಕ್ಕೆ ವಿಶಾಲವಾದ ಅರಬಿ ಸಮುದ್ರ. ಮಂಜೇಶ್ವರ್ ಅಥವಾ ಮಂಜೇಶ್ವರಂ ಎಂದು ಕರೆಯಲ್ಪಡುವ ಈ ತಾಲೂಕು ಕೇರಳದ ರಾಜಧಾನಿಯಾದ ತಿರುವನಂತಪುರದಿಂದ ೩೬೦ ಮೈಲು(೫೮೪ ಕಿ,ಮೀ.) ದೂರದಲ್ಲಿದ್ದು ಮಂಗಳೂರಿನಿಂದ ಸುಮಾರು ೨೫ ಕಿ.ಮೀ ದಕ್ಷಿಣಕ್ಕಿದೆ. ಮಂಜೇಶ್ವರ ಕಾಸರಗೋಡಿನ ಕರವಾಳಿ ತಾಲೂಕು ಎಂದು ಕರೆಯಲ್ಪಡುತ್ತದೆ.

ಮಂಜೇಶ್ವರ ನೆಲದ ಶ್ರೇಷ್ಠತೆಯಿಂದ, ಜಲದ ಫಲದ ಸಮೃದ್ಧಿಯಿಂದ ಜನತೆಯ ಸದ್ಗುಣ ಸಜ್ಜನಿಕೆಗಳಿಂದ ಕೇರಳ, ಕರ್ನಾಟಕ, ತಮಿಳುನಾಡು ರಾಜ್ಯಗಳಾದ್ಯಂತ ಹಿಂದಿನಿಂದ ಇಂದಿನವರೆಗೆ ಪ್ರಖ್ಯಾತವಾಗಿದೆ. ಮಾತ್ರವಲ್ಲದೆ ಇನ್ನೂ ಹಲವಾರು ಗುಣ ವಿಶೇಷಗಳಿಂದ ರಾಷ್ಟ್ರ ಅಂತರಾಷ್ಟ್ರ ವ್ಯಾಪ್ತಿಯಾಗಿ ಕೀರ್ತಿ ಪಡೆದಿದೆ. ಮಂಜೇಶ್ವರ ಪ್ರಪಂಚದಲ್ಲಿಯೇ ಶ್ರೇಷ್ಠ ಮಟ್ಟದ ಅಡಿಕೆ ಬೆಳೆಯುವ ಪ್ರದೇಶವಾಗಿದೆ. ಇಲ್ಲಿ ಕುಂಬಳೆ, ಸೀರೆ, ಉಪ್ಪಳ, ಮಂಜೇಶ್ವರ, ಉದ್ಯಾವರ ಮೊದಲಾದ ಹೊಳೆಗಳು ಹರಿದು ನೆಲವನ್ನು ಫಲವತ್ತಾಗಿ ಮೂಡಿದೆ. ಅಡಿಕೆ, ತೆಂಗು, ಕರಿಮೆಣಸು, ಭತ್ತ ಇಲ್ಲಿಯ ಪ್ರಧಾನ ಕೃಷಿ ಬೆಳೆಗಳು. ಹಿಂದು, ಮುಸ್ಲಿಂ, ಕ್ರಿಶ್ಚಿಯನ್ ಮತಗಳ ಎಲ್ಲಾ ಜನರು ಉತ್ತಮ ಸೌಹಾರ್ದದಿಂದ ಶಾಂತ ಜೀವನ ನಡೆಸುವ ಈ ಪ್ರದೇಶ ಬಹು ಭಾಷಾ ಸಂಗಮ ಭೂಮಿ ಎಂದು ಪ್ರಸಿದ್ಧಿಯಾಗಿದೆ.

ಈ ತಾಲೂಕು ೨೧ ಫೆಬ್ರವರಿ ೨೦೧೪ರಲ್ಲಿ ರೂಪಿಕೃತಗೊಂಡಿತ್ತು. ಅದರ ಮೊದಲು ಕಾಸರಗೋಡು ತಾಲೂಕಿನ ಒಂದು ಭಾಗವಾಗಿದ್ದ ಮಂಜೇಶ್ವರ ಬ್ಲಾಕ್‌ನ ಮಂಗಲ್ಪಾಡಿ, ಕುಂಬಳೆ, ಪೈವಳಿಕೆ, ಮಂಜೇಶ್ವರ, ಎಣ್ಮಕಜೆ, ಮೀಂಜ, ಪುತ್ತಿಗೆ, ವರ್ಕಾಡಿ ಎಂಬ ಪಂಚಾಯತುಗಳನ್ನು ಸೇರಿಸಿ ಮಂಜೇಶ್ವರ ತಾಲೂಕು ರೂಪಿಕರಿಸಲಾಯಿತು. ಕನ್ನಡ ಮತ್ತು ತುಳು ಮಾತೃ ಭಾಷೆಯಾಗಿರುವ ಹೆಚ್ಚು ಜನರು ಇರುವ ಈ ಗಡಿನಾಡಿನ ತಾಲೂಕು ತುಳುನಾಡಿನ ತಾಲೂಕು ಎಂದೇ ಹೇಳಬಹುದು.

ಮಂಜೇಶ್ವರ ತಾಲೂಕಲ್ಲಿ ಮಂಜೇಶ್ವರ, ಉಪ್ಪಳ ಕುಂಬಳೆ ಪ್ರಮುಖ ಪಟ್ಟಣಗಳಾಗಿದ್ದು ಭಾರತದಲ್ಲಿ ಅತೀ ದೊಡ್ಡ ಮತ್ತು ನುಗ್ಗಾಟ ಇರುವ ರಾಷ್ಟ್ರೀಯ ಹೆದ್ದಾರಿ ೬೬ ಈ ಮೂರು ಪಟ್ಟಣಗಳ ಮೂಲಕ ಹೋಗುತ್ತದೆ. ಅದರಲ್ಲಿ ಕುಂಬಳೆಯು ಇನ್ನೂ ಹೆಚ್ಚು ಮಹತ್ವವನ್ನು ಪಡೆದ ಮಂಜೇಶ್ವರ ತಾಲೂಕಿನ ಒಂದು ಪ್ರಸಿದ್ಧ ಸ್ಥಳವಾಗಿದೆ. ಹಲವಾರು ವಿದೇಶಿ ಸಂಚಾರಿಗಳು ಕುಂಬಳೆ, ಸೀಮೆಗೆ ಬೇಟಿ ನೀಡಿದ್ದಾರೆ. ೯ನೇ ಮತ್ತು ೧೪ ಶತಮಾನದಲ್ಲಿ ಹಲವು ಅರಬರು ಇಲ್ಲಿ ಬೇಟಿ ನೀಡಿದ್ದಾರೆ. ಅವರಿಗೆ ವ್ಯಾಪರಕ್ಕೆ ಇದ್ದ ಮುಖ್ಯ ತಾಣವಾಗಿತ್ತು. ಕುಂಬಳೆ ಪೋರ್ಚ್‌ಗೀಸ್ ಸಂಚಾರಿ ಡ್ಯುರೇಟ್ ಬಾರ್‌ಬಾಸಾ ೧೫೧೪ರಲ್ಲಿ ಹುರಿಹಗ್ಗದ ವ್ಯಾಪರಕ್ಕೆ ಕುಂಬಳೆಗೆ ಬಂದಿದ್ದರು.

ಮಂಜೇಶ್ವರ ತಾಲೂಕಿನಲ್ಲಿ ವಾಸಿಸುತ್ತಿರುವ ಹೆಚ್ಚಿನ ಎಲ್ಲಾ ಕುಟುಂಬದಲ್ಲಿರುವ ಒಬ್ಬರು ಅಥವಾ ಇಬ್ಬರು ಸದಸ್ಯರು ವಿದೇಶದಲ್ಲಿ ಉದ್ಯೋಗದಲ್ಲಿರುವುದು ಸರ್ವಸಾಮಾನ್ಯವಾಗಿದೆ. ಈ ತಾಲೂಕಿನ ಹೆಚ್ಚಿನ ಜನರು ಅದರಲ್ಲೂ ಯುವಕರು ಪ್ರೌಢ ಅಥವಾ ಪದವಿಪೂರ್ವ ಶಿಕ್ಷಣ ಮುಗಿಸಿದ ಕೂಡಲೇ ಉದ್ಯೋಗ ಹುಡುಕಿಕೊಂಡು ಅಥವಾ ಉದ್ಯೋಗ ನಿಮಿತ್ತ ಗಲ್ಫ್ ರಾಷ್ಟ್ರಗಳಿಗೆ ಹೋಗುವುದು ಇಲ್ಲಿನ ಸಂಪ್ರದಾಯಂತೆ ಆಗಿ ಬಿಟ್ಟಿದೆ. ಆದುದರಿಂದಲೇ ಇಲ್ಲಿನ ಅತೀ ಕಡು ಬಡವರು ಆರ್ಥಿಕವಾಗಿ ಅತೀ ಬೇಗನೆ ಅಭವೃದ್ಧಿ

ಹೊಂದಲು ಕಾರಣವಾಗಿದೆ. ಕೇರಳದ ಇತರ ಜಿಲ್ಲೆಗಳು ಅಥವಾ ತಾಲೂಕುಗಳಿಗೆ ಹೋಲಿಸಿದರೆ ಕನ್ನಡಿಗರು ಹೆಚ್ಚು ಇರುವ ಮಂಜೇಶ್ವರ ತಾಲೂಕಲ್ಲಿ ಸರ್ಕಾರಿ ಉದ್ಯೋಗದಲ್ಲಿರುವವರು ಕಡಿಮೆ. ಇಲ್ಲಿನ ಜನರಲ್ಲಿ ಗಲ್ಫ್ ರಾಷ್ಟ್ರಗಳಿಗೆ ಉದ್ಯೋಗ ಹುಡುಕಿ ಹೋಗುವುದು ಒಂದು ಗುಂಪಾಗಿದ್ದರೆ. ಊರಲ್ಲೆ ಇದ್ದು ಸಣ್ಣಪುಟ್ಟ ವ್ಯಾಪರ ಮಾಡುವವರು ಇದ್ದಾರೆ. ಸಣ್ಣ ಗುಡಿಕೈಗಾರಿಕೆಯಿಂದ ತೊಡಗಿ ದೊಡ್ಡ ಬಹುರಾಷ್ಟ್ರೀಯ ವ್ಯಾಪರದಲ್ಲಿ ತೊಡಗಿಕೊಂಡವರು ಮಂಜೇಶ್ವರ ತಾಲೂಕಿನಲ್ಲಿ ಇದ್ದಾರೆ.

ಪಶು ಸಂಗೋಪನೆ, ಕೋಳಿಸಾಕಣೆ, ಹಂದಿಸಾಕಣೆ, ಭತ್ತ, ಅಡಿಕೆ, ವೆನಿಲ್ಲಾ, ಕೊಕೊ, ಪುಷ್ಪಕೃಷಿ, ಕರಿಮೆಣಸು, ತರಕಾರಿ ,ಮೊದಲಾದ ಕೃಷಿಯಲ್ಲಿ ತೊಡಗಿಸಿಕೊಂಡವರು, ಉಪ್ಪಿನಕಾಯಿ ತಯಾರಿಕೆ, ಮೇಣದ ಬತ್ತಿ ತಯಾರಿಕೆ, ತಿಂಡಿಗಳ ತಯಾರಿಕೆ, ಬೀಡಿಕಟ್ಟುವ ವೃತ್ತಿ, ಮೊದಲಾದ ಗೃಹ ಕೈಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ಕುಟುಂಬ ನಿರ್ವಹಣೆಯನ್ನು ಮಾಡುವ ಮಹಿಳೆಯರು ಮಂಜೇಶ್ವರ ತಾಲೂಕಿನಲ್ಲಿ ಇದ್ದಾರೆ. ಉದ್ಯೋಗ ಹುಡುಕಿಕೊಂಡು ಬಂದು ಇಲ್ಲಿಯೆ ಖಾಯಂ ಉಳಿದುಕೊಂಡ ಇತರ ರಾಜ್ಯಗಳ ಕಾರ್ಮಿಕರನ್ನು ಮಂಜೇಶ್ವರ ತಾಲೂಕಿನಲ್ಲಿ ಕಾಣಬಹುದು.

ಮಂಜೇಶ್ವರ ತಾಲೂಕಿನ ವಿವಿಧ ಸ್ತರದಲ್ಲಿ ದುಡಿಯುವ ಸಾಮಾನ್ಯ ಜನರನ್ನೊಳಗೊಂಡ ಒಂದು ತಾಲೂಕ್ಕಾಗಿದ್ದು ಜಾತಿ, ಧರ್ಮ, ಸರ್ವಧರ್ಮ ಸಂಘ ಸಂಸ್ಥೆಗಳಲ್ಲಿ ಅದೇ ರೀತಿ ಸಾಮಾಜಿಕ ಸಂಸ್ಥೆಗಳು, ಕ್ಲಬ್‌ಗಳು ಸರ್ಕಾರಿ, ಸಹಕಾರಿ ಮತ್ತು ಸರ್ಕಾರೇತರ(NGO) ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜ ಸೇವೆ, ಆರ್ಥಿಕ ಅಭಿವೃದ್ಧಿ, ಅಂಗಪರಿಮಿತರ, ವಯೋವೃದ್ಧರ, ಅನಾಥ ಮಕ್ಕಳ, ಸಾಮಾಜಿಕ ಸಂಕಷ್ಟಕ್ಕೊಳಗಾದ ಮಹಿಳೆಯರ ರಕ್ಷಣೆಗೆ ಪಾಲನೆಗೆ ಸಮಾಜ ಸೇವೆ ಮಾಡುವವರು ಬಹಳಷ್ಟು ಜನರು ಇಲ್ಲಿ ಇದ್ದಾರೆ.

೨.೫ ಮಂಜೇಶ್ವರ ತಾಲೂಕಿನಲ್ಲಿ ಕಾರ್ಯ ನಿರ್ವಹಿಸುವ ಸರ್ಕಾರೇತರ ಸಂಸ್ಥೆಗಳ ಪರಿಚಯ

ಮಂಜೇಶ್ವರ ತಾಲೂಕಿನ ೫ ಪಂಚಾಯತುಗಳಲ್ಲಿ ಕೈಗೊಂಡ ಈ ಸಂಶೋಧನೆಯಲ್ಲಿ ನೋಂದಾಯಿತ ಮತ್ತು ನೋಂದಾಯಿತವಲ್ಲದ ಸರ್ಕಾರೇತರ ಸಂಸ್ಥೆಗಳನ್ನು ಒಳಗೊಳಿಸಿದ್ದು, ಹೆಚ್ಚಿನ ನೋಂದಾಯಿತ ಸರ್ಕಾರೇತರ ಸಂಸ್ಥೆಗಳೆಲ್ಲವೂ ಆರ್ಥಿಕ ಸಹಾಯವನ್ನು ಅದೇ ರೀತಿ ಆರ್ಥಿಕೇತರ ಸೇವೆಯನ್ನು ಸಲ್ಲಿಸುವ ಸಂಸ್ಥೆಗಳಾಗಿವೆ. 'ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ', 'ಕೆನರಾ ಅಬಿವೃದ್ಧಿ ಮತ್ತು ಶಾಂತಿ ಸಂಸ್ಥೆ', 'ನವೋದಯ ಸ್ವ-ಸಹಾಯ ಸಂಸ್ಥೆಗಳು', 'ಕಲ್ಪವೃಕ್ಷ ಸ್ವ-ಸಹಾಯ ಸಂಸ್ಥೆ', 'ಅನಂತಶ್ರೀ ಹೊಲಿಗೆ ತರಬೇತಿ ಸಂಸ್ಥೆ' ಸಂಶೋಧನಾ ವ್ಯಾಪ್ತಿಗೊಳಪಟ್ಟ ಹಣಕಾಸು ಮತ್ತು ಹಣಕಾಸೇತರ ಸರ್ಕಾರೇತರ ಸಂಸ್ಥೆಗಳಾಗಿದ್ದು ಸ್ನೇಹಾಲಯ, ಲಯನ್ಸ್ ಕ್ಲಬ್ ಮೊದಲಾದ ಇತರ ಸಂಸ್ಥೆಗಳು ಈ ಪ್ರದೇಶ ವ್ಯಾಪ್ತಿಯಲ್ಲಿ ಕಾರ್ಯಚರಿಸುತ್ತಿದ್ದು ಸಂಪನ್ಮೂಲಗಳ ಬಳಕೆ, ಸಂಪನ್ಮೂಲಗಳ ಬಳಕೆಯ ಮಾಹಿತಿ, ಕುಟುಂಬ ಯೋಜನೆ, ಶಿಕ್ಷಣ, ಆರೋಗ್ಯ, ಸಾಮಾಜಿಕವಾಗಿ ಶೋಷಿತರ ರಕ್ಷಣೆ ಮತ್ತು ಅವರ ಅಭಿವೃದ್ಧಿ ಮೂಲಭೂತ ಅಗತ್ಯವಾದ ವಸ್ತುಗಳ ಕಾರ್ಯ, ಪರಿಸರ ಸಂರಕ್ಷಣೆ, ಪರಿಶಿಷ್ಟ ಜಾತಿ, ಪಂಗಡದ ಜನರ ಏಳಿಗೆಗೆ ಪ್ರಯತ್ನಪಡುವುದು ಆರ್ಥಿಕವಾಗಿ ಜನರಿಗೆ ಸಹಾಯ ಮಾಡುವುದು ಇತ್ಯಾದಿ ಮುಖ್ಯವಾದ ಉದ್ದೇಶಗಳನ್ನಿಟ್ಟುಕೊಂಡಿರುವ ಸಂಸ್ಥೆಗಳಾಗಿವೆ.

೨.೫.೧ "ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ"

ಕರ್ನಾಟಕದ ಬೆಳ್ತಂಗಡಿ ತಾಲೂಕಿನಲ್ಲಿ 1982ರಲ್ಲಿ ಪ್ರಾರಂಭವಾದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಸಮಗ್ರ ಗ್ರಾಮೀಣಾಭಿವೃದ್ಧಿ ಕಲ್ಪನೆಯನ್ನು ಸಾಕಾರಗೊಳಿಸಿ ಮಹತ್ವಪೂರ್ಣ ಸಾಧನೆ ಮಾಡಿದೆ. ಸಣ್ಣ ಮತ್ತು ಅತೀ ಸಣ್ಣ ಕಾರ್ಮಿಕರು ಹಾಗೂ ಗ್ರಾಮೀಣ ಪ್ರದೇಶದ ಬಡ ಮಹಿಳೆಯರು ಈ ಯೋಜನೆಯ ಪಾಲುದಾರರಾಗಿದ್ದಾರೆ. ಅನೇಕರು ಈ ಅಭಿವೃದ್ಧಿ ಪ್ರಜ್ಞೆಯುಳ್ಳ ಹಿತಾಸಕ್ತರಾಗಿ ವಿಕಸನ ಹೊಂದಿದ್ದಾರೆ.

ಕಾಲಕಾಲಕ್ಕೆ ರೂಪಂತರಗೊಂಡ ಈ ಯೋಜನೆಯು ಕರ್ನಾಟಕದ ಇಪ್ಪತ್ತೈದು ಜಿಲ್ಲೆಗಳಲ್ಲಿ ಮತ್ತು ಕೇರಳದ ಕಾಸರಗೋಡು ಜಿಲ್ಲೆಯ ಕಾಸರಗೋಡು ಮತ್ತು ಮಂಜೇಶ್ವರ ತಾಲೂಕಲ್ಲಿ ಅನುಷ್ಠಾನಗೊಂಡು ತನ್ನ ಪ್ರಭಾವ ಬೀರುತ್ತಿದೆ. ಸುಮಾರು 33 ಲಕ್ಷ ಸದಸ್ಯರು ಈ ಯೋಜನೆಯ ಲಾಭ ಪಡೆಯುತ್ತಿದ್ದಾರೆ.

ರೈತಾಪಿ ಕುಟುಂಬಗಳ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಲ್ಲಿ ಯೋಜನೆಯು ಮಹತ್ವಪೂರ್ಣ ಸಾಧನೆಯನ್ನು ಮಾಡಿದೆ. ಕೃಷಿಗೆ ಪೂರಕವಾದ ಪ್ರಗತಿ ಬಂಧು ಕಾರ್ಯಕ್ರಮ, ಉಪಯುಕ್ತ ತಂತ್ರಜ್ಞಾನದ ಬಳಕೆ ಸ್ವಾಲಲಂಬಿಯಾಗಿ ಬದುಕಬೇಕೆಂಬ ಮಾರ್ಗದರ್ಶನ ಪರಸ್ಪರ ಸಹಕಾರ, ಗೌರವದ ಬದುಕಿನತ್ತ ಪಯಣ ಮತ್ತು ಪರಿಶ್ರಮದಿಂದಲೇ ಬಡತನ ನಿವಾರಣೆ ಸಾಧ್ಯವೆಂಬ ವಿಚಾರ ಯೋಜನೆ ಪ್ರಮುಖ ಅಂಶಗಳಾಗಿವೆ. ಇದು ರೈತ ಸಮುದಾಯದ ಸಂಘಟನೆಯಾಗಿದ್ದು ಇವರು ವಾರದಲ್ಲಿ ಕಡ್ಡಾಯ ಉಳಿತಾಯ ಮಾಡಿ ತಮ್ಮ ಪ್ರಗತಿಗಾಗಿ ಹಿಡುವಳಿ ಯೋಜನೆ ಎಂಬ ಕ್ರಿಯಾ ಯೋಜನೆ ರೂಪಿಸಿರುವವರು. ಈ ಯೋಜನೆಯಡಿಯಲ್ಲಿ ವಿವಿಧ ವಿಚಾರಗಳ ಬಗ್ಗೆ ತಾಂತ್ರಿಕ ತರಬೇತಿಯು ಕೂಡ ಲಭಿಸುತ್ತದೆ. ಇದೀಗ ಮಹಿಳೆಯರು ಕೂಡಾ ಸಂಘಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಡಾ॥ ವೀರೇಂದ್ರ ಹೆಗ್ಗಡೆಯವರು ಹಳ್ಳಿಗಳಿಗೆ ಬೇಟಿ ನೀಡಿದಾಗ ಬಡತನ ಕರುಣಾಜನಕ ಸ್ಥಿತಿಗತಿಗಳನ್ನು ಗಮನಿಸಿದಾಗ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಪ್ರೇರಕ ಎನ್ನುತ್ತಾರೆ. ಬಡಕುಟುಂಬಗಳ ಅಭಿವೃದ್ಧಿಗೆ ಅವಶ್ಯಕರವಾದ ಮೂಲಭೂತ ಸೌಲಭ್ಯಗಳನ್ನು ಮನೆ ನಿರ್ಮಾಣ, ಆರೋಗ್ಯ, ಪಶುಸಂಗೋಪನೆ, ರೇಷ್ಮೆ ಕೃಷಿ, ಜೇನು ವ್ಯವಸಾಯ, ಗುಡಿಕೈಗಾರಿಕೆ ಈ ರೀತಿ ಉಪ ಚಟುವಟಿಕೆಗಳಿಗೆ ಬೇಕಾದ ಅನುದಾನಗಳನ್ನು ನೀಡಲಾಯಿತು.

ಮಂಜೇಶ್ವರ ತಾಲೂಕಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಯೋಜನೆಯಡಿಯಲ್ಲಿ ಅನೇಕ ಸ್ವ-ಸಹಾಯ ಸಂಘಗಳಿದ್ದು ಹಣಕಾಸು ಮತ್ತು ಹಣಕಾಸೇತರ ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದು ಬಡ ರೈತರಿಗೆ, ಸಣ್ಣ ವ್ಯವಸಾಯಿಗಳಿಗೆ, ಮಹಿಳೆಯರಿಗೆ ಆಶಾದಾಯಕ ಪ್ರವೃತ್ತಿಯಾಗಿದೆ.

೨.೫.೨. ಕೆನರಾ ಅಭಿವೃದ್ಧಿ ಮತ್ತು ಶಾಂತಿ ಸಂಸ್ಥೆ

ಮಂಗಳೂರಿನ ಕಥೋಲಿಕ್ಸ್ ಕ್ರಿಶ್ಚಿಯನ್ ಸಮುದಾಯದ ಸಮಾಜ ಸೇವೆಗೆ ನಿದರ್ಶನವಾಗಿ ಕೆನರಾ ಅಭಿವೃದ್ಧಿ ಮತ್ತು ಶಾಂತಿ ಸಂಸ್ಥೆ ೧೯೭೭ರಲ್ಲಿ ಅಸ್ತಿತ್ವಕ್ಕೆ ಬಂತು. ಮೈಸೂರು ಸೊಸೈಟಿ ರೆಗ್ಯುಲೇಶನ್ ಆಕ್ಟ್ ಪ್ರಕಾರ ನೋಂದಾಯಿಸಲ್ಪಟ್ಟಿತು. ಈ ಸಂಸ್ಥೆಯ ಮೂಲ ಕಛೇರಿಯು ಮಂಗಳೂರಿನ ನಂತೂರಿನಲ್ಲಿದ್ದು

ಕೇರಳದ ಗಡಿನಾಡಿನ ತಾಲೂಕಾದ ಮಂಜೇಶ್ವರಕ್ಕೆ ಇದರ ಕಾರ್ಯಕ್ರಮಗಳನ್ನು ವಿಸ್ತರಿಸಿರುತ್ತಾರೆ. ಕೆನರಾ ಅಭಿವೃದ್ಧಿ ಮತ್ತು ಶಾಂತಿ ಸಂಸ್ಥೆಯು ಅದರ ವಿವಿಧ ಕಾರ್ಯಯೋಜನೆಗಳಿಂದ ಮಂಜೇಶ್ವರ ತಾಲೂಕಿನಲ್ಲಿ ಜನಪ್ರಿಯ ಸರ್ಕಾರೇತರ ಸಂಸ್ಥೆಯಾಗಿದ್ದು ಸ್ವ-ಸಹಾಯ ಸಂಘಟನೆಗಳ ಮೂಲಕ ಜನರಿಗೆ ಅಭಿವೃದ್ಧಿಯ ದಾರಿಯನ್ನು ತೋರಿಸುತ್ತದೆ. ಕಷ್ಟದಿಂದ ಬಳಲುತ್ತಿರುವ ಅಂಗವಿಕಲರಿಗೆ, ನಿರ್ಗತಿಕರಿಗೆ, ಶೋಷಿಣಿಗೊಳಗಾದ ಮಹಿಳೆಯರಿಗೆ ತಮ್ಮ ಬದುಕನ್ನು ಮುನ್ನೆಡೆಸಲು ಸಹಾಯಹಸ್ತವನ್ನು ನೀಡಿದೆ. ಈ ಸಂಸ್ಥೆಯು ಕಾರ್ಯ ಪ್ರವೃತ್ತವಾಗಿರುವ ವ್ಯಾಪ್ತಿಯಲ್ಲಿ ಬರುವ ಅನಾಥಾಶ್ರಮಗಳಿಗೆ, ಆಸ್ಪತ್ರೆಗೆ, ಚರ್ಚುಗಳಿಗೆ, ಕಾನ್ವೆಂಟುಗಳಿಗೆ ಸಹಾಯವನ್ನು ಮಾಡುತ್ತದೆ. ಕುಡಿತದ ಚಟ ಉಳ್ಳವರಿಗೆ ಕುಡಿತದಿಂದ ಮುಕ್ತರಾಗಲು ವೈದ್ಯಕೀಯ ಮತ್ತು ಸಾಮಾಜಿಕ ಸಹಾಯ, ದಲಿತರ ಕಲ್ಯಾಣ, ಮಕ್ಕಳ ಮತ್ತು ಗೃಹ ಕಾರ್ಮಿಕರಾದ ಮಹಿಳೆಯರ ಕಲ್ಯಾಣ, ಮಾನವ ಹಕ್ಕುಗಳಿಗೆ ದಕ್ಕೆ ಬಂದಾಗ ಹೋರಾಟ ಮೊದಲಾದ ಸಾಮಾಜಿಕ ಕಳಕಳಿಯ ಕಾರ್ಯದಲ್ಲಿ ತೊಡಗಿದೆ.

ಈ ಸಂಸ್ಥೆಯು ಕಾಸರಗೋಡು ಮತ್ತು ಮಂಜೇಶ್ವರ ತಾಲೂಕಿನಲ್ಲಿ ಕಾರ್ಯಕರ್ತೆಯರ ಮುಖಾಂತರ ಸ್ವ-ಸಹಾಯ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಗ್ರಾಮೀಣ ಮಹಿಳೆಯರನ್ನು ಸ್ವಾವಲಂಬನೆ, ಘನತೆ, ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕವಾಗಿ ಶಕ್ತರಾಗಲು ಮಾರ್ಗದರ್ಶನವನ್ನು ನೀಡುತ್ತದೆ. ನಿರುದ್ಯೋಗಿ ಯುವಕರನ್ನು ಗುರುತಿಸಿ ಅವರಿಗೆ ಸ್ವ-ಉದ್ಯೋಗ ತರಬೇತಿ, ಮಾಹಿತಿಯನ್ನು ನೀಡುವುದು, ಯುವಜನತೆಗೆ ಉನ್ನತ ಶಿಕ್ಷಣ, ವೃತ್ತಿಪರ ಶಿಕ್ಷಣಕ್ಕೆ ಬೇಕಾದ ಮಾಹಿತಿ ಹಾಗೂ ಆರ್ಥಿಕ ಸಹಾಯವನ್ನು ನೀಡುವುದು, ಸುತ್ತಮುತ್ತಲಿನ ಪರಿಸರ ಸಂರಕ್ಷಣೆ, ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮಹಿಳೆಯರಿಗೆ. ರೋಗ ರುಜಿನಗಳು ಹರಡುವ ವಿವಿಧ ರೀತಿಗಳ ಮಾಹಿತಿಯನ್ನು ಮನದಟ್ಟು ಮಾಡಿ ಕುಟುಂಬದಲ್ಲಿರುವ ಸದಸ್ಯರ ಆರೋಗ್ಯವನ್ನು ಕಾಪಡಿಕೊಳ್ಳುವ ಗುಟ್ಟನ್ನು ಈ ಸಂಘಗಳ ಆರೋಗ್ಯ ಜಾಗೃತಿ ಕಾರ್ಯಗಳ ಮೂಲಕ ನೀಡಲಾಗುತ್ತದೆ.

ಮಂಜೇಶ್ವರ ಎಣ್ಮಕಜೆ ಪಂಚಾಯತ್ ವ್ಯಾಪ್ತಿಯಲ್ಲಿ ಎಂಡೋಸಲ್ಫಾನ್ ಪೀಡಿತರನ್ನು ಗುರುತಿಸಿ ಅವರ ಆರೋಗ್ಯಕ್ಕೆ ವೈದ್ಯಕೀಯ ತಪಾಸಣೆಯ ಕಾರ್ಯಕ್ರಮದ ಸೌಕರ್ಯವನ್ನು ಕೆನರಾ ಅಭಿವೃದ್ಧಿ ಮತ್ತು ಶಾಂತಿ ಸಂಸ್ಥೆ ನೀಡಿರುತ್ತದೆ. ಅದಲ್ಲದೆ, ಸ್ವ-ಉದ್ಯೋಗ ತರಬೇತಿಯ ಬಗ್ಗೆ ಮಾಹಿತಿ, ಸರಕಾರಿ ಸವಲತ್ತುಗಳ ಬಗ್ಗೆ ಮಾಹಿತಿ ನೀಡಿ ಅವರನ್ನು ಆರ್ಥಿಕವಾಗಿ ಸದೃಢರಾಗಿ ಸಮಾಜದ ಮುಖ್ಯ ವಾಹಿನಿಗೆ ತರಲು ಪ್ರಯತ್ನ ಪಡುತ್ತಿದೆ.

೨.೫.೩. ನವೋದಯ ಸ್ವ-ಸಹಾಯ ಸಂಘಗಳು

ಎನ್ ರಾಜೇಂದ್ರ ಕುಮಾರ್ ಮುಂದಾಳತ್ವದಲ್ಲಿ ನವೋದಯ ಸ್ವ-ಸಹಾಯ ಸಂಘಗಳು ದಕ್ಷಿಣ-ಕನ್ನಡ ಜಿಲ್ಲೆಯಲ್ಲಿ ಪ್ರಾರಂಭವಾಗಿ ಗಡಿನಾಡಿನ ಜಿಲ್ಲೆಗೂ ವಿಸ್ತರಿಸಿದೆ. ನವೋದಯ ಸ್ವಸಹಾಯ ಗುಂಪುಗಳಲ್ಲಿಯೂ ಸಾಮಾನ್ಯವಾಗಿ ಮಹಿಳೆಯರು ಮತ್ತು ಪುರುಷರು ಸಣ್ಣಮಟ್ಟ ತಂಡಗಳನ್ನು ರಚಿಸಿ, ಉಳಿತಾಯ ಮನೋಭಾವನೆಯನ್ನು ಬೆಳೆಸುವುದರ ಮೂಲಕ ಸಾಮಾಜಿಕ ಮತ್ತು ರಾಜಕೀಯ ಹಾಗೂ ಆರ್ಥಿಕವಾಗಿ ಸ್ವಾವಲಂಬನೆಯನ್ನು ಸಾಧಿಸುವುದು.

ಹಿಂದುಳಿದ ಬಡಜನರ ಜೀವನ ಮಟ್ಟ ಸುಧಾರಣೆಯು ಉದ್ಯೋಗದ ಆದಾಯ ಹೆಚ್ಚಳದಿಂದ ಸಾಧಿತವಾಗುವುದು ಎಂಬುದು ನವೋದಯ ಸ್ವ-ಸಹಾಯದ ಆಶಯ. ಈ ಸಂಘ ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.

- ಸ್ವ-ಸಹಾಯದಿಂದ ಸ್ವಾವಲಂಬಿಯಾಗಲು ಪ್ರೋತ್ಸಾಹ
- ಆರ್ಥಿಕ ಚಟುವಟಿಕೆಗಳಲ್ಲಿ ಗ್ರಾಮೀಣ ಜನರ ಪಾಲ್ಗೊಳ್ಳುವಿಕೆಗೆ ಸಹಭಾಗಿತ್ವಕ್ಕೆ ಮನ್ನಣೆ ನೀಡುವುದು.
- ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು
- ಗ್ರಾಮೀಣ ಬಡಜನರಲ್ಲಿ ಉಳಿತಾಯದ ಮನೋಭಾವನೆಯನ್ನು ಉತ್ತೇಜಿಸುವುದು.

೨.೫.೪. ಕಲ್ಪವೃಕ್ಷ ಮತ್ತು ಅನಂತಶ್ರೀ

ಭಾರತಾದ್ಯಾಂತ ಬೆಳೆಯುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಗ್ರಾಮೀಣ ಅಭಿವೃದ್ಧಿ ಚಟುವಟಿಕೆಗಳು ಪ್ರಾಮುಖ್ಯವಾಗಿದೆ. ನೋಂದಾಯಿತ ಮತ್ತು ನೋಂದಾಯಿತವಲ್ಲದ ಸಂಘ ಸಂಸ್ಥೆಗಳು ಜನರಲ್ಲಿ ಸ್ವಾವಲಂಬನೆಯನ್ನು ತರಲು ಹಲವು ರೀತಿಯ ಪ್ರಯತ್ನವನ್ನು ಮಾಡುತ್ತಿವೆ. ಮಂಜೇಶ್ವರ ತಾಲೂಕಿನಲ್ಲಿ ಕಾರ್ಯಪ್ರವೃತವಾಗಿರುವ ಕಲ್ಪವೃಕ್ಷ ಮತ್ತು ಅನಂತಶ್ರೀ ನೋಂದಾಯಿತವಲ್ಲದ ಸರ್ಕಾರೇತರ ಸಂಸ್ಥೆಗಳಾಗಿದ್ದು ಹಿಂದುಳಿದ ಬಡಜನರ ಜೀವನಮಟ್ಟ ಸುಧಾರಣೆಯಲ್ಲಿ ಮಹತ್ತರವಾದ ಪಾತ್ರವಹಿಸುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಹಲವು ಕಾರಣಗಳಿಂದ ಅರ್ಧದಲ್ಲಿ ವಿದ್ಯಾಭ್ಯಾಸ ಮೊಟಕುಗೊಂಡು ಅನುತ್ಪಾದಕರಾಗಿ ಮನೆಯಲ್ಲೇ ಉಳಿದಿರುವ ಹೆಣ್ಣು ಮಕ್ಕಳಿಗೆ, ಮಹಿಳೆಯರಿಗೆ ಹೊಲಿಗೆ ತರಬೇತಿ, ಕಸೂತಿ ತರಬೇತಿ, ವಸ್ತ್ರ ವಿನ್ಯಾಸ ತರಬೇತಿ, ಮೇಣದ ಬತ್ತಿ ತಯಾರಿಕೆ, ಉಪ್ಪಿನಕಾಯಿ ತಯಾರಿ ಮೊದಲಾದ ಗೃಹಕೈಗಾರಿಕೆಗೆ ತರಬೇತಿ ನೀಡುವುದು ಈ ಸಂಸ್ಥೆಗಳು ಗ್ರಾಮೀಣ ಅಭಿವೃದ್ಧಿ ನೀಡುವ ಕೊಡುಗೆಯಾಗಿದೆ. ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗವಕಾಶಗಳ ಮಾಹಿತಿ ನೀಡುವುದು, ರೋಗ ಪೀಡಿತರಿಗೆ ರಕ್ತದ ಪೂರೈಕೆ, ಔಷಧೀಯ ಸಹಾಯ ಒದಗಿಸುವಿಕೆ, ನುರಿತ ವೈದ್ಯರ ಚಿಕಿತ್ಸೆ ಲಭಿಸುವಂತೆ ಮಾಡುವುದು, ಆಹಾರ ವಸ್ತುಗಳನ್ನು ಆಸ್ಪತ್ರೆಗೆ ಪೂರೈಸುವುದು ಮೊದಲಾದ ವೈದ್ಯಕೀಯ ಸಹಾಯ ನೀಡುತ್ತಾರೆ. ಅದುಅಲ್ಲದೆ ಗ್ರಾಮೀಣ ಪ್ರದೇಶದಲ್ಲಿ ಬಡಜನರ ಸಾಮಾಜಿಕ ಆಚರಣೆ ಅಂದರೆ ಮದುವೆ-ಮಂಜಿ, ಗೃಹಪ್ರವೇಶ, ಪೂಜೆ-ಪುರಸ್ಕಾರಗಳಿಗೆ ಈ ಸಂಸ್ಥೆಗಳ ಸದಸ್ಯರು ಸಹಾಯಹಸ್ತವನ್ನು ನೀಡುತ್ತಾರೆ. ಒಟ್ಟಾರೆ ರಾಷ್ಟ್ರೀಯ ಮಟ್ಟದಲ್ಲಿ ನೋಂದಾಯಿತ ಜನಪ್ರಿಯ ಸಂಸ್ಥೆಗಳು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಾಗ ಗ್ರಾಮೀಣ ಮಟ್ಟದಲ್ಲಿರುವ ನೋಂದಾಯಿತವಲ್ಲದ ಕೆಲವು ಸಂಸ್ಥೆಗಳು ತನ್ನ ಅಳಿಲು ಸೇವೆಯನ್ನು ಗ್ರಾಮೀಣ ಅಭಿವೃದ್ಧಿ ನೀಡುತ್ತಿರುವುದು ಗಣನೀಯ.

೨.೫.೫ ಸ್ನೇಹಾಲಯ ಮಾನಸಿಕ ಮತ್ತು ಸಾಮಾಜಿಕ ಪುರ್ನವಸತಿ ಸಂಸ್ಥೆ

ಸ್ನೇಹಾಲಯ ಮಾನಸಿಕ ಮತ್ತು ಸಾಮಾಜಿಕ ಪುರ್ನವಸತಿ ಸಂಸ್ಥೆ ೨೬ ಅಗೋಸ್ತು ೨೦೦೯ ಮಂಜೇಶ್ವರ ತಾಲೂಕಿನಲ್ಲಿ ಸ್ಥಾಪಿತವಾಗಿರುವ ಒಂದು ಸಾಮಾಜಿಕ ಕಳಕಳಿಯಿರುವ ಸರ್ಕಾರೇತರ

ಸಂಸ್ಥೆಯಾಗಿದ್ದು ಸರ್ಕಾರದಿಂದ ಯಾವುದೇ ರೀತಿಯ ಅನುದಾನ ಸಿಗದೆ ಇರುವ ಈ ಸಂಸ್ಥೆಯು ದಾನಿಗಳ ಸಹಾಯದಿಂದ ಕಾರ್ಯಪ್ರವೃತ್ತವಾಗಿದೆ. ಈ ಸಂಸ್ಥೆಯು ಸಾಮಾಜಿಕವಾಗಿ ಶೋಷಿತರಾದ, ಮಾನಸಿಕವಾಗಿ ನೋವುಂಡ ಜನರಿಗೆ, ಕುಟುಂಬದಿಂದ ಕಡೆಗಣಿಸಲ್ಪಟ್ಟ ಜನರಿಗೆ ಸಾಂತ್ವನನೀಡುವ ಸಂಸ್ಥೆಯಾಗಿದೆ. ದೀನ ದಲಿತರ, ರೋಗಿಗಳ ವೃದ್ಧರ, ಅಸಕ್ತರ ಕೈಹಿಡಿದು ಅವರನ್ನು ಪುನಃ ಜೀವನಕ್ಕೆ ತಂದ ವ್ಯಕ್ತಿ ಜೋಸೇಫ್ ಕ್ರಾಸ್ತ, ಮದರ್ ತೆರೆಸಾರಿಂದ ಪ್ರೇರಿತರಾದ ಇವರು ತನಗೆ ತಂದೆಯ ಆಸ್ತಿಯಿಂದ ಲಭಿಸಿದ ಪಾಲನ್ನು ಸ್ನೇಹಾಲಯ ಎಂಬ ಸ್ನೇಹದ ಆಲಯ ನಡೆಸಲು ದಾನಮಾಡಿ ಅಲ್ಲಿ ಒಂದು ಮನೆಯನ್ನು ನಿರ್ಮಿಸಿ ಬಡಜನರಿಗೆ ಬೆಳಕನ್ನೂ ನೀಡಿದರು. ಮಂಜೇಶ್ವರ ಗ್ರಾಮೀಣ ಬಡಜನರಿಗೆ ಜೀವನವನ್ನು ಮರಳಿ ನೀಡುತ್ತಿರುವ ಈ ಸಂಸ್ಥೆಯು ಸಾಮಾಜಿಕ ಅಭಿವೃದ್ಧಿಗೆ ಕೊಡುಗೆಯನ್ನು ನೀಡುವ ಸರ್ಕಾರೇತರ ಸಂಸ್ಥೆಯಾಗಿದೆ. ಮನೆಯಿಲ್ಲದವರಿಗೆ, ಮಾನಸಿಕವಾಗಿ ನೊಂದವರಿಗೆ ಮನೆಯಾದ ಸ್ನೇಹಾಲಯದಲ್ಲಿ ಇದೀಗ ಸುಮಾರು ೧೫೦ಕ್ಕಿಂತಲೂ ಅಧಿಕ ಜನರು ಆಶ್ರಯವನ್ನು ಪಡೆದಿರುತ್ತಾರೆ. ಎಷ್ಟೋಪಟ್ಟು ಹೆಚ್ಚು ಜನರು ಸ್ನೇಹಾಲಯದಿಂದ ಆರೋಗ್ಯವಂತರಾಗಿ ತಮ್ಮ ಕುಟುಂಬದವರ ಜೊತೆ ಮನೆಗೆ ಹಿಂತಿರುಗಿದ್ದಾರೆ.

ಅಧ್ಯಾಯ ೩

ಮಂಜೇಶ್ವರ ತಾಲೂಕಿನ ಕ್ಷೇತ್ರಾಧಾರಿತ ವಿಶ್ಲೇಷಣೆ

೩.೧ ಪ್ರವೇಶ :

"ಗ್ರಾಮೀಣಾಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ" ಎಂಬ ಶೀರ್ಷಿಕೆಯ ಈ ಸಂಶೋಧನಾ ಪ್ರಬಂಧದಲ್ಲಿ ಮಂಜೇಶ್ವರ ತಾಲೂಕಿನ ಒಟ್ಟು ೮ ಪಂಚಾಯತುಗಳಲ್ಲಿ ಆಯ್ದ ೫ ಪಂಚಾಯತುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರೇತರ ಸಂಸ್ಥೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ೫ ಪಂಚಾಯತು ವ್ಯಾಪ್ತಿಯಲ್ಲಿ ಹಲವಾರು ಸರ್ಕಾರೇತರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು ಅವುಗಳಲ್ಲಿ ಆರ್ಥಿಕ ಸಹಾಯ ನೀಡುವ ಮತ್ತು ಆರ್ಥಿಕೇತರ ಸೇವೆಯನ್ನು ನೀಡುವ ಸಂಸ್ಥೆಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಈ ಮೇಲೆ ಸೂಚಿಸಲಾದ ಸಂಸ್ಥೆಗಳ ಸದಸ್ಯರು ಅಥವಾ ಫಲಾನುಭವಿಗಳಾಗಿರುವ ೮೦ ಸದಸ್ಯರನ್ನು ಪ್ರಾಥಮಿಕ ಮಾಹಿತಿ ಪಡೆಯಲು ಬಳಸಿಕೊಳ್ಳಲಾಗಿದೆ. ಈ ಅಧ್ಯಯನವು ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿ ಸರ್ಕಾರೇತರ ಸಂಸ್ಥೆಗಳ ಪಾತ್ರವನ್ನು ವಿವರಿಸಲು ಉದ್ದೇಶಿಸಿರುವುದರಿಂದ ಅದಕ್ಕೆ ಅಗತ್ಯವಾಗಿರುವ ಅಂಶಗಳನ್ನು ಪ್ರಶ್ನಾವಳಿಯಲ್ಲಿ ಸೇರಿಸಲಾಗಿದೆ. ಆ ಪ್ರಕಾರ ಫಲಾನುಭವಿಗಳ ಅನುಭವದ ಅಡಿಯಲ್ಲಿ ನೀಡಿದ ಮಾಹಿತಿಯನ್ನು ತಖ್ತೆಯಲ್ಲಿ ಕ್ರೋಡೀಕರಿಸಿ ಅಧ್ಯಯನದ ಫಲಿತವನ್ನು ವಿವರಿಸಲಾಗಿದೆ.

೩.೨.೧ ಸರ್ಕಾರೇತರ ಸಂಘ-ಸಂಸ್ಥೆಗಳ ಫಲಾನುಭವಿ / ಸದಸ್ಯರ ವಿವರ

ಐದು ವರ್ಷದ ಕಾಲವಾಧಿಯಲ್ಲಿ ನಡೆಸಿದ ಈ ಅಧ್ಯಯನದಲ್ಲಿ ಆಯ್ಕೆ ಮಾಡಲಾದ ಫಲಾನುಭವಿಗಳಲ್ಲಿ ಶೇ.೬೨.೫ ರಷ್ಟು ಸದಸ್ಯರು ಕೆನರಾ ಅಭಿವೃದ್ಧಿ ಮತ್ತು ಶಾಂತಿ ಸಂಸ್ಥೆ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಕೆಳಗೆ ಕಾರ್ಯಚರಿಸುತ್ತಿರುವ ಸರ್ಕಾರೇತರ ಸಂಘ ಸಂಸ್ಥೆಗಳ ಸವಲತ್ತುಗಳನ್ನು ಪಡೆದುಕೊಂಡಿರುವುದು ವ್ಯಕ್ತವಾಗಿದೆ. ಅಧ್ಯಯನ ಕ್ಷೇತ್ರದಲ್ಲಿ ಇತರ ಹಲವು ಸರ್ಕಾರೇತರ ಸಂಸ್ಥೆಗಳ ಫಲಾನುಭವಿಗಳು ಒಳಗೊಂಡಿದ್ದು ಶೇ ೩೭.೫ ರಷ್ಟು ಸದಸ್ಯರು ಆರ್ಥಿಕ ಮತ್ತು ಆರ್ಥಿಕೇತರ ಸೌಲಭ್ಯವನ್ನು ಪಡೆದುಕೊಂಡಿರುವುದು ಕಂಡು ಬರುತ್ತದೆ.

೩.೨.೨ ಫಲಾನುಭವಿಗಳ ಲಿಂಗಾನುಪಾತ

ಅಧ್ಯಯನಕ್ಕೆ ಒಳಪಡಿಸಲಾದ ಎಂಬತ್ತು ಮಂದಿ ಫಲಾನುಭವಿಗಳ ಲಿಂಗಾನುಪಾತವನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಫಲಾನುಭವಿಗಳಲ್ಲಿ ಬಹುಪಾಲು ಮಹಿಳಾ ಸದಸ್ಯರಾಗಿರುವುದು ಕಂಡು ಬರುತ್ತದೆ. ಒಟ್ಟು ಎಂಬತ್ತು ಫಲಾನುಭವಿಗಳಲ್ಲಿ ಶೇ. ೮೪ ರಷ್ಟು ಫಲಾನುಭವಿಗಳು ಮಹಿಳೆಯರು. ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರೇತರ ಸಂಸ್ಥೆಗಳ ಸಹಾಯ ಪಡೆದಿರುವುದು ಸಂಶೋಧನೆಯಿಂದ ತಿಳಿದು ಬರುತ್ತದೆ. ಅಧ್ಯಯನದಲ್ಲಿ ಕಂಡು ಬಂದ ಪ್ರಮುಖ ಅಂಶವೆಂದರೆ ಸರ್ಕಾರೇತರ ಸಂಸ್ಥೆಗಳ ಆರ್ಥಿಕ ಮತ್ತು ಆರ್ಥಿಕೇತರ ಸಹಾಯ ಪಡೆಯುವಲ್ಲಿ ಪುರುಷರು ತೊಡಗಿಕೊಳ್ಳದಿರುವುದು ಕಂಡು ಬರುತ್ತದೆ. ಒಟ್ಟು ಎಂಬತ್ತು ಮಂದಿ ಫಲಾನುಭವಿಗಳಲ್ಲಿ ಕೇವಲ ಶೇಕಡ ೧೬ ಮಂದಿ ಅಭಿವೃದ್ಧಿಗಾಗಿ ಸರ್ಕಾರೇತರ ಸಂಸ್ಥೆಗಳ ಸೌಲಭ್ಯಗಳನ್ನು ಬಳಸಿರುತ್ತಾರೆ.

ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆ ಇರುತ್ತದೆ. ಪ್ರಾಚೀನ ಕಾಲದಿಂದಲೂ ಭಾರತೀಯ ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಕುಟುಂಬ ನಿರ್ವಹಣೆಗಾಗಿ

ಮಹಿಳೆಯರು ತಮ್ಮನ್ನು ಆರ್ಥಿಕೇತರ ಚಟುವಟಿಕೆಯಲ್ಲಿ ತೊಡಗಿಸಿದೆ ವಿನಹ ಉತ್ಪಾದನೆ ವಲಯದಲ್ಲಿ ತೊಡಗಿಸಿ ಅದಕ್ಕೆ ಪ್ರತಿಫಲವಾಗಿ ಸಂಭಾವನೆಯನ್ನು ಪಡೆದಿರುವ ಘಟನೆಗಳು ತೀರ ವಿರಳ. ಮಹಿಳೆಯರ ನೈಜ ಸ್ವಾತಂತ್ರ್ಯವು ಆರ್ಥಿಕ ಸ್ವಾತಂತ್ರ್ಯದಿಂದಲೇ ಪ್ರಾರಂಭವಾಗುವುದು ಮತ್ತು ಇದರಿಂದ ಒಂದು ಕುಟುಂಬದ ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಶಕ್ತಿ ಬಲಗೊಳ್ಳುದರ ಮೂಲಕ ಗ್ರಾಮೀಣ ಅರ್ಥವ್ಯವಸ್ಥೆ ಆರ್ಥಿಕವಾಗಿ ಅಭಿವೃದ್ಧಿಗೊಳ್ಳಲು ಸಹಕಾರಿಯಾಗುವುದು ಅಧ್ಯಯನದಿಂದ ತಿಳಿದು ಬರುತ್ತದೆ.

೩.೨.೩ ಫಲಾನುಭವಿಗಳ ವಯೋಮಾನದ ಅಧ್ಯಯನ

ಫಲಾನುಭವಿಗಳ ವಯೋಮಾನವನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಬಹಳ ಸ್ವಾರಸ್ಯಕರವಾದ ಅಂಶವು ವ್ಯಕ್ತವಾಗುತ್ತದೆ. ಅಧ್ಯಯನಕ್ಕೆ ಒಳಪಡಿಸಿದ ಒಟ್ಟು ಫಲಾನುಭವಿಗಳಲ್ಲಿ ಶೇ ೬೨.೫ ರಷ್ಟು ಸದಸ್ಯರು ೩೦ರಿಂದ ೪೫ ವರ್ಷ ಪ್ರಾಯ ಪರಿಧಿಯವರು. ೧೬ ರಿಂದ ೩೦ ಪ್ರಾಯದ ಒಳಗಿರುವ ಜನರು ಕೇವಲ ಶೇ.೧೨.೫ ಫಲಾನುಭವಿಗಳಾಗಿರುವುದು ಕಂಡು ಬರುತ್ತದೆ. ಶೇ. ೧೯ರಷ್ಟು ಫಲಾನುಭವಿಗಳು ೪೬– ೬೦ ವರ್ಷಗಳ ಒಳಗಿನವರಾಗಿದ್ದು ಆರ್ಥಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸರ್ಕಾರೇತರ ಸಂಸ್ಥೆಗಳ ಸಹಾಯ ಪಡೆದಿರುವುದು ಅಧ್ಯಯನದಿಂದ ತಿಳಿದು ಬರುತ್ತವೆ. ಅಷ್ಟು ಮಾತ್ರವಲ್ಲದೆ ೬೦ ವರ್ಷ ಪ್ರಾಯ ದಾಟಿದ ಶೇ. ೧.೨೫% ಹಿರಿಯ ವ್ಯಕ್ತಿಗಳು, ಆರ್ಥಿಕ ಅಭಿವೃದ್ಧಿಯಲ್ಲಿ ಕೈಜೋಡಿಸಿರುವುದು ತಿಳಿದು ಬರುತ್ತದೆ. ಆದರೆ ೧೬ ವರ್ಷ ಪ್ರಾಯ ಕೆಳಗಿನ ವ್ಯಕ್ತಿಗಳು, ಬಹುತೇಕ ವಿದ್ಯಾವಂತರು ಮತ್ತು ಯುವ ಜನತೆ ಸರ್ಕಾರೇತರ ಸಂಸ್ಥೆಗಳ ಸಹಾಯ ಮತ್ತು ಸೌಲಭ್ಯಗಳನ್ನು ಪಡೆಯಲು ಮುಂದಾಗದಿರುವುದು ಸಂಶೋಧನೆಯಿಂದ ವ್ಯಕ್ತವಾಗುತ್ತದೆ. ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸಣ್ಣ ಮಟ್ಟದ ಪೂರಕ ಚಟುವಟಿಕೆಗಳಾದ ಕೋಳಿಸಾಕಾಣೆ, ಪಶು ಸಂಗೋಪನೆ, ಅಣಬೆ ವ್ಯವಸಾಯ, ಜೇನು ಸಾಕಣೆ, ತರಕಾರಿ, ಪುಷ್ಪ ಉದ್ಯಮ, ಮತ್ತು ಸಣ್ಣ ಪ್ರಮಾಣದ ವ್ಯಾಪರ ಮೊದಲಾದವುಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ಇದ್ದರೂ ಅವರಿಗೆ ತಮ್ಮ ಸಾಮರ್ಥ್ಯದ ಅರಿವು ಮತ್ತು ಪೂರಕ ಬೆಂಬಲ ದೊರೆಯದಿರುವುದು ಅಧ್ಯಯನದಿಂದ ವ್ಯಕ್ತವಾಗುತ್ತದೆ.

೩.೨.೪. ಫಲಾನುಭವಿಗಳ ವಿದ್ಯಾರ್ಹತೆ

ಅಧ್ಯಯನದಲ್ಲಿ ಫಲಾನುಭವಿಗಳ ವಿದ್ಯಾರ್ಹತೆಯ ಮಟ್ಟವನ್ನು ಅವಲೋಕಿಸಿದಾಗ ಫಲಾನುಭವಿಗಳಲ್ಲಿ ಅತ್ಯಂತ ಹೆಚ್ಚು ಜನ ಸಾಮಾನ್ಯರು ೬ ರಿಂದ ೧೦ನೇ ತರಗತಿಯ ವರೆಗಿನ ವಿದ್ಯಾಭ್ಯಾಸವನ್ನು ಪಡೆದವರಾಗಿದ್ದಾರೆ. ಈ ಅಂಶದಲ್ಲಿ ಇನ್ನಷ್ಟು ಅಧ್ಯಯನ ನಡೆಸಿದಾಗ ಕಂಡು ಬಂದ ಅಂಶವೆಂದರೆ ಊರಿನ ಸರಾಸರಿ ವಿದ್ಯಾರ್ಹತೆ ಬಹುತೇಕ ೬ ರಿಂದ ೧೦ರ ವರೆಗಿನ ಶ್ರೇಣಿಯಲ್ಲಿ ನೆಲೆಗೊಂಡಿರುತ್ತದೆ. ಅಧ್ಯಯನದಲ್ಲಿ ಕಂಡುಬಂದ ಪ್ರಕಾರ ಮಂಜೇಶ್ವರ ತಾಲೂಕಿನಲ್ಲಿ ಫಲಾನುಭವಿಗಳು ಅತ್ಯಧಿಕ ವಿದ್ಯಾಭ್ಯಾಸವನ್ನು ಪಡೆದ ಅಂದರೆ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದವರ ಸಂಖ್ಯೆ ಶೇಕಡಾ ೩ಕ್ಕಿಂತಲೂ ಕಡಿಮೆಯಾಗಿದೆ. ಹಾಗೆನೇ ೧ರಿಂದ ೫ರವರೆಗೆ ಕಲಿತವರು ಶೇಕಡಾ ೯ಕ್ಕಿಂತಲೂ ಕಡಿಮೆ ಇವೆರಡಾರ ಮಧ್ಯೆ ನೆಲೆಗೊಂಡಿರುವ ೬ರಿಂದ ೧೨ನೇ ತರಗತಿಯವರೆಗಿನ ಶಿಕ್ಷಣ ಪಡೆದವರ ಸಂಖ್ಯೆ ಅತ್ಯಧಿಕವಾಗಿರುತ್ತದೆ. ಹಾಗಾಗಿ ಹೈಸ್ಕೂಲ್ ಶಿಕ್ಷಣವನ್ನು ಪಡೆದ ಫಲಾನುಭವಿಗಳ ಜನಸಂಖ್ಯೆಯಲ್ಲಿ ಬಹುಸಂಖ್ಯೆಯಲ್ಲಿ ಇರುವವರು ಮೆಟ್ರಿಕ್ಯುಲೇಶನ್ ಶಿಕ್ಷಣದವರೆಗೆ ಅಧ್ಯಯನ ಮಾಡಿದ ವ್ಯಕ್ತಿಗಳಾಗಿರುತ್ತಾರೆ.

ಫಲಾನುಭವಿಗಳ ವಿದ್ಯಾರ್ಹತೆಯನ್ನು ಗಮನಿಸಿಸುವಾಗ ದೇಶಿಯ ಹಾಗೂ ರಾಷ್ಟ್ರೀಯಮಟ್ಟ ಸರಸಾರಿ ಪ್ರತಿಬಿಂಬಿತವಾಗಿರುವುದು ವ್ಯಕ್ತವಾಗುತ್ತದೆ. ಸರ್ವಶಿಕ್ಷಣ ಅಭಿಯಾನದ ಪ್ರತಿಯೊಬ್ಬ ಪ್ರಜೆಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಪದ್ಧತಿ ಅನುಷ್ಠಾನಕ್ಕೆ ಬಂದ ತರುವಾಯ ದೇಶದ ಪ್ರಾಥಮಿಕ ಶಿಕ್ಷಣದಲ್ಲಿ ಅಮೂಲಾಗ್ರ ಬದಲಾವಣೆ ಕಂಡು ಬಂದಿರುತ್ತದೆ. ಆದರೆ ಅಧ್ಯಯನದಲ್ಲಿ ಒಳಗೊಂಡಿರುವ ಹೆಚ್ಚಿನ ಫಲಾನುಭವಿಗಳು ಈ ಪದ್ಧತಿಯಲ್ಲಿ ಶಿಕ್ಷಣ ಪಡೆದುಕೊಂಡಿರುವ ವ್ಯಕ್ತಿಗಳಾದ ಕಾರಣ ಬಹಳಷ್ಟು ಮುಂದಿ ಅನಿವಾರ್ಯವಾಗಿ ಶಿಕ್ಷಣವನ್ನು ಮುಂದುವರಿಸಲಾಗದೆ ಹಾಗೂ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯಲಾಗದೆ ಸುಮಾರು ೬ ರಿಂದ ೧೦ರ ವರೆಗಿನ ತರಗತಿಗಳಲ್ಲಿ ಅಧ್ಯಯನ ಪಡೆದವರಾಗಿರುತ್ತಾರೆ.

೩.೨.೫. ಫಲಾನುಭವಿಗಳ ಕುಟುಂಬದ ಸದಸ್ಯರ ಸಂಖ್ಯೆಯ ಬಗ್ಗೆ ಅಧ್ಯಯನ

ಫಲಾನುಭವಿಗಳ ಕುಟುಂಬದ ಸದಸ್ಯರ ಅಧ್ಯಯನ ನಡೆಸಿದಾಗ ಜನರು ಆಧುನಿಕ ಅಣು ಕುಟುಂಬ ವ್ಯವಸ್ಥೆಯಲ್ಲಿ ಕುಟುಂಬವನ್ನು ಹೊಂದಿರುವುದು ವ್ಯಕ್ತವಾಗುತ್ತದೆ. ಅಧ್ಯಯನಕ್ಕೆ ಒಳಪಡಿಸಿದ ಒಟ್ಟು ೮೦ ಫಲಾನುಭವಿಗಳಲ್ಲಿ ೪೮(ಶೇಕಡಾ ೬೦) ಕುಟುಂಬವು ೨ ರಿಂದ ೫ರ ವರೆಗೆ ಸದಸ್ಯರನ್ನು ಒಳಗೊಂಡ ವಿಭಕ್ತ ಕುಟುಂಬ ಎಂದು ತಿಳಿದು ಬಂದಿದೆ. ೬ರಿಂದ ೯ರವರೆಗೆ ಸದಸ್ಯರಿರುವ ೨೭ (ಶೇಕಡಾ ೩೩.೭೫) ಕುಟುಂಬ, ೧೦ ರಿಂದ ೧೩ ಸದಸ್ಯರಿರುವ ೪(ಶೇಕಡಾ ೫) ಹಾಗೂ ಒಂದು ಕುಟುಂಬದಲ್ಲಿ ೧೩ ಕ್ಕಿಂತಲೂ ಹೆಚ್ಚು ಸದಸ್ಯರಿರುವುದು ತಿಳಿದು ಬಂದಿದೆ.

ಮೇಲಿನ ವಿಷಯದ ಅದ್ಯಯನದಲ್ಲಿ ತಿಳಿದು ಬರುವ ಮಹತ್ತರವಾದ ಸಂಗತಿಯೆಂದರೆ ಸಣ್ಣ ಕುಟುಂಬದಲ್ಲಿರುವ ಸದಸ್ಯರು ಸರ್ಕಾರೇತರ ಸಂಸ್ಥೆಗಳ ಫಲಾನುಭವಿಗಳಾಗಲು ಹೆಚ್ಚು ಒಲವು ತೋರಿಸಿದ್ದಾರೆ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ತಮ್ಮ ಕೊಡುಗೆಯನನ್ನು ನೀಡಿದ್ದಾರೆ.

೩.೨.೬. ಫಲಾನುಭವಿಗಳ ಕುಟುಂಬದ ಸದಸ್ಯರ ಶಿಕ್ಷಣದ ವಿಶ್ಲೇಷಣೆ

ಶಿಕ್ಷಣದ ಬಗ್ಗೆ ಇರುವ ಈ ವಿಶ್ಲೇಷಣೆಯನ್ನು ಗಮನಿಸಿದಾಗ ಫಲಾನುಭವಿಗಳ ಕುಟುಂಬದ ಸದಸ್ಯರಲ್ಲಿ ಅತ್ಯಧಿಕ ಮಂದಿ ೬ರಿಂದ ೧೦ ರವರೆಗಿನ ಹಂತದ ಶಿಕ್ಷಣ ಪಡೆದವರಾಗಿದ್ದು ಈ ಹಂತಕ್ಕೆ ಸೇರಿದ ವ್ಯಕ್ತಿಗಳ ಸರಸಾರಿ ಪ್ರಮಾಣ ೬೪% ಆಗಿದ್ದು ಪದವಿ ಶಿಕ್ಷಣ ಮತ್ತು ಪದವಿಗಿಂತಲೂ ಮೇಲ್ಪಟ್ಟು ಶಿಕ್ಷಣ ಪಡೆದ ೧೨% ಜನರು ಫಲಾನುಭವಿಯ ಕುಟುಂಬದ ಪಿ.ಯು.ಸಿ ಅಥವಾ ಪ್ಲಸ್‌ಟು ಹಂತದ ಶಿಕ್ಷಣ ಪಡೆದವರು ಶೇಕಡಾ ೧೭ ಮತ್ತು ಕೇವಲ ಪ್ರಾಥಮಿಕ ಶಿಕ್ಷಣವನ್ನು ಪಡೆದವರು ಶೇಕಡಾ ೭ ಫಲಾನುಭವಿಗಳು ಕುಟುಂಬದಲ್ಲಿದ್ದಾರೆ.

ಒಟ್ಟು ೮೦ ಫಲಾನುಭವಿಗಳ ಕುಟುಂಬದ ಸದಸ್ಯರ ವಿಶ್ಲೇಷಣೆಯಲ್ಲಿ ೭೦ ಸದಸ್ಯರ ಕುಟುಂಬದ ಸದಸ್ಯರು ಶಿಕ್ಷಿತರು ಆದರೆ ಸಂಪೂರ್ಣ ಸಾಕ್ಷರತೆಯ ರಾಜ್ಯದಲ್ಲಿ ೧೦ ಸದಸ್ಯರ ಕುಟುಂಬದ ಸದಸ್ಯರು ಅಶಿಕ್ಷಿತರಾಗಿದ್ದೂ ತಮ್ಮ ಹೆಸರು ಬರೆಯಲು ತಿಳಿದವರಾಗಿದ್ದಾರೆ. ಈಗ ಜಾರಿಯಲ್ಲಿರುವ ಇಲಾಖೆ ಪ್ರಾಯೋಜಿತ ವಯಸ್ಕರ ಶಿಕ್ಷಣ ಯೋಜನೆಯಡಿಯಲ್ಲಿ ಪಾಲ್ಗೊಂಡು ಈ ಜನರು ತಮ್ಮ ಹೆಸರು ಬರೆಯಲು ಸಹಿ ಹಾಕಲು ಕಲಿತಿರುವುದು ಅಧ್ಯಯನದಿಂದ ವ್ಯಕ್ತವಾಗಿದೆ.

೩.೨.೭. ಫಲಾನುಭವಿಗಳ ಧರ್ಮ

ಅಧ್ಯಯನಕ್ಕೆ ಕ್ಷೇತ್ರದಲ್ಲಿ ಆಯ್ಕೆ ಮಾಡಲಾದ ಫಲಾನುಭವಿಗಳನ್ನು ಅವರ ಧರ್ಮಕ್ಕೆ ಸಂಬಂಧಿಸಿದಂತೆ ವಿಂಗಡಿಸಿದಾಗ ಫಲಾನುಭವಿಗಳಲ್ಲಿ ಬಹುತೇಕ ಮಂದಿ (ಶೇ. ೮೮.೭೫) ಹಿಂದೂ ಧರ್ಮಕ್ಕೆ ಸೇರಿದ ವ್ಯಕ್ತಿಗಳೆಂದು ವ್ಯಕ್ತವಾಗುತ್ತದೆ. ಅದಕ್ಕೆ ಕಾರಣ ಈ ಕ್ಷೇತ್ರದಲ್ಲಿರುವ ಒಟ್ಟು ಜನಸಂಖ್ಯೆಯ ಶೇ. ೭೫ ಹಿಂದುಗಳು ಆಗಿರುತ್ತಾರೆ. ಆಯ್ದ ಫಲಾನುಭವಿಗಳಲ್ಲಿ ಶೇ. ೮.೭೫ ರಷ್ಟು ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದು ಈ ವರ್ಗದ ಜನರು ಒಟ್ಟು ಜನಸಂಖ್ಯೆಯ ಶೇ. ೨೧ ರಷ್ಟು ಇರುವುದು ವ್ಯಕ್ತವಾಗುತ್ತದೆ. ಅಧ್ಯಯನಕ್ಕೆ ಒಳಪಡಿಸಲಾದ ೫ ಪಂಚಾಯತ್‌ಗಳಲ್ಲಿರುವ ಕ್ರಿಶ್ಚಿಯನ್ ಸಮುದಾಯದ ಜನರು ಶೇ. ೪ ರಷ್ಟಿದ್ದು ಅವರಲ್ಲಿ ಶೇ. ೨.೫ ರಷ್ಟು ಜನರು ಸರ್ಕಾರೇತರ ಸಂಸ್ಥೆಗಳ ಆರ್ಥಿಕ ಮತ್ತು ಆರ್ಥಿಕೇತರ ಸವಲತ್ತುಗಳನ್ನು ಪಡೆದಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ.

೩.೨.೮. ವರ್ಗಕ್ಕೆ ಅನುಗುಣವಾಗಿ ಫಲಾನುಭವಿಗಳು

ಅಧ್ಯಯನದಲ್ಲಿ ಕಂಡುಬಂದ ಅಂಕಿ ಅಂಶಗಳ ಪ್ರಕಾರ ಫಲಾನುಭವಿಗಳಲ್ಲಿ ಅತ್ಯಧಿಕ ಸಂಖ್ಯೆಯ ಫಲಾನುಭವಿಗಳು ಇತರ ಹಿಂದುಳಿದ ವರ್ಗಕ್ಕೆ (ಒ.ಬಿ.ಸಿ) ಸೇರಿದವರಾಗಿದ್ದು ಒಟ್ಟು ಫಲಾನುಭವಿಗಳಲ್ಲಿ ಸಂಖ್ಯೆಯ ಶೇಕಡಾ ೪೪ರಷ್ಟು ಇದರಲ್ಲಿ ಒಳಗೊಂಡಿದ್ದಾರೆ. ಅಧ್ಯಯನದಲ್ಲಿ ಕಂಡುಬಂದ ಈ ಅಂಶವನ್ನು ಅವಲೋಕಿಸಿದಾಗ ಒಟ್ಟು ಜನಸಂಖ್ಯೆಯಲ್ಲಿ ಸದ್ರಿ ಅಧ್ಯಯನ ಪ್ರದೇಶ ವ್ಯಾಪ್ತಿಯಲ್ಲಿ ಇತರ ಹಿಂದುಳಿದ ವರ್ಗದ ಸಂಖ್ಯೆ ಉಳಿದ ವರ್ಗಗಳ ಸಂಖ್ಯೆಗಿಂತ ಅಧಿಕವಾಗಿರುವುದು ವ್ಯಕ್ತವಾಗುತ್ತದೆ. (ಜನಗಣತಿ ೨೦೧೧) ಇದು ರಾಜ್ಯಮಟ್ಟದ ಹಾಗೂ ರಾಷ್ಟ್ರೀಯ ಮಟ್ಟದ ಜನಸಂಖ್ಯೆಗೆ ಸಂಬಂಧಪಟ್ಟ ಒಂದು ಪ್ರಮುಖ ಅಂಶವಾಗಿರುತ್ತದೆ. ಇತರ ಹಿಂದುಳಿದ ವರ್ಗದಲ್ಲಿ ಅನೇಕ ವರ್ಗದ ಜನರನ್ನು ಸೇರಿಸಿರುವುದೇ ಈ ಹೆಚ್ಚಳಕ್ಕೆ ಕಾರಣವಾಗಿರುತ್ತದೆ. ಇವರೆಲ್ಲರು ಸಾಮಾನ್ಯವಾಗಿ ಅವಲೋಕಿಸುವಾಗ ಹಿಂದುಳಿದ ವರ್ಗದವಾರಾಗಿದ್ದು. ಅವರ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳು ಸುಧಾರಣೆಗೊಂಡಿರುವುದಿಲ್ಲ. ಈ ನಿಟ್ಟಿನಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಕಾರ್ಯಕ್ರಮಗಳ ಅವಕಾಶವನ್ನು ಬಳಸಿಕೊಳ್ಳಲು ಈ ವರ್ಗದಲ್ಲಿ ಸೇರಿದ ಜನರು ಸಂಸ್ಥೆಗೆ ಸೇರಿ ಫಲಾನುಭವಿಯಾಗಿರುವುದು ಅಧ್ಯಯನದಿಂದ ವ್ಯಕ್ತವಾಗುತ್ತದೆ.

ವರ್ಗಕ್ಕೆ ಅನುಗುಣವಾಗಿ ವಿಭಾಗಿಸಲಾದ ಫಲಾನುಭವಿಗಳ ಅಂಕಿ ಅಂಶಗಳನ್ನು ಗಮನಿಸಿದಾಗ ಸಾಮಾನ್ಯ ವರ್ಗದಲ್ಲಿ ತೀರಾ ಕಡಿಮೆ ಸಂಖ್ಯೆಯ ಅಂದರೆ ಒಟ್ಟು ೮೦ ಫಲಾನುಭವಿಗಳಲ್ಲಿ ಶೇಕಡಾ ೩ಕ್ಕಿಂತಲೂ ಕಡಿಮೆ ಸರ್ಕಾರೇತರ ಸಂಸ್ಥೆಗಳ ಸದಸ್ಯರಾಗಿರುವುದು ಕಂಡುಬರುತ್ತದೆ. ಸಾಮಾನ್ಯ ವರ್ಗದ ಜನರು ಕಡಿಮೆ ಸಂಖ್ಯೆಯಲ್ಲಿ ಸರ್ಕಾರೇತರ ಸಂಸ್ಥೆಯ ಫಲಾನುಭವಿಯಾಗಿರಲು ಇರುವ ಕಾರಣವನ್ನು ಅವಲೋಕಿಸುವಾಗ ಎರಡು ಅಂಶಗಳು ಗೋಚರವಾಗುತ್ತದೆ. ಮೊದಲನೇಯದಾಗಿ ಮಂಜೇಶ್ವರ ತಾಲೂಕಿನಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಸಾಮನ್ಯ ವರ್ಗದ ಜನಸಂಖ್ಯೆ ಕಡಿಮೆಯಾಗಿದ್ದು ಸರ್ಕಾರೇತರ ಸಂಸ್ಥೆಗಳ ಯೋಜನೆಗಳಲ್ಲಿ ಈ ವರ್ಗದ ಫಲಾನುಭವಿಗಳು ಕಡಿಮೆಯಾಗಿರಲು ಕಾರಣವಾಗಿದೆ. ಇನ್ನೊಂದು ದೃಷ್ಟಿಕೋನದಲ್ಲಿ ಅವಲೋಕಿಸುವಾಗ ಸಾಮಾನ್ಯ ವರ್ಗದಲ್ಲಿ ಒಳಗೊಂಡಿರುವ ಜನರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹೆಚ್ಚು ಸ್ಥಿತಿವಂತರಾಗಿದ್ದು ಬಡತನ ನಿವಾರಣೆಯ ಯೋಜನೆಗಳಲ್ಲಿ ಅಪೇಕ್ಷಿಸುವ ಅಥವಾ ಫಲಾನುಭವಿಯಾಗುವ ಅಗತ್ಯ ಇಲ್ಲದಿರುವ ಸಾಧ್ಯತೆಗಳು ಕಂಡು ಬರುತ್ತದೆ.

೩.೨.೯. ಫಲಾನುಭವಿಗಳಿಗೆ ಸರ್ಕಾರೇತರ ಸಂಸ್ಥೆಯ ಸದಸ್ಯರಾಗಲು ಪ್ರೇರಣೆ ನೀಡಿದವರ ಬಗ್ಗೆ ಅಧ್ಯಯನ

ಮಂಜೇಶ್ವರ ತಾಲೂಕಿನ ಐದು ಪಂಚಾಯತುಗಳಲ್ಲಿ ಎಂಭತ್ತೂ ಫಲಾನುಭವಿಗಳಲ್ಲಿ ಶೇಕಡಾ ೫೩.೭೫ ಫಲಾನುಭವಿಗಳು ಅವರು ಸದಸ್ಯರಾಗಿರುವ ಸಂಸ್ಥೆಯ ಕಾರ್ಯಕರ್ತರು ಮತ್ತು ಸದಸ್ಯರಿಂದಲೇ ಪ್ರಭಾವಿತರಾಗಿ ಸರ್ಕಾರೇತರ ಸಂಸ್ಥೆಯ ಸದಸ್ಯರಾಗಿದ್ದಾರೆ ಎಂಬ ಮಹತ್ವದ ವಿಷಯ ಅಧ್ಯಯನದಿಂದ ತಿಳಿದು ಬಂದಿದೆ. ಒಟ್ಟು ಫಲಾನುಭವಿಗಳಲ್ಲಿ ಶೇಕಡಾ ೩೧.೨೫ ಸದಸ್ಯರು ಸಹಪಾಠಿಗಳು ಮತ್ತು ಮಿತ್ರರ ಪ್ರೇರಣೆಯಿಂದ ಮತ್ತು ಉಳಿದ ಶೇಕಡಾ ೧೫ ಮಂದಿ ಸದಸ್ಯರು ಸ್ವಂತ ಕುಟುಂಬದ ಸದಸ್ಯರ ಪ್ರೇರಣೆಯಿಂದ ವಿವಿಧ ಲಾಭರಹಿತ ಸಂಸ್ಥೆಯ ಸದಸ್ಯತನ ಪಡದಿರುವುದಾಗಿ ಕಂಡು ಬಂದಿದೆ. ಸರ್ಕರೇತರ ಸಂಸ್ಥೆಯ ಸದಸ್ಯತನವನ್ನು ಪಡೆದು ಅದರೆ ಪ್ರಯೋಜನವನ್ನು ಪಡೆದ ಸದಸ್ಯರು ಇತರರಿಗೂ ಪ್ರಯೋಜನದ ಮಹತ್ವವನ್ನು ತಿಳಿಸುವುದರಿಂದ ಅತ್ಯಧಿಕ ಮಂದಿ ಸದಸ್ಯರ ಪ್ರೇರಣೆಯಿಂದಲೇ ಸರ್ಕಾರೇತರ ಸಂಸ್ಥೆಯ ಸದಸ್ಯರಾಗಲು ಕಾರಣೀಕರ್ತರಾಗಿದ್ದಾರೆ ಎಂದು ಸಂಶೋಧನೆಯಿಂದ ತಿಳಿದುಬಂದಿದೆ.

೩.೨.೧೦. ಮಾಹಿತಿದಾರನ ಸದಸ್ಯತನದ ಉದ್ದೇಶದ ಅಧ್ಯಯನ

ಸರ್ಕಾರೇತರ ಸಂಸ್ಥೆಗಳು ಫಲಾನುಭವಿಗಳಲ್ಲಿ ಆಯ್ದ ಎಂಭತ್ತು ಮಂದಿಯ ಫಲಾನುಭವಿಯಾಗುವ ಉದ್ದೇಶದ ಬಗ್ಗೆ ಸಂಗ್ರಹಿಸಲಾದ ಮಾಹಿತಿಯ ಪ್ರಕಾರ ಶೇಕಡಾ ೨೮.೭೫ ಮಂದಿ ಸದಸ್ಯರು ಆರ್ಥಿಕ ಸಹಾಯಕ್ಕಾಗಿ ಮಾತ್ರ ಇವುಗಳ ಸಹಾಯ ಪಡೆದಿರುವ ಬಗ್ಗೆ ಅಂಕಿ ಅಂಶಗಳು ಬೆಳಕು ಚೆಲ್ಲುತ್ತದೆ. ಇದರ ಅರ್ಥ ಬಹುತೇಕ ಫಲಾನುಭವಿಗಳ ಅಗತ್ಯ ಹಣಕಾಸಿಗೆ ಸಂಬಂಧ ಪಟ್ಟದಾಗಿರುತ್ತದೆ. ಹಣಕಾಸಿನ ಸವಲತ್ತುಗಳೊಂದಿಗೆ ಇತರ ಅಗತ್ಯಗಳಾದ ತರಬೇತಿ, ಸದಸ್ಯತನ ಸಾಂಸ್ಕೃತಿಕ ಸಹಕಾರವನ್ನು ಪಡೆಯುವ ಉದ್ದೇಶಕ್ಕಾಗಿ ಒಟ್ಟು ಶೇಕಡಾ ೭೧.೨೫ ಮಂದಿ ತಮ್ಮ ಉದ್ದೇಶವನ್ನು ವ್ಯಕ್ತಪಡಿಸಿರುತ್ತಾರೆ. ಸಂದರ್ಶನಕ್ಕೆ ಒಳಪಡಿಸಿದವರಲ್ಲಿ ಶೇಕಡಾ ೧೮.೭೫ ಮಂದಿ ತಾವು ಸರ್ಕಾರೇತರ ಸಂಸ್ಥೆಗಳ ಸಹಾಯವನ್ನು ಪಡೆದಿರುವುದು ಸದಸ್ಯತನ ಪಡೆಯುವುದಕ್ಕಾಗಿ ಎಂಬುದಾಗಿ ವ್ಯಕ್ತಪಡಿಸುತ್ತಾರೆ.

ಅಧ್ಯಯನಕ್ಕೆ ಒಳಪಟ್ಟ ಫಲಾನುಭವಿಗಳಲ್ಲಿ ಶೇಕಡಾ ೩.೭೫ ಮಂದಿ ಕೇವಲ ತರಬೇತಿ ಮತ್ತು ಮಾಹಿತಿ ಹಾಗೂ ಸದಸ್ಯತನದ ಉದ್ದೇಶದಿಂದ ಸರ್ಕಾರೇತರ ಸಂಸ್ಥೆಗಳ ಸದಸ್ಯತನ ಪಡೆಯಲಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಒಟ್ಟು ೮೦ ಮಂದಿ ಫಲಾನುಭವಿಗಳಲ್ಲಿ ಶೇಕಡಾ ೧೬.೨೫ ಮಂದಿಯ ಉದ್ದೇಶಗಳು ಆರ್ಥಿಕ ಸಹಾಯ, ತರಬೇತಿ ಮತ್ತು ಮಾಹಿತಿ ಸದಸ್ಯತನ, ಸಾಂಸ್ಕೃತಿಕ ಪ್ರಯೋಜನ ಮೊದಲಾಧ ಎಲ್ಲಾ ಅಂಶಗಳನ್ನು ಉಲ್ಲೇಖಿಸಿ ವ್ಯಕ್ತಪಡಿಸಿರುವುದು ಅಧ್ಯಯನದಿಂದ ಸಾಬೀತಾಗಿರುತ್ತದೆ.

೩.೨.೧೧. ಫಲಾನುಭವಿಗಳ ಆಹಾರ ವೈವಿಧ್ಯತೆ

ಫಲಾನುಭವಿಗಳ ಆಹಾರ ಪದ್ಧತಿಗೆ ಸಂಬಂಧಪಟ್ಟಂತೆ ಅಧ್ಯಯನ ನಡೆಸಿದಾಗ ದೊರೆತ ಮಾಹಿತಿಯು ದಕ್ಷಿಣ ಭಾರತದ ಆಹಾರ ವೈಶಿಷ್ಟತೆಗೆ ಬಹಳ ಹತ್ತಿರದ ಸಾಮ್ಯತೆಯನ್ನು ತೋರ್ಪಡಿಸುತ್ತದೆ. ಒಟ್ಟು ಫಲಾನುಭವಿಗಳ ಆಹಾರ ವೈಖರಿಯನ್ನು ಪರಿಶೀಲಿಸಿದಾಗ ಶೇಕಡಾ ೮೧ ಮಂದಿ ಅಕ್ಕಿಯಿಂದ ತಯಾರು

ಮಾಡಿದ ಆಹಾರವನ್ನು ತಮ್ಮ ಪ್ರಧಾನ ಆಹಾರವಾಗಿಯೂ ಗೋಧಿ, ಹಾಲು, ಹಣ್ಣು ಹಂಪಲುಗಳನ್ನು ಉಪಹಾರವಾಗಿ ಸೇವಿಸುತ್ತಿರುವುದು ವ್ಯಕ್ತವಾಗಿದೆ. ಶೇಕಡಾ ೪ ಮಂದಿ ಗೋಧಿಯಿಂದ ತಯಾರು ಮಾಡಿದ ಆಹಾರವನ್ನು ಪ್ರಧಾನ ಆಹಾರವಾಗಿಯು, ಅಕ್ಕಿಯಿಂದ ತಯಾರು ಮಾಡುವ ಆಹಾರ, ಹಣ್ಣು-ಹಂಪಲು, ಹಾಲು ಮೊದಲಾದವುಗಳನ್ನು ಉಪಹಾರವಾಗಿ ಸೇವಿಸುವುದು ಸಂಶೋಧನೆಯಿಂದ ತಿಳಿದು ಬಂದಿದೆ. ಶೇಕಡಾ. ೬ ಮಂದಿ ಅಕ್ಕಿಯಿಂದ ತಯಾರು ಮಾಡಿದ ಮತ್ತು ಹಾಲು ಹಣ್ಣು-ಹಂಪಲು ಆಹಾರವಾಗಿ ಸೇವಿಸುವುದಾಗಿಯು, ಶೇಕಡಾ ೯ ಮಂದಿ ಫಲಾನುಭವಿಗಳು ಅಕ್ಕಿ, ಗೋದಿಯಿಂದ ತಯಾರು ಮಾಡಿದ ಆಹಾರದೊಂದಿಗೆ ಹಾಲು, ಹಣ್ಣು-ಹಂಪಲು ಮೊದಲಾದ ಎಲ್ಲಾ ತರದ ಆಹಾರವನ್ನೂ ಸೇವಿಸುವುದಾಗಿ ವಿಶ್ಲೇಷಣೆಯಿಂದ ತಿಳಿದು ಬಂದಿದೆ.

೩.೨.೧೨. ಫಲಾನುಭವಿಗಳ ಆಹಾರ ಪದ್ಧತಿ

ಫಲಾನುಭವಿಗಳ ಆಹಾರ ಪದ್ಧತಿಯ ಬಗ್ಗೆ ನಡೆಸಲಾದ ಅಧ್ಯಯನದಲ್ಲಿ ಕಂಡುಬಂದ ಪ್ರಾಮುಖ್ಯ ಅಂಶವೆಂದರೆ ಸರ್ಕಾರೇತರ ಯೋಜನೆಗಳಲ್ಲಿ ಫಲಾನುಭವಿಗಳಾದ ವ್ಯಕ್ತಿಗಳಲ್ಲಿ ಶೇಕಡಾ ೮೭.೫ ರಷ್ಟು ಜನ ಮಾಂಸಹಾರಿ ವರ್ಗಕ್ಕೆ ಸೇರಿದವರಾಗಿದ್ದಾರೆ. ಅಂದರೆ ಇವುಗಳಲ್ಲಿ ಒಳಗೊಂಡಿರುವ ಪರಿಶಿಷ್ಟ ಜಾತಿ, ಪಂಗಡ, ಇತರ ಹಿಂದುಳಿದ ವರ್ಗ ಹಾಗೂ ಒ.ಇ.ಸಿ. ಪಂಗಡಗಳಲ್ಲಿ ಹೆಚ್ಚಿನವರು ಮಾಂಸಹಾರ ಪ್ರಿಯಾರಾಗಿರುತ್ತಾರೆ. ಈ ವ್ಯಕ್ತಿಗಳ ಆರ್ಥಿಕ ಸ್ಥಿತಿಗತಿಗಳು ಸುಧಾರಿಸಿಲ್ಲವಾಗಿದ್ದರು ಮಾಂಸಹಾರವು ತಮ್ಮ ಜೀವನದ ಒಂದು ಸಾಂಪ್ರದಾಯಿಕ ಪದ್ಧತಿಯಾಗಿ ರೂಪುಗೊಂಡಿರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಫಲಾನುಭವಿಗಳಲ್ಲಿ ಸಸ್ಯಹಾರಿಗಳ ಸಂಖ್ಯೆ ತೀರ ಕಡಿಮೆ ಇರುವುದು. ಅಂಕಿ ಅಂಶಗಳಿಂದ ದೃಡಪಟ್ಟಿರುತ್ತದೆ. ಇದಕ್ಕೆ ಪ್ರಧಾನ ಕಾರಣ ಸಾಮಾನ್ಯ ವರ್ಗದ ಫಲಾನುಭವಿಗಳು ಕಡಿಮೆ ಸಂಖ್ಯೆಯಲ್ಲಿ ಈ ಯೋಜನೆಗಳಿಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು. ವಿಭಿನ್ನ ಕಾರಣಗಳಿಗಾಗಿ ತಮ್ಮ ಪೂರ್ವಜರು ಮಾಂಸಹಾರಿಗಳಾಗಿದ್ದರು. ಉತ್ತರಾಧಿಕಾರಿಯಾಗಿ ಮಾಂಸಹಾರವನ್ನು ಬಳಸದೇ ಸಸ್ಯಹಾರಕ್ಕೆ ಪರಿವರ್ತನೆಗೊಂಡ ಫಲಾನುಭವಿ ಕುಟುಂಬಗಳು ಅಧ್ಯಯನದಲ್ಲಿ ಕಂಡು ಬಂದಿರುತ್ತದೆ.

೩.೨.೧೩. ಫಲಾನುಭವಿಗಳ ಪ್ರಧಾನ ವೃತ್ತಿಯ ಮಾಹಿತಿ

ಫಲಾನುಭವಿಗಳ ವೃತ್ತಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಅಧ್ಯಯನ ಮಾಡಿದಾಗ ಅಧ್ಯಯನಕ್ಕೆ ಒಳಪಡಿಸಿದ ಎಂಬತ್ತು ಮಂದಿಯ ವಿಭಿನ್ನ ತರದ ವೃತ್ತಿಗಳನ್ನು ತಮ್ಮ ಪ್ರಧಾನ ಆದಾಯದ ಮೂಲವಾಗಿ ಆಯ್ಕೆ ಮಾಡಿರುವುದು ವ್ಯಕ್ತವಾಗುತ್ತದೆ. ಅವರಲ್ಲಿ ಶೇ ೪೮.೭೫ ಬೀಡಿ ಕಟ್ಟುವ ವೃತ್ತಿಯನ್ನು ಅವಲಂಬಿಸಿರುವುದು ವ್ಯಕ್ತವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಭೂರಹಿತ ಮತ್ತು ಕಡಿಮೆ ವಿದ್ಯಾಭ್ಯಾಸ ಹೊಂದಿರುವ ಮಹಿಳೆಯರು ಸಹಜವಾಗಿ ಅನ್ಯ ಮಾರ್ಗವಿಲ್ಲದೆ ಬೀಡಿ ವೃತ್ತಿಗೆ ಅವಲಂಬಿತರಾಗುತ್ತಾರೆ. ಬೀಡಿ ಉದ್ಯಮವು ಮಿತವಾದ ಆದಾಯವನ್ನು ನೀಡಲು ಶಕ್ತವಾಗಿದ್ದು ದಾರಿದ್ರ್ಯ ರೇಖೆಯಿಂದ ಮುಕ್ತರಾಗಲು ಬೀಡಿಯೊಂದಿಗೆ ಇತರ ಸಣ್ಣಮಟ್ಟ ಉಪವೃತ್ತಿಯನ್ನು ಅವಲಂಬಿಸುವುದು ಆರ್ಥಿಕ ಅಭಿವೃದ್ಧಿಗೆ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರೇತರ ಸಂಸ್ಥೆಗಳು ನೀಡುತ್ತಿರುವ ಸೌಲಭ್ಯವನ್ನು ಬೀಡಿ ಕಾರ್ಮಿಕರು ಬಳಸಿಕೊಂಡಿರುವುದು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿದೆ. ಫಲಾನುಭವಿಗಳಲ್ಲಿ ಬೀಡಿಯ ಹೊರತಾಗಿ ಇತರ ಯಾವುದೇ ವೃತ್ತಿಗಳಲ್ಲಿ ಕೇಂದ್ರಿಕೃತವಾಗಿರುವುದು ಕಂಡು ಬರುವುದಿಲ್ಲ. ಗ್ರಾಮೀಣ ಜನರು ಕೃಷಿ, ಸಣ್ಣ ಮತ್ತು

ಗುಡಿಕೈಗಾರಿಕೆ ಮತ್ತು ಇತರ ಸೇವಾ ರಂಗದ ವೃತ್ತಿಗಳಲ್ಲಿ ಚದರಿರುವುದು ಗೋಚರವಾಗುತ್ತದೆ. ಅಧ್ಯಯನದ ಪ್ರಕಾರ ಫಲಾನುಭವಿಗಳಲ್ಲಿ ಶೇ. ೨.೫ ಗುಡಿ ಕೈಗಾರಿಕೆ ಮತ್ತು ಇತರ ಸೇವಾ ರಂಗದ ವೃತ್ತಿಗಳಲ್ಲಿ ಚದುರಿರುವುದು ಗೋಚರವಾಗುತ್ತದೆ. ಸರ್ಕಾರಿ ಮತ್ತು ಅರೇ ಸರ್ಕಾರಿ ವೃತ್ತಿಗಳಲ್ಲಿ ತೊಡಗಿರುವವರ ಸಂಖ್ಯೆಯು ಬಹಳ ಕಡಿಮೆಯಾಗಿರುತ್ತದೆ. ಅಧ್ಯಯನದ ಪ್ರಕಾರ ಫಲಾನುಭವಿಗಳಲ್ಲಿ ಶೇ. ೨.೫ ಜನರು ಕೃಷಿ ರಂಗ ಶೇ. ೧.೨೫ ಸರಕಾರಿ ಉದ್ಯೋಗ ಶೇ. ೮.೭೫ ಅರೇ ಸರ್ಕಾರಿ, ಶೇ ೫ ಗುಡಿ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆ ಮತ್ತು ಶೇ. ೩೩.೭೫ ಇತರ ಸೇವಾ ವಲಯಗಳಲ್ಲಿ ಕೇಂದ್ರಿಕೃತವಾಗಿರುವವರು ಸರ್ಕಾರೇತರ ಸಂಸ್ಥೆಗಳ ಸಹಾಯ ಪಡೆದಿರುವುದು ಕಂಡು ಬರುತ್ತದೆ.

೩.೨.೩೪. ಉಪವೃತ್ತಿಯಲ್ಲಿ ತೊಡಗಿಸಿಕೊಂಡ ಫಲಾನುಭವಿಗಳ ಮಾಹಿತಿ

ಪ್ರಧಾನ ವೃತ್ತಿಯ ಹೊರತಾಗಿ ಫಲಾನುಭವಿಗಳು ಉಪವೃತ್ತಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಮಾಹಿತಿ ಅಧ್ಯಯನದಿಂದ ವ್ಯಕ್ತವಾಗುತ್ತದೆ. ಇವುಗಳಲ್ಲಿ ಪ್ರಮುಖವಾಗಿ ಹೈನುಗಾರಿಕೆಯನ್ನು ಉಪವೃತ್ತಿಯಾಗಿಸಿದವರು ಬಹು ಸಂಖ್ಯೆಯಲ್ಲಿ ಕಂಡು ಬಂದಿದೆ. ಒಟ್ಟು ಎಂಭತ್ತು ಫಲಾನುಭವಿಗಳಲ್ಲಿ ೩೪ ಮಂದಿ (ಶೇ. ೪೨.೫) ಈ ಉಪವೃತ್ತಿಯಲ್ಲಿ ತೊಡಗಿರುವುದು ಗ್ರಾಮೀಣ ಅಭಿವೃದ್ಧಿಯಲ್ಲಿ ಕೃಷಿರಂಗದ ಅಭಿವೃದ್ಧಿಯನ್ನುಂಟು ಮಾಡುವ ನೈಸರ್ಗಿಕ ಗೊಬ್ಬರದ ಸೃಷ್ಠಿಯಾಗಿದೆ. ಅದರೊಂದಿಗೆ ಆರ್ಥಿಕ ಲಾಭವನ್ನುಂಟುಮಾಡಬಲ್ಲ ಹಾಲು ಉತ್ಪಾದನೆಯಿಂದ ಹೆಚ್ಚುವರಿ ಆದಾಯ ಸೃಷ್ಠಿ ಆಗುತ್ತದೆ. ಇದರೊಂದಿಗೆ ಫಲಾನುಭವಿಗಳು ಕೋಳಿಸಾಕಣೆ, ಜೇನು ವ್ಯವಸಾಯ ಮೊದಲಾದ ಉಪವೃತ್ತಿಗಳಲ್ಲಿ ಆಸಕ್ತರಾಗಿರುವುದು ವ್ಯಕ್ತವಾಗುತ್ತದೆ. ಸಂಶೋಧನಾ ಕ್ಷೇತ್ರದಲ್ಲಿ ಆಯ್ಕೆ ಮಾಡಲಾದ ಎಂಬತ್ತು ಮಂದಿ ಗ್ರಾಮೀಣ ಸರ್ಕಾರೇತರ ಸಂಸ್ಥೆಗಳ ಫಲಾನುಭವಿಗಳಲ್ಲಿ ೨೬ ಮಂದಿ(ಶೇ. ೩೨.೫) ಕೋಳಿಸಾಕಣೆ ಮತ್ತು ೧೦ ಮಂದಿ (ಶೇ. ೧೨.೫) ಜೇನು ವ್ಯವಸಾಯವನ್ನು ಉಪವೃತ್ತಿಯಾಗಿ ಆಯ್ಕೆ ಮಾಡಿರುವುದು ವ್ಯಕ್ತವಾಗುತ್ತದೆ. ಉಳಿದ ಶೇ. ೧೨.೫ ಮಂದಿ ಉದ್ಯೋಗ ಖಾತರಿ, ಹೊಲಿಗೆ ಕೆಲಸ, ಛಾಯಚಿತ್ರ ಮೊದಲಾದ ವೃತ್ತಿಯನ್ನು ಉಪವೃತ್ತಿಯಾಗಿ ಸ್ವೀಕರಿಸಿ ಆದಾಯಗಳಿಸುತ್ತಿರುವುದು ಅಧ್ಯಯನದಿಂದ ವ್ಯಕ್ತವಾಗುತ್ತದೆ.

೩.೨.೧೫. ಫಲಾನುಭವಿಗಳ ಆದಾಯದ ಸ್ಥಿತಿಗತಿ

ಅಧ್ಯಯನದಲ್ಲಿ ಫಲಾನುಭವಿಗಳ ಆದಾಯದ ಮಿತಿಯನ್ನು ಅಂಕೆ ಸಂಖ್ಯೆಗಳಲ್ಲಿ ಸಂಗ್ರಹಿಸಿದಾಗ ಫಲಾನುಭವಿಗಳಲ್ಲಿ ಬಹಳಷ್ಟು ಮಂದಿ ಆರ್ಥಿಕವಾಗಿ ಹಿಂದುಳಿದವರಾಗಿ ಕಂಡು ಬರುತ್ತದೆ. ಒಟ್ಟು ೮೦ ಮಂದಿ ಫಲಾನುಭವಿಗಳಲ್ಲಿ ೩೬ ಮಂದಿ ತಮ್ಮ ವಾರ್ಷಿಕ ಆದಾಯವು ಒಂದು ಲಕ್ಷಗಿಂತ ಕಡಿಮೆ ಎಂದು ತಿಳಿಸಿರುತ್ತಾರೆ. ಇಂತಹ ವ್ಯಕ್ತಿಗಳಲ್ಲಿ ಅತೀ ಸಣ್ಣ ರೈತರು ಕೂಲಿ ಕಾರ್ಮಿಕರು ಮತ್ತು ಸೇವಾ ರಂಗದಲ್ಲಿ ದುಡಿಯುವ ವ್ಯಕ್ತಿಗಳು ಕಾಣಿಸಿಕೊಂಡಿರುತ್ತಾರೆ. ಪೂರ್ಣಕಾಲಿಕ ಉದ್ಯೋಗ ಎಲ್ಲಾ ಕಾಲಗಳಲ್ಲಿಯೂ ಲಭ್ಯವಾಗದೇ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಿರ ಆದಾಯವನ್ನು ಹೊಂದಲಾರದ ಅನೇಕ ಕುಟುಂಬಗಳು ಈ ವಿಭಾಗದಲ್ಲಿ ಗೋಚರವಾಗುತ್ತಿದೆ. ಇಂತಹ ಕುಟುಂಬಗಳಿಗೆ ಸರ್ಕಾರೇತರ ಸಂಸ್ಥೆಗಳ ವಿವಿಧ ಯೋಜನೆಗಳು ಬಹಳ ಪ್ರಯೋಜನಕಾರಿಯಾಗಿದೆ.

ಅಧ್ಯಯನದಲ್ಲಿ ಕಂಡುಬಂದ ಸುಮಾರು ಒಂದರಿಂದ ಎರಡು ಲಕ್ಷದವರೆಗಿನ ವಾರ್ಷಿಕ ಆದಾಯ ಪಡೆಯುವ ಫಲಾನುಭವಿಗಳ ಸಂಖ್ಯೆ ೧೮ ಇದು ಒಟ್ಟು ಫಲಾನುಭವಿಗಳ ಶೇಕಡಾ ೨೨.೫ ಆಗಿರುತ್ತದೆ.

ಅದೇ ರೀತಿಯಲ್ಲಿ ೨ ರಿಂದ ೩ ಲಕ್ಷದವರೆಗೆ ವಾರ್ಷಿಕ ಆದಾಯ ಪಡೆಯುವ ಕುಟುಂಬಗಳು ಶೇಕಡಾ ೧೫ ಹಾಗೂ ೪ ರಿಂದ ೫ ಲಕ್ಷದವರೆಗೆ ವಾರ್ಷಿಕ ಆದಾಯ ಪಡೆಯುವವರು ಶೇಕಡಾ ೧೧ ಆಗಿರುತ್ತದೆ. ವಾರ್ಷಿಕ ಆದಾಯ ೫ ಲಕ್ಷಗಿಂತ ಮೇಲ್ಪಟ್ಟು ವರಮಾನ ಪಡೆಯುವ ಕುಟುಂಬಗಳು ಶೇಕಡಾ ೩ಕ್ಕಿಂತ ಕಡಿಮೆಯಾಗಿರುತ್ತದೆ. ಈ ಎಲ್ಲಾ ಮಾಹಿತಿಗಳಿಂದ ತಿಳಿದು ಬರುವುದೇನೆಂದರೆ ಆದಾಯದ ವಿತರಣೆಯಲ್ಲಿ ಅಸಮಾನತೆಯ ತೀವ್ರತೆ ಬಹಳಷ್ಟು ಇರುವುದು ಅಧ್ಯಯನದಿಂದ ಕಂಡು ಬರುತ್ತದೆ.

೩.೨.೧೬. ಫಲಾನುಭವಿಗಳ ಕುಟುಂಬದಲ್ಲಿ ದುಡಿಯುವವರ ಸಂಖ್ಯೆ

ಆರ್ಥಿಕ ಅಭಿವೃದ್ಧಿಯಲ್ಲಿ ಶ್ರಮಿಕರ ಪಾತ್ರ ಪ್ರಧಾನವಾದ ಅಂಶವಾಗಿದೆ. ಅರ್ಥವ್ಯವಸ್ಥೆಯ ಅತೀ ಸಣ್ಣ ಘಟಕವಾದ ಕುಟುಂಬವೊಂದರ ಒಟ್ಟು ಸದಸ್ಯರ ದುಡಿಯುವ ಜನರ ಶೇಕಡಾವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರಲ್ಲಿ ಅಧ್ಯಯನಕ್ಕೆ ಒಳಪಡಿಸಲಾದ ಎಂಬತ್ತು ಕುಟುಂಬಗಳಲ್ಲಿ ೧೭ರಷ್ಟು ಮಾಹಿತಿದಾರರ ಕುಟುಂಬದಲ್ಲಿ ದುಡಿಯುವವರ ಶೇಕಡಾ ಪ್ರಮಾಣವು ೩೦ಕ್ಕಿಂತ ಕಡಿಮೆಯಾಗಿರುತ್ತದೆ. ಬೇರೆ ಮಾತಲ್ಲಿ ಹೇಳುವುದಾದರೆ ಒಟ್ಟು ೧೭ ಮಂದಿಯ ಕುಟುಂಬದಲ್ಲಿ ಸರಸಾರಿ ೭೦ ಶೇಕಡಾ ಜನ ಅನುತ್ಪಾದಕ ಸದಸ್ಯರಾಗಿದ್ದಾರೆ. ಇದು ಅಭಿವೃದ್ಧಿಯನ್ನು ರೂಪಿಸುವಲ್ಲಿ ಹಿನ್ನಡೆಯಾಗುವ ಒಂದು ಪ್ರಮುಖವಾದ ಅಂಶವಾಗಿರುತ್ತದೆ.

ಅಧ್ಯಯನದಿಂದ ಕಂಡು ಬಂದ ಇನ್ನೊಂದು ಪ್ರಮುಖವಾದ ಅಂಶವೆಂದರೆ ಬಹುತೇಕ ಮನೆಗಳಲ್ಲಿ ಅಂದರೆ ೪೯ ಶೇಕಡಾದಷ್ಟು ಮಾಹಿತಿದಾರರ ಕುಟುಂಬಗಳಲ್ಲಿ ದುಡಿಯುವ ಸದಸ್ಯರ ಸಂಖ್ಯೆ ಸರಿಸುಮಾರು ೩೦ರಿಂದ ೫೦ ಶೇಕಡಾ ಆಗಿರುತ್ತದೆ. ಅಂದರೆ ಹೆಚ್ಚಿನ ಮನೆಗಳಲ್ಲಿ ಶೇಕಡಾ ೫೦ ಜನರು ಉತ್ಪಾದನಾ ವಲಯಗಳಲ್ಲಿ ತೊಡಗಿರುತ್ತಾರೆ ಮತ್ತು ಅಷ್ಟೇ ಜನರು ಅವರನ್ನು ಅವಲಂಬಿತರಾಗಿರುತ್ತಾರೆ.

ಅಧ್ಯಯನಕ್ಕೆ ಒಳಪಡಿಸಿದ ಇತರ ಮಾಹಿತಿದಾರರ ಕುಟುಂಬಗಳನ್ನು ಗಮನಿಸಿದಾಗ ಶೇಕಡಾ ೬ ಕುಟುಂಬಗಳಲ್ಲಿ ಶೇಕಡಾ ೭೦ ಜನರು ದುಡಿಮೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ. ಇನ್ನುಳಿದ ೫ ಕುಟುಂಬಗಳಲ್ಲಿ ಶೇ.೭೦ರಿಂದ ೯೦ರ ವರೆಗೆ ಜನರು ಉತ್ಪಾದನಾ ವಲಯಗಳಲ್ಲಿ ತೊಡಗಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ. ಬಹುತೇಕ ಎಲ್ಲಾ ಸದಸ್ಯರು ದುಡಿಮೆಯಲ್ಲಿರುವ ಕೇವಲ ೩ ಮಾಹಿತಿದಾರರ ಕುಟುಂಬ ಅಧ್ಯಯನಕ್ಕೊಳಪಟ್ಟವರು.

ಆರ್ಥಿಕ ಅಭಿವೃದ್ಧಿ ಸಾಧಿಸಬೇಕಾದರೆ ದುಡಿಯಲು ಶಕ್ತಿಯಿರುವ ಎಲ್ಲಾ ವ್ಯಕ್ತಿಗಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದು ಅತೀ ಅಗತ್ಯವಾಗಿದೆ. ಒಂದು ವೇಳೆ ಇಂತಹ ವ್ಯಕ್ತಿಗಳು ಪೂರ್ಣವಾಗಿ ಉತ್ಪಾದನಾ ಕ್ಷೇತ್ರದಲ್ಲಿ ತೊಡಗಿಸಿಕೊಂಡರೆ ಆರ್ಥಿಕ ಅಭಿವೃದ್ಧಿ ಸುಲಭ ಸಾಧ್ಯ.

೩.೨.೧೭. ಫಲಾನುಭವಿಯ ಮನೆಯ ಸ್ವರೂಪದ ಅಧ್ಯಯನ

ಫಲಾನುಭವಿಗಳ ವಾಸಗೃಹದ ಬಗ್ಗೆ ನಡೆಸಿದ ಸಂಶೋಧನೆಯಲ್ಲಿ ಶೇ.೬೧ ಜನರು ತಾರಸಿನ ಮನೆಯಲ್ಲಿಯೂ ಶೇ.೩೬ ಫಲಾನುಭವಿಗಳು ಹಂಚಿನ ಮನೆಯಲ್ಲೂ ಉಳಿದ ಶೇ.೩.೭೫ ಫಲಾನುಭವಿಗಳು ಸಿಮೆಂಟ್ ಶೀಟ್ ಹಾಸಿದ ಮನೆಯಲ್ಲಿ ವಾಸಿಸುತ್ತಿರುವುದು ಸಂಶೋಧನೆಯಲ್ಲಿ ವ್ಯಕ್ತವಾಗುತ್ತದೆ. ಫಲಾನುಭವಿಗಳ

ಮನೆಯ ಸ್ವರೂಪದ ಅಧ್ಯಯನದಲ್ಲಿ ಮಂಜೇಶ್ವರ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿರುವ ಜನರು ಹೆಚ್ಚಿನವರು ಅಭಿವೃದ್ಧಿಯತ್ತ ಮುನ್ನಡೆಯುತ್ತಿದ್ದಾರೆ ಮತ್ತು ಸಾಮಾಜಿಕ ಸ್ಥಿತಿಗತಿಯು ಉತ್ತಮವಾಗಿದೆ ಎಂಬುದು ಸಮೀಕ್ಷೆಯಿಂದ ತಿಳಿದು ಬರುತ್ತದೆ.

ಆಗಿದ್ದರೂ ಫಲಾನುಭವಿಗಳ ಪಟ್ಟಿಯಲ್ಲಿ ಅತೀ ಬಡತನದಿಂದ ತನ್ನದೇ ಆದ ಸುದೃಢ ಮನೆಯೊಂದನ್ನು ಹೊಂದಲು ಶಕ್ತರಾದ ಕುಟುಂಬಗಳು ಎಂದು ವ್ಯಕ್ತವಾಗುತ್ತದೆ. ವಾಸಸ್ಥಾನದ ಸ್ವರೂಪದಲ್ಲಿ ಶೇಕಡಾ ೩.೭೫ರಷ್ಟು ಫಲಾನುಭವಿಗಳು ಸಿಮೆಂಟ್ ಶೀಟ್‌ನ ಮನೆಯಲ್ಲಿ ವಾಸವಾಗಿರುವುದು ಗೋಚರವಾಗುತ್ತದೆ. ಇಂತಹ ಕುಟುಂಬಗಳಿಗೆ ಸರ್ಕಾರೇತರ ಸಂಸ್ಥೆಗಳ ಉದ್ಯೋಗ ಆಧರಿತ ಯೋಜನೆಗಳು ಆರ್ಥಿಕ ಅಭಿವೃದ್ಧಿಯನ್ನು ಉಂಟುಮಾಡಲು ಸಹಕಾರಿ ಎಂಬುದು ತಿಳಿದು ಬರುತ್ತದೆ.

೩.೨.೧೮. ಮಾಹಿತಿದಾರರ ಭೂಹಿಡುವಳಿಯ ಗಾತ್ರದ ಅಧ್ಯಯನ

ಸಂಶೋಧನೆಗೆ ಒಳಪಡಿಸಲಾದ ೮೦ ಫಲಾನುಭವಿಗಳ ಭೂ ಹಿಡುವಳಿ ಗಾತ್ರದ ಅಧ್ಯಯನವು ಬಹಳ ಕುತೂಹಲಕಾರಿಯಾದ ಅಧ್ಯಯನವಾಗಿದೆ, ಯಾಕೆಂದರೆ ಸಂಶೋಧನೆಗೊಳಪಟ್ಟ ಐದು ಪಂಚಾಯತ್ತುಗಳ ಒಟ್ಟು ೮೦ ಫಲಾನುಭವಿಗಳಲ್ಲಿ ೭೫ ಮಂದಿ ಫಲಾನುಭವಿಗಳು ಒಂದು ಎಕ್ಕರೆಗಿಂತ ಕಡಿಮೆ ಭೂ ಹಿಡುವಳಿಯನ್ನು ಹೊಂದಿದವರಾಗಿದ್ದಾರೆ. ಕೇವಲ ಮೂರು ಮಂದಿ ೧ರಿಂದ ೫ ಎಕ್ಕರೆ ಭೂ ಹಿಡುವಳಿಯನ್ನು ಎರಡು ಮಂದಿ ೫ ರಿಂದ ೧೦ ಎಕ್ಕರೆ ಭೂ ಹಿಡುವಳಿಯನ್ನು ಹೊಂದಿದ ಕುಟುಂಬದ ಸದಸ್ಯರಾಗಿದ್ದಾರೆ ಎಂಬುದು ಸಂಶೋಧನೆಯಿಂದ ತಿಳಿದು ಬರುತ್ತದೆ.

ಅಧ್ಯಯನದಲ್ಲಿ ಕಂಡುಬಂದ ಇನ್ನೊಂದು ಮಹತ್ತರವಾದ ಅಂಶವೆಂದರೆ ದೊಡ್ಡ ಭೂ ಹಿಡುವಳಿದಾರರು ಸರಕಾರೇತರ ಸಂಸ್ಥೆಗಳ ಯೋಜನೆಗಳಲ್ಲಿ ಫಲಾನುಭವಿಯಾಗಲು ಇಂಗಿತ ವ್ಯಕ್ತಪಡಿಸಿರುವುದು ಬಹಳ ಕಡಿಮೆ ಕಂಡುಬರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸಣ್ಣ ಹಿಡುವಳಿದಾರರು ಸುಮಾರು ೫ ಸೆಂಟ್ಸ್‌ನಿಂದ ೧ ಎಕ್ಕರೆವರೆಗಿನ ಭೂ ಹಿಡುವಳಿಯನ್ನು ಹೊಂದಿದವರು, ಸರ್ಕಾರೇತರ ಸಂಸ್ಥೆಗಳ ಉದ್ಯೋಗ ಯೋಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ವ್ಯಕ್ತವಾಗಿರುತ್ತದೆ.

೩.೨.೧೯. ಮಾಹಿತಿದಾರರ ಭೂಮಿಯ ಒಡೆತನಕ್ಕೆ ಸಂಬಂಧಿಸಿದ ಸಮೀಕ್ಷೆ.

ಮಂಜೇಶ್ವರ ತಾಲೂಕಿನ ೫ ಪಂಚಾಯತ್‌ಗಳಲ್ಲಿ ಆಯ್ಕೆ ಮಾಡಿದ ಒಟ್ಟು ೮೦ ಫಲಾನುಭವಿಗಳಲ್ಲಿ ೪೨ ಮಂದಿ ಸ್ವಯಾರ್ಜಿತ ಭೂಮಿಯನ್ನು ಹೊಂದಿದ್ದಾರೆ. ೩೪ ಮಂದಿಯ ಪಿತ್ರಾರ್ಜಿತ ಭೂಮಿಯಲ್ಲಿ ಜೀವಿಸುತ್ತಿದ್ದಾರೆ ಎಂಬುದು ವ್ಯಕ್ತವಾಗುತ್ತದೆ. ಒಟ್ಟು ಫಲಾನುಭವಿಗಳಲ್ಲಿ ೧ ಫಲಾನುಭವಿ ಗೇಣಿ ಭೂಮಿಯಲ್ಲಿಯು ೧ ಫಲಾನುಭವಿ ಇತರ ಅಂದರೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ. ೨ ಮಂದಿ ಸರ್ಕಾರಿ ಭೂಮಿಯಲ್ಲಿ ವಾಸಿಸುತ್ತಿದ್ದಾರೆ ಎಂಬುದು ಸಂಶೋಧನೆಯಿಂದ ತಿಳಿದು ಬಂದಿದೆ.

ಅಧ್ಯಯನದಿಂದ ತಿಳಿದು ಬರುವ ಇನ್ನೊಂದು ಪ್ರಮುಖ ಅಂಶವೆಂದರೆ ಆಯ್ಕೆ ಮಾಡಲಾದ ಸರ್ಕಾರೇತರ ಸಂಸ್ಥೆಗಳ ಯೋಜನೆಗಳ ಫಲಾನುಭವಿಗಳಲ್ಲಿ ಶೇಕಡಾ ೯೫ರಷ್ಟು ಕುಟುಂಬದ ಜನರು ಸ್ವಂತ ಅಥವಾ ಪಿತ್ರಾರ್ಜಿತ ಜಮೀನನ್ನು ಹೊಂದಿರುವುದರಿಂದ ಇವರಿಗೆ ಯೋಜನೆಗಳಲ್ಲಿ ತಮ್ಮನ್ನು

ತೊಡಗಿಸಿಕೊಳ್ಳಲು ಮತ್ತು ಫಲಾನುಭವಿಗಳ ಪಟ್ಟಿಯಲ್ಲಿ ಆಯ್ಕೆಯಾಗಲು ಹೆಚ್ಚಿನ ಅವಕಾಶ ಇರುತ್ತದೆ. ಆದರೆ ಅಧ್ಯಯನ ಪ್ರದೇಶದಲ್ಲಿ ಆಯ್ಕೆ ಮಾಡಲಾದ ಶೇಕಡಾ ೫ರಷ್ಟು ಫಲಾನುಭವಿಗಳು ಸ್ವಂತ ಭೂಮಿಯನ್ನು ಹೊಂದಿರದವರು ಫಲನುಭವಿಯಾಗಿದ್ದರು. ಸರ್ಕಾರೇತರ ಸಂಸ್ಥೆಯ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ.

೩.೨.೨೦. ಫಲಾನುಭವಿಗಳ ವಾಹನದ ಒಡೆತನದ ಅಧ್ಯಯನ

ಸಂಶೋಧನೆಗೊಳಪಡಿಸಿದ ಸರ್ಕಾರೇತರ ಸಂಸ್ಥೆಯ ಎಂಭತ್ತು ಫಲಾನುಭವಿಗಳಲ್ಲಿ ೩೫ ಮಂದಿ ಫಲಾನುಭವಿಗಳು ಮಾತ್ರವೇ ವಾಹನದ ಒಡೆತನವನ್ನು ಹೊಂದಿರುವುದು, ಮಿಕ್ಕುಳಿದ ೪೫ ಮಂದಿಗೂ ಯಾವುದೇ ವಾಹನದ ಒಡೆತನವಿಲ್ಲ ಎಂಬ ವಿಷಯ ಸಂಶೋಧನೆಯಿಂದ ವ್ಯಕ್ತವಾಗುತ್ತದೆ.

ಸರ್ಕಾರೇತರ ಸಂಸ್ಥೆಯ ಫಲಾನುಭವಿಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿ ಇಲ್ಲವೆಂಬುದು ವಾಹನದ ಒಡೆತನದ ಬಗ್ಗೆ ನಡೆಸಿದ ಅಧ್ಯಯನದಿಂದ ವ್ಯಕ್ತವಾಗುತ್ತದೆ.

೩.೨.೨೧. ಫಲಾನುಭವಿಗಳ ವಾಹನದ ಸ್ವರೂಪ

ವಾಹನದ ಒಡೆತನದಿಂದ ಫಲಾನುಭವಿಗಳಲ್ಲಿ ಶೇ.೬೯ ಮಂದಿ ದ್ವಿಚಕ್ರ ವಾಹನದ ಒಡೆತನವನ್ನುಹೊಂದಿದ್ದಾರೆ, ಶೇ.೯ ಫಲಾನುಭವಿಗಳು ತ್ರಿಚಕ್ರ, ಶೇ.೫ ಮಂದಿ ಚತುರ್ಚಕ್ರ ವಾಹನದ ಒಡೆತನವನ್ನು ಹೊಂದಿದ್ದಾರೆ ಎಂಬುದು ಅಧ್ಯಯನದಿಂದ ತಿಳಿದು ಬರುತ್ತದೆ. ವಾಹನ ಒಡೆತನ ಇರುವ ಫಲಾನುಭವಿಗಳಲ್ಲಿ ಶೇ.೬ ಫಲಾನುಭವಿಗಳಿಗೆ ದ್ವಿಚಕ್ರ ಮತ್ತು ಚತುರ್ಚಕ್ರ ವಾಹನವಿದೆ. ವಾಹನಗಳ ಒಡೆತನವು ಫಲಾನುಭವಿಗಳ ಆರ್ಥಿಕ ಸ್ಥಿತಿಗತಿಯನ್ನು ತಿಳಿಸುವ ಅಂಶವಾಗಿದ್ದು ಅವರ ಸಾಮಾಜಿಕ ಸ್ಥಾನಮಾನವನ್ನು ವೃದ್ಧಿಸುತ್ತದೆ.

ಆದರೆ ಬಹುತೇಕ ಮಂದಿ ಅಂದರೆ ಎಂಭತ್ತರಲ್ಲಿ ನಲ್ವತ್ತೈದು ಫಲಾನುಭವಿಗಳು ತಮ್ಮ ಸ್ವಂತ ವಾಹನಗಳನ್ನು ಹೊಂದಿಕೊಳ್ಳಲು ಅಶಕ್ತರಾಗಿರುವುದು, ಆರ್ಥಿಕ ಹಿಂದುಳಿವಿಕೆಯನ್ನು ವ್ಯಕ್ತಪಡಿಸುತ್ತದೆ. ಈ ನಿಟ್ಟಿನಲ್ಲಿ ಈ ಸದಸ್ಯರಿಗೆ ಯೋಜನೆಗಳಿಂದ ಆರ್ಥಿಕ ಪ್ರಗತಿ ದೊರಕ ಬೇಕಾದ ಅನಿವಾರ್ಯತೆ ಇರುತ್ತದೆ.

೩.೨.೨.೨. ಮಾಹಿತಿದಾರರ ಋಣಭಾರದ ವಿವರ

ಗ್ರಾಮೀಣ ಋಣಭಾರವು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಇರುತ್ತದೆ. ಈ ನಿಟ್ಟಿನಲ್ಲಿ ಅಧ್ಯಯನಕ್ಕೆ ಒಳಪಡಿಸಲಾದ ಶೇಕಡಾ ೯೨.೫ ಫಲಾನುಭವಿಗಳು ವಿವಿಧ ಯೋಜನೆಗಳಿಗಾಗಿ ಸಾಲ ಪಡೆದಿರುವುದು ವ್ಯಕ್ತಿಗಳ ಉದ್ಯಮ ಶೀಲತೆ ಹಾಗೂ ವಿವಿಧ ವ್ಯವಸಾಯಗಳಲ್ಲಿ ತಮ್ಮನ್ನು ತೊಡಗಿಸುವ ಆಸಕ್ತಿಯನ್ನು ವ್ಯಕ್ತಪಡಿಸುತ್ತದೆ. ಈ ನಿಟ್ಟಿನಲ್ಲಿ ಗ್ರಾಮೀಣ ಪರಿಸರದಲ್ಲಿ ಸೇವೆ ಸಲ್ಲಿಸುತ್ತಿರುವ ಸಹಕಾರಿ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ಸರ್ಕಾರೇತರ ಸಂಘ ಸಂಸ್ಥೆಗಳ ಪಾತ್ರ ಶ್ಲಾಘನೀಯವಾಗಿರುತ್ತದೆ. ಅಧ್ಯಯನದ ಪ್ರಕಾರ, ಅಧ್ಯಯನ ಪ್ರದೇಶದಲ್ಲಿ ಲೇವಾದೇವಿಗಾರರ ಅಸ್ತಿತ್ವ ಜೀವಂತವಾಗಿರುವುದು ವ್ಯಕ್ತವಾಗುತ್ತದೆ.

೩.೨.೨೩. ಫಲಾನುಭವಿಗಳ ಸಾಲದ ಮೂಲದ ಸ್ವರೂಪ

ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಗೊಳಗಾದ ಪ್ರದೇಶಗಳಲ್ಲಿನ ಬಹುತೇಕ ಫಲಾನುಭವಿಗಳು ತಮ್ಮ ಅಗತ್ಯಗಳಿಗೆ ವಿವಿಧ ಮೂಲಗಳಿಂದ ಸಾಲವನ್ನು ಪಡೆದಿರುವುದು ಕಂಡುಬರುತ್ತದೆ. ವಾಣಿಜ್ಯ ಬ್ಯಾಂಕ್‌ನಿಂದ ಮತ್ತು

ಸಹಕಾರಿ ಸಂಘಗಳಿಂದ ಸಾಲ ಪಡೆದವರು ಸ್ವಲ್ಪ ಮಟ್ಟಿಗೆ ಇದ್ದಾರೆ. ಇತ್ತೀಚಿಗಿನ ದಿನಗಳಲ್ಲಿ ಕೇರಳದಲ್ಲಿ ಕಾನೂನಿನ ಕಟ್ಟುನಿಟ್ಟಿನ ಕ್ರಮ ಜಾರಿಯಲ್ಲಿರುವುದರಿಂದ ಸಾಲದಲ್ಲಿ ಲೇವಾದೇವಿಗಾರರ ಪಾತ್ರ ತೀರಾ ನಗಣ್ಯವಾಗಿದೆ ಎಂಬುದು ತಿಳಿದುಬಂದಿದೆ. ಸರ್ಕಾರೇತರ ಸಂಸ್ಥೆಯಲ್ಲಿ ಸದಸ್ಯತನ ಹೊಂದಿದವರು ತಮಗೆ ಬೇಕಾದ ಸಣ್ಣಮಟ್ಟ ಹಣಕಾಸಿನ ಅಗತ್ಯಗಳನ್ನು ತಾವು ಸದಸ್ಯರಾಗಿರುವ ಸರ್ಕಾರೇತರ ಸಂಸ್ಥೆಯಿಂದಲೇಸಾಲ ರೂಪದಲ್ಲಿ ಪಡೆದು ಅಲ್ಪಕಾಲಾವಧಿಯಲ್ಲಿ ಸಾಲವನ್ನು ಮರುಪಾವತಿ ಮಾಡುತ್ತಾರೆ ಎಂಬುದು ಈ ಸಂಶೋಧನೆಯಲ್ಲಿ ತಿಳಿದು ಬಂದಿದೆ.

ಸಂಶೋಧನೆಗೊಳಪಟ್ಟ ಫಲಾನುಭವಿಗಳಲ್ಲಿ ಶೇಕಡಾ ೬೫ ಮಂದಿ ಸರ್ಕಾರೇತರ ಸಂಸ್ಥೆಯಿಂದಲೇ ಸಾಲ ಪಡೆದು ಸದಸ್ಯತನದ ಪ್ರಯೋಜನವನ್ನು ಪಡೆದಿರುವುದು ಅಧ್ಯಯನದಿಂದ ವ್ಯಕ್ತವಾಗುತ್ತದೆ. ಜನರು ಸರ್ಕಾರೇತರ ಸಂಸ್ಥೆಯ ಸದಸ್ಯತನವನ್ನು ಪಡೆದ ನಂತರ ಅವರ ಆರ್ಥಿಕ ಸ್ಥಿತಿಗತಿಯ ಅಭಿವೃದ್ಧಿಗೆ ಸರ್ಕಾರೇತರ ಸಂಸ್ಥೆಗಳು ಪೂರಕವಾಗಿದೆ ಎಂಬುದು ವಿಶ್ಲೇಷಣೆಯಿಂದ ತಿಳಿದುಬಂದಿದೆ.

೩.೨.೨೪. ಸಾಲದಲ್ಲಿ ಸರ್ಕಾರಿ ಸಹಾಯ ಧನದ ವಿವರ

ಈ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲಾದ ಸರ್ಕಾರೇತರ ಸಂಸ್ಥೆಗಳ ಫಲಾನುಭವಿಗಳ ಪೈಕಿ ಸಾಲ ಪಡೆದುಕೊಂಡ ೭೪ ಮಂದಿಯಲ್ಲಿ ೮ ಮಂದಿ ಫಲಾನುಭವಿಗಳು ಸರಕಾರದ ಉತ್ತೇಜನ ಕೊಡುಗೆ ಎನಿಸಿದ ಸಹಾಯಧನವನ್ನು ಪಡೆದಿರುವುದು ಅಧ್ಯಯನದಿಂದ ವ್ಯಕ್ತವಾಗುತ್ತದೆ. ಆದರೆ ೬೬ ಮಂದಿ ಫಲಾನುಭವಿಗೆ ತಾವು ಪಡೆದ ಸಾಲಕ್ಕೆ ಯಾವುದೇ ಸಹಾಯ ಧನ ದೊರೆಯದಿರುವುದು ಕಂಡು ಬರುತ್ತದೆ. ಸಾಲ ಸೌಲಭ್ಯದ ಮರುಪಾವತಿಯಲ್ಲಿ ಸಮರ್ಪಕವಾಗಿರುವಿಕೆ ಸಹಾಯಧನ ಲಭ್ಯತೆಗೆ ಸಹಕಾರಿಯಾಗಿದೆ. ಅಷ್ಟು ಮಾತ್ರವಲ್ಲದೆ ಅನೇಕ ಸಾಲಯೋಜನೆಯಲ್ಲಿ ಸಹಾಯಧನದ ಅನುಕೂಲತೆ ಇಲ್ಲದಿರುವುದು ಇದಕ್ಕೆ ಕಾರಣವಾಗಿದೆ.

೩.೨.೨೫. ಸಾಲ ವಸೂಲಾತಿಗೆ ಕಟ್ಟುನಿಟ್ಟಿನ ಕ್ರಮ

ಫಲಾನುಭವಿಗಳ ಋಣಭಾದೆಗೆ ಸಂಬಂಧಿಸಿದಂತೆ ವಿವಿಧ ಮೂಲಗಳಿಂದ ಪಡೆದ ಸಾಲ ಸಮರ್ಪಕವಾಗಿ ಮರುಪಾವತಿಯಾಗದೆ ಇದ್ದಾಗ ಹಣಕಾಸಿನ ಸಂಸ್ಥೆಗಳು ಕೈಗೊಳ್ಳಲಾದ ಕಟ್ಟುನಿಟ್ಟಿನ ಕ್ರಮಗಳ ಬಗ್ಗೆ ಅಧ್ಯಯನ ನಡೆಸಿ ಕಂಡುಬಂದ ಅಂಕಿ ಅಂಶಗಳ ಪ್ರಕಾರ ಒಟ್ಟು ೯ ಮಂದಿ ಸುಸ್ತಿದಾರರಲ್ಲಿ ಕೇವಲ ೨ ಮಂದಿಯ ವಿರುದ್ಧ ಕ್ರಮ ಕೈಗೊಂಡಿರುವುದು ವ್ಯಕ್ತವಾಗುತ್ತದೆ. ಆದರೆ ೭ ಮಂದಿ ಸುಸ್ತಿದಾರರಲ್ಲಿ ಯಾವುದೇ ಕ್ರಮ ಕೈಗೊಳ್ಳದಿರುವುದು ಅಧ್ಯಯನದಿಂದ ವ್ಯಕ್ತವಾಗಿದೆ. ಹಣಕಾಸಿನ ಸಂಸ್ಥೆಗಳು ಕೆಲವೊಂದು ಸಂದರ್ಭದಲ್ಲಿ ಸಾಲಗಾರನ ಆರ್ಥಿಕ ಸ್ಥಿತಿಯ ಪೂರ್ವ ಪರವನ್ನು ಅಧ್ಯಯನ ಮಾಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿರುವುದು ಇದರಿಂದ ವ್ಯಕ್ತವಾಗುತ್ತದೆ. ಆದರೆ ಆರ್ಥಿಕವಾಗಿ ಸುದೃಢತೆ ಇಲ್ಲದ ಸಾಲಗಾರರ ಮೇಲೆ ಸಾಲವಸೂಲಿಗಾಗಿ ಶಿಸ್ತಿನ ಕ್ರಮಕೈಗೊಳ್ಳಲಾಗುತ್ತದೆ. ಸಾಲದ ಅಸಲು ಸಾಲಕ್ಕೆ ಮರುಪಾವತಿಯಾಗದಿದ್ದರೂ ಕಾಲಾಕಾಲಕ್ಕೆ ಸಂಬಂಧ ಪಟ್ಟ ಬಡ್ಡಿ ಪಾವತಿಯಿಂದಾದ ಶಿಸ್ತಿನ ಕ್ರಮದಿಂದ ಮುಕ್ತವಾಗಿರುವ ಫಲಾನುಭವಿಗಳು ಅಧ್ಯಯನದಲ್ಲಿ ಕಂಡುಬಂದಿರುತ್ತಾರೆ.

೩.೨.೨೬. ಫಲಾನುಭವಿಗಳ ಸಾಲದ ಮರುಪಾವತಿಯ ವಿವರ

ಸರ್ಕಾರೇತರ ಸಂಸ್ಥೆಗೆ ಸೇರಿದಂತೆ ವಿವಿಧ ಮೂಲಗಳಿಂದ ಸಂಶೋಧನೆಗೊಳಪಟ್ಟ ಒಟ್ಟು ಫಲಾನುಭವಿಗಳಲ್ಲಿ ೭೪ ಮಂದಿ ಸಾಲ ಪಡೆದಿರುವುದು ಸಂಶೋಧನೆಯಿಂದ ವ್ಯಕ್ತವಾಗಿದೆ. ಸಾಲ ಮರು ಪಾವತಿಯು ಸಮರ್ಪಕವಾಗಿದ್ದು ಸಂಸ್ಥೆಯಿಂದ ಸಾಲ ಪಡೆದ ಫಲಾನುಭವಿಗಳ ವಿರುದ್ಧ ಯಾವುದೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳ ಬೇಕಾದ ಅಗತ್ಯ ಬಂದಿಲ್ಲ ಎಂಬುದು ವಿಶ್ಲೇಷಣೆಯಿಂದ ಅರಿವಾಗಿದೆ. ಸಹಕಾರಿ ಸಂಘ ಹಾಗೂ ವಾಣಿಜ್ಯ ಬ್ಯಾಂಕ್‌ಗಳಿಂದ ಸಾಲ ಪಡೆದವರಲ್ಲಿ ೯ ಮಂದಿ ಸಾಲಮರುಪಾವತಿ ಸಮರ್ಪಕವಾಗಿ ಮಾಡಿಲ್ಲ ಎಂಬುದು ಸಂಶೋಧನೆಯಿಂದ ತಿಳಿದುಬಂದಿದೆ.

೩.೨..೨೭.ಫಲಾನುಭವಿಗಳ ಬ್ಯಾಂಕ್ ಖಾತೆಯ ವಿವರ

ಆರ್ಥಿಕ ಸೇರ್ಪಡೆಯು ಇಡೀ ದೇಶದಲ್ಲಿರುವ ಪ್ರತಿಯೊಂದು ಗ್ರಾಮದಲ್ಲಿಯೂ ಸಂಚಲನ ಮೂಡಿಸಿದರಿಂದ ಸಂಶೋಧನೆಗೆ ಆಯ್ಕೆ ಮಾಡಿದ ಎಲ್ಲಾ ಎಂಭತ್ತು ಫಲಾನುಭವಿಗಳು ಬ್ಯಾಂಕ್ ಖಾತೆಯನ್ನು ಹೊಂದಿರುವುದು ಸಮೀಕ್ಷೆಯಿಂದ ವ್ಯಕ್ತವಾಗಿದೆ. ಆರ್ಥಿಕ ಸೇರ್ಪಡೆಯು ಹೊಂದಿದವರು ತಮ್ಮ ಹೆಚ್ಚುವರಿ ಹಣವನ್ನು ಖಾತೆಯಲ್ಲಿ ಹೂಡಿ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಅವರು ಭಾಗಿಗಳಾಗಿದ್ದಾರೆ ಎಂಬುದು ಅಧ್ಯಯನದಿಂದ ತಿಳಿಯುತ್ತದೆ.

ಆರ್ಥಿಕ ಅಭಿವೃದ್ಧಿಗೂ ಗ್ರಾಮೀಣ ಹಣಕಾಸು ನಿರ್ವಹಣೆಗೂ ನಿಕಟ ಸಂಬಂಧ ವ್ಯಕ್ತವಾಗುತ್ತದೆ. ಗ್ರಾಮೀಣ ಅರ್ಥ ವ್ಯವಸ್ಥೆಯಲ್ಲಿ ವ್ಯಕ್ತಿಗಳು ಹಣಕಾಸಿನ ನಿರ್ವಹಣೆಯನ್ನು ಬ್ಯಾಂಕ್‌ಗಳ ಮೂಲಕ ನಿರ್ವಹಿಸದೆ ಪ್ರಾಚೀನ ಹಣಕಾಸು ವ್ಯವಸ್ಥೆಯಲ್ಲಿ ನಗದು ಹಣವನ್ನು ಚಲಾವಣೆಗೆ ಕೊಡದೆ ಕೂಡಿಟ್ಟು ಆರ್ಥಿಕ ಅಭಿವೃದ್ಧಿಗೆ ಹಿನ್ನಡೆ ಉಂಟುಮಾಡಲು ಕಾರಣೀಕರ್ತರಾಗಿದ್ದರು. ಕಡ್ಡಾಯ ಖಾತೆ ಅನುಷ್ಠಾನಗೊಂಡಾಗ ವ್ಯಕ್ತಿಗಳು ನಗದು ಹಣವನ್ನು ಬಚ್ಚಿಡುವ ಪರಿಪಾಠ ಕೊನೆಗೊಳ್ಳುತ್ತದೆ. ಆ ಪ್ರಕಾರ ಅರ್ಥವ್ಯವಸ್ಥೆಯ ಹಣದ ಮತ್ತು ಬಂಡವಾಳ ಮಾರುಕಟ್ಟೆಯಲ್ಲಿ ನಗದು ನಿರಾತಂಕವಾಗಿ ಸಂಚರಿಸಲು ಅನುಕೂಲವಾಗುವುದು. ಸಂಕ್ಷಿಪ್ತವಾಗಿ ಹೇಳುವುದಾದರೆ ಗ್ರಾಮೀಣ ಪ್ರದೇಶದ ಸಾಮಾನ್ಯ ಜನರ ಬ್ಯಾಂಕ್ ಠೇವಣಿ ವ್ಯವಸ್ಥೆ ಅಭಿವೃದ್ಧಿಯ ಸಂಕೇತವಾಗಿದೆ.

೩.೨.೨೮. ಫಲಾನುಭವಿಗಳ ಆರ್ಥಿಕ ಸಾಮಾಜಿಕ ಬದಲಾವಣೆಗಳ ವಿವರ

ಸುಸ್ಥಿರ ಅಭಿವೃದ್ಧಿಯಲ್ಲಿ ಏಕಕಾಲಕ್ಕೆ ಆರ್ಥಿಕ ಮತ್ತು ಸಾಮಾಜಿಕ ಬದಲವಣೆ ಉಂಟಾಗುವುದು ಅಗತ್ಯ. ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳು ಬಹಳ ನಿಕಟವಾಗಿ ಅವಲಂಬಿತವಾಗಿರುವ ಅಂಶಗಳು. ಅಧ್ಯಯನದಲ್ಲಿ ಕಂಡುಬಂದ ಅಂಶಗಳ ಪ್ರಕಾರ ಎಲ್ಲಾ ಸದಸ್ಯರು ಸರ್ಕಾರೇತರ ಸಂಸ್ಥೆಗಳ ಸದಸ್ಯತನದಿಂದಾಗಿ ಆರ್ಥಿಕ ಸಹಾಯವನ್ನು ಪಡೆಯುವರೊಂದಿಗೆ ಸಾಮಾಜಿಕ ಪ್ರಯೋಜನದ ಗಳಿಕೆಯನ್ನು ವ್ಯಕ್ತ ಪಡಿಸಿರುತ್ತಾರೆ. ಅಭಿವೃದ್ಧಿ ಪತದಲ್ಲಿ ಮುನ್ನಡೆಯಲು ಅನೇಕ ಆರ್ಥಿಕೇತರ ಅಂಶಗಳಲ್ಲಿ ಸುಧಾರಣೆ ತರುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ ಶ್ಲಾಘನೀಯ.

ಫಲಾನುಭವಿಗಳ ಸಾಮಾಜಿಕ ಬದಲಾವಣೆಗಳನ್ನು ಅಧ್ಯಯನ ಮಾಡಿದಾಗ ಸರ್ಕಾರೇತರ ಸಂಸ್ಥೆಗಳ ವಿವಿಧ ಯೋಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ತರುವಾಯು ಸುಮಾರು ೫ ವರ್ಷಗಳಲ್ಲಿ ೮೦

ಫಲಾನುಭವಿಗಳು ನೀಡಿರುವ ಅಂಕಿಅಂಶಗಳ ಪ್ರಕಾರ ಮಹಿಳೆಯರ ಮತ್ತು ಪುರುಷರ ವ್ಯಕ್ತಿತ್ವ ವಿಕಸನ, ಮುಂದಾಳುತ್ವ, ಮುಂದಾಳುತ್ವದ ಗುಣ, ಸಾಮಾಜಿಕ ಪಿಡುಗುಗಳ ವಿರುದ್ಧ ಜಾಗೃತಿ, ಅಂಧ ವಿಶ್ವಾಸಗಳ ಉಪೇಕ್ಷೆ ಮೊದಲಾದ ಅಂಶಗಳನ್ನು ಫಲಾನುಭವಿಗಳು ವ್ಯಕ್ತಪಡಿಸುತ್ತಾರೆ. ೫ ವರ್ಷಗಳ ಕಾಲಾವಧಿಯಲ್ಲಿ ಆರ್ಥಿಕ ಅಭಿವೃದ್ಧಿಯೊಂದಿಗೆ ಸಾಮಾಜಿಕ ಬದಲಾವಣೆಗಳು ಸಮಾಜದಲ್ಲಿ ಉಂಟಾಗಿರುತ್ತದೆ. ಆರ್ಥಿಕ ಸ್ವಾತಂತ್ರ್ಯವು ಸಾಮಾಜಿಕ ಸ್ವಾತಂತ್ರ್ಯವನ್ನು ನೀಡುತ್ತದೆ. ಮತ್ತು ವ್ಯಕ್ತಿಯನ್ನು ಸ್ವಾಭಿಮಾನದ ಬದುಕಿನತ್ತ ಕೊಂಡೊಯ್ಯಲು ಸಹಕಾರಿಯಾಗಿರುತ್ತದೆ. ಸಾಮಾಜಿಕ ಬದಲಾವಣೆಯು ಮಹಿಳೆಯರನ್ನು ಅನುತ್ಪಾದಕ ವಲಯದಿಂದ ಉತ್ಪಾದನೆಯತ್ತ ಕೊಂಡೊಯ್ಯಲು ಪ್ರೇರಣೆ ನೀಡುವುದರಿಂದ ಸಮಾಜದಲ್ಲಿ ಮಹಿಳಾ ಸಬಲೀಕರಣ ಉಂಟಾಗಿ ಪುರುಷ ಪ್ರಧಾನ ಕುಟುಂಬಗಳು ಇಲ್ಲದಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ದುಡಿಯುವ ಪ್ರಧಾನ ವ್ಯಕ್ತಿ ತನ್ನ ಅವಿವೇಕದಿಂದ ಅಥವಾ ಹವ್ಯಾಸದಿಂದ ಅಮಲು ದ್ರವ್ಯ ಸೇವನೆ, ಜುಜಾಟ, ಕೋಳಿಹಂಕ ಮತ್ತು ಭೋಗದ ಜೀವನದಿಂದಾಗಿ ಅರ್ಥ ವ್ಯವಸ್ಥೆಯ ಅತೀ ಸಣ್ಣ ಘಟಕವೆನ್ನಿಸಿದ ಕುಟುಂಬವನ್ನು ದಾರಿದ್ರ್ಯಕ್ಕೆ ತಳ್ಳುತ್ತಿದೆ. ಆದರೆ ಸರ್ಕಾರೇತರ ಸಂಸ್ಥೆಗಳ ಸುವ್ಯವಸ್ಥಿತವಾದ ತರಬೇತಿ, ಜಾಗೃತಿ, ಆರ್ಥಿಕ ಸಹಾಯವು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯಮಶೀಲತೆಯನ್ನು ರೂಪಿಸಿ ಇನ್ನಷ್ಟು ಮಂದಿಗೆ ಉದ್ಯೋಗ ನೀಡಲು ಸಹಕಾರಿಯಾಗಿದೆ.

೩.೨.೨೯. ಆರ್ಥಿಕ ಪ್ರಯೋಜನದ ಸದ್ಬಳಕೆಯ ವಿವರದ ಅಧ್ಯಯನ

ಒಟ್ಟು ೮೦ ಫಲಾನುಭವಿಗಳಲ್ಲಿ ಶೇಕಡಾ ೮೫ರಷ್ಟು ಮಂದಿ ತಮಗೆ ಸರ್ಕಾರೇತರ ಸಂಸ್ಥೆಯಿಂದ ಲಭ್ಯವಾಗುವ ಆರ್ಥಿಕ ಸಹಾಯದ ಸದ್ಬಳಕೆ ಮಾಡಿರುವುದು ಸಮೀಕ್ಷೆಯಿಂದ ತಿಳಿದು ಬಂದಿದೆ. ಉಳಿದ ಶೇಕಡಾ ೧೭ ಮಂದಿ ಲಭ್ಯವಾದ ಆರ್ಥಿಕ ಸಹಾಯವನ್ನು ಉದ್ದೇಶಿತ ಕಾರ್ಯಗಳಿಗೆ ಬಳಸಿಲ್ಲ ಎಂಬುದು ತಿಳಿದು ಬಂದಿದೆ.

೩.೨.೩೦. ಆರ್ಥಿಕ ಪ್ರಯೋಜನದ ಸ್ವರೂಪದ ಅಧ್ಯಯನ

ಫಲಾನುಭವಿಗಳು ಅವರಿಗೆ ಸರ್ಕಾರೇತರ ಸಂಸ್ಥೆಯಿಂದ ಲಭ್ಯವಾಗುತ್ತಿರುವ ಆರ್ಥಿಕ ಸಹಾಯವನ್ನು ಉತ್ಪಾದನ ಘಟಕಗಳಲ್ಲಿ ಉಪಯೋಗಿಸಿ ಆರ್ಥಿಕವಾಗಿ ಲಾಭಗಳಿಸುತ್ತಾರೆ. ಲಭ್ಯವಾದ ಆರ್ಥಿಕ ಸಹಾಯವನ್ನು ಉತ್ಪಾದನಾ ಚಟುವಟಿಕೆಯಲ್ಲಿ ಬಳಸಿರುವುದು ಅಭಿವೃದ್ಧಿಯ ಸೂಚಕವಾಗಿದೆ. ಶೇಕಡಾ ೮ ಮಂದಿ ಫಲಾನುಭವಿಗಳು ಹೈನುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿರುವುದು ಸಂಶೋಧನೆಯಿಂದ ಕಂಡು ಬರುತ್ತದೆ. ಕೃಷಿ ಪ್ರಧಾನ ಅರ್ಥವ್ಯವಸ್ಥೆಯಲ್ಲಿ ಕೃಷಿಯಲ್ಲಿ ಪ್ರಧಾನವಾಗಿ ತೊಡಗಿಸಿ ಕೊಂಡವರಿಗೆ ಹೈನುಗಾರಿಕೆ ಅನಿವಾರ್ಯವಾಗಿರುತ್ತದೆ. ಶೇಕಡಾ ೩ ಮಂದಿ ಸದಸ್ಯರು ಸಣ್ಣ ಮತ್ತು ಗುಡಿಕೈಗಾರಿಕೆಗೆ, ಶೇಕಡಾ ೮ ಮಂದಿ ಸಣ್ಣ ಪುಟ್ಟ ವ್ಯವಸಾಯಕ್ಕೆ, ಶೇಕಡಾ೨೨ ಫಲಾನುಭವಿಗಳು ಸ್ವಂತ ಉದ್ಯೋಗವನ್ನು ಪ್ರಾರಂಭಿಸಲು ಮತ್ತು ನಡೆಸಲು ಸರ್ಕಾರೇತರ ಸಂಸ್ಥೆಯಿಂದ ಲಭ್ಯವಾಗುವ ಆರ್ಥಿಕ ಸಹಾಯವನ್ನು ಬಳಸಿರುತ್ತಾರೆ.

ಸರ್ಕಾರೇತರ ಸಂಸ್ಥೆಯ ಆರ್ಥಿಕ ಪ್ರಯೋಜನವನ್ನು ಸದ್ಬಳಕೆ ಮಾಡಿದ ಒಟ್ಟು ಸದಸ್ಯರಲ್ಲಿ ಶೇಕಡಾ ೫೯ ಫಲಾನುಭವಿಗಳು ಹಣವನ್ನು ಇತರ ಅಗತ್ಯಗಳಾದ ಮನೆಯ ನಿರ್ಮಾಣ, ಮನೆಯ ದುರಸ್ತಿ ಕೆಲಸಗಳಿಗೆ ಬ್ಯಾಂಕ್‌ಗಳಲ್ಲಿ ಅಡವಿಟ್ಟ ಚಿನ್ನವನ್ನು ಬ್ಯಾಂಕ್‌ನಿಂದ ಹಿಂಪಡೆಯಲು, ಫಲಾನುಭವಿಗಳ

ಮಕ್ಕಳ ಮದುವೆಯ ಅಗತ್ಯಗಳಿಗೆ, ಮನೆಯನ್ನು ವಿದ್ಯುತ್ಕರಿಸಲು, ತೋಟದ ಕೆಲಸಗಳಿಗೆ, ಕೃಷಿ ಯಂತ್ರಗಳ ಖರೀದಿಗೆ ಮೊದಲಾದ ಅಗತ್ಯಗಳಿಗೆ ಬಳಕೆ ಮಾಡಿರುವುದು ಸಂಶೋಧನೆಯಿಂದ ತಿಳಿದು ಬಂದಿದೆ

೩.೨.೩೧. ಆರ್ಥಿಕ ಸಹಾಯ ಲಭ್ಯತೆಗೆ ತಗಲಿದ ಸಮಯ

ಸದಸ್ಯರು ತಾವು ಸದಸ್ಯತನವನ್ನು ಹೊಂದಿರುವ ಸರ್ಕಾರೇತರ ಸಂಸ್ಥೆಯಿಂದ ವಿವಿಧ ಪ್ರಮಾಣದಲ್ಲಿ ಆರ್ಥಿಕ ಸಹಾಯವನ್ನು ಪಡೆಯುತ್ತಾರೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ. ಈ ಆರ್ಥಿಕ ಸಹಾಯದ ಲಭ್ಯತೆಗೆ ಸದಸ್ಯರು ಸಹಾಯ ಅಪೇಕ್ಷಿಸಿ ಒಂದು ವಾರದಿಂದ ಒಂದು ತಿಂಗಳು ಅಥವಾ ಕೆಲವೊಮ್ಮೆ ಅದಕ್ಕಿಂತಲೂ ಹೆಚ್ಚು ಕಾಲ ನೀರಿಕ್ಷೆಯಿಂದ ಇರಬೇಕಾದ ಸಂದರ್ಭಗಳು ಇರುತ್ತದೆ ಎಂಬ ಸತ್ಯಾಂಶ ಸಮೀಕ್ಷೆಯಿಂದ ತಿಳಿದು ಬಂದಿದೆ. ಆರ್ಥಿಕ ಸಹಾಯವನ್ನು ಪಡೆದವರಲ್ಲಿ ಶೇಕಡಾ ೫೩ ಮಂದಿ ಫಲಾನುಭವಿ ಒಂದು ತಿಂಗಳು, ಶೇಕಡಾ ೩೦ ಮಂದಿ ಒಂದು ತಿಂಗಳಿಗಿಂತಲೂ ಹೆಚ್ಚು ಸಮಯ ಶೇಕಡಾ ೩ ಮಂದಿ ಹದಿನೈದು ದಿನಗಳು ಶೇಕಡಾ ೧೪ ಮಂದಿ ಒಂದು ವಾರ ಸಹಾಯವನ್ನು ಪಡೆಯಲು ನೀರಿಕ್ಷೆಯಲ್ಲಿದ್ದರು ಎಂಬುದು ಸಂಶೋಧನೆಯಿಂದ ತಿಳಿದು ಬಂದಿದೆ.

೩.೨.೩೨. ಫಲಾನುಭವಿಗಳ ಆರ್ಥಿಕ ಸವಲತ್ತುಗಳ ಉಪಯೋಗ

ಅಧ್ಯಯನದಲ್ಲಿ ಕಂಡುಬಂದ ಅಂಶಗಳ ಪ್ರಕಾರ ಸರ್ಕಾರೇತರ ಸಂಸ್ಥೆಗಳ ಹಣಕಾಸಿನ ಮತ್ತು ಹಣಕಾಸೇತರ ಸಹಾಯಗಳು ಗ್ರಾಮೀಣ ಪ್ರದೇಶದ ಫಲಾನುಭವಿಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಬದಲಾಯಿಸಲು ಶಕ್ತವಾಗಿದೆ. ಆದರೆ ಅವುಗಳ ತೀವ್ರತೆಯನ್ನು ಗಮನಿಸುವಾಗ ಲಭ್ಯ ಹಣಕಾಸಿನ ಸದ್ಬಳಕೆ ಪರಿಪೂರ್ಣವಾಗಿ ಆಗದಿರುವುದನ್ನು ಸಂಶೋಧನೆಯು ವ್ಯಕ್ತಪಡಿಸುತ್ತದೆ. ಒಟ್ಟು ೮೦ ಮಂದಿ ಫಲಾನುಭವಿಗಳಲ್ಲಿ ಶೇಕಡಾ ೬೮ರಷ್ಟು ಮಂದಿ ಹಣಕಾಸಿನ ಬಳಕೆ ಸಮರ್ಪಕವಾಗಿದ್ದು ಪೂರ್ಣ ಪ್ರಮಾಣದ ಪ್ರಯೋಜನ ಲಭ್ಯವಾಗಿರುವುದನ್ನು ವ್ಯಕ್ತಪಡಿಸುತ್ತಾರೆ. ಆದರೆ ಶೇಕಡಾ ೩೨ ಫಲಾನುಭವಿಗಳು ಹಣಕಾಸಿನ ಬಳಕೆಯಲ್ಲಿ ಪ್ರಯೋಜನವಾಗಿದ್ದರೂ ಅದರ ಗರಿಷ್ಠ ಪ್ರಮಾಣದ ಪ್ರಯೋಜನ ಪಡೆದಿರುವ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಿರುತ್ತಾರೆ.

೩.೨.೩೩. ಆರ್ಥಿಕ ಸಹಾಯದ ಆರ್ಥಿಕೇತರ ಉದ್ದೇಶಗಳು

ಆರ್ಥಿಕ ಸಹಾಯ ಸಮರ್ಪಕವಾಗಿ ಬಳಸದೆ ೨೬ ಮಂದಿ ಫಲಾನುಭವಿಗಳನ್ನು ಉದ್ದೇಶಿಸಿ ಕೇಳಲಾದ ಮಾಹಿತಿಯಲ್ಲಿ ದೊರೆತ ಅಂಶಗಳ ಪ್ರಕಾರ ಶೇಕಡಾ ೧೯ ಮಂದಿ ಫಲಾನುಭವಿಗಳು ದೊರೆತ ಹಣಕಾಸನ್ನು ಸಾಮಾಜಿಕ ಆಚರಣೆಗಾಗಿ ಬಳಕೆ ಮಾಡಿರುವುದು ವ್ಯಕ್ತವಾಗುತ್ತದೆ. ಅದೇ ರೀತಿಯಲ್ಲಿ ಶೇಕಡಾ ೪ ರಷ್ಟು ಮಂದಿ ಫಲಾನುಭವಿಗಳು ಸರ್ಕಾರೇತರ ಸಂಸ್ಥೆಗಳ ಹಣಕಾಸು ಸೌಲಭ್ಯವನ್ನು ಧಾರ್ಮಿಕ ಉದ್ದೇಶಕ್ಕಾಗಿ ವ್ಯಯ ಮಾಡಿರುವುದು ಗೋಚರವಾಗಿರುತ್ತದೆ. ಫಲಾನುಭವಿಗಳಲ್ಲಿ ಹಣವನ್ನು ಸಮರ್ಪಕವಾಗಿ ಬಳಸದೆ ಶೇಕಡಾ ೨೩ ಮಂದಿ ಸರ್ಕಾರೇತರ ಸಂಸ್ಥೆಯಿಂದ ದೊರೆತ ಹಣಕಾಸು ಸೌಲಭ್ಯವನ್ನು ಹಳೆಯ ಸಾಲದ ಪಾವತಿಗಾಗಿ ಬಳಕೆ ಮಾಡಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ. ಅಷ್ಟು ಮಾತ್ರವಲ್ಲದೆ, ಶೇಕಡಾ ೫೪ ಮಂದಿ ಫಲಾನುಭವಿಗಳು ಲಾಭ ಹಣಕಾಸಿನ ಸೌಲಭ್ಯವನ್ನು ಇತರ ಅವಶ್ಯಕತೆಗಳಿಗಾಗಿ ಬಳಕೆಮಾಡಿರುವುದು ಸಂಶೋಧನೆಯಿಂದ ವ್ಯಕ್ತವಾಗುತ್ತದೆ. ಈ ರೀತಿಯ ಅಸಮರ್ಪಕ

ಬಳಕೆಯಿಂದ ಆರ್ಥಿಕ ಅಭಿವೃದ್ಧಿ ಪಡೆಯಲು ಅಸಮರ್ಪಕರಾದ ಫಲಾನುಭವಿಗಳನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೩.೨.೩೪. ಫಲಾನುಭವಿಗಳಿಂದ ಹಣ ಸಂಗ್ರಹಿಸುವ ವ್ಯವಸ್ಥೆಯ ಅಧ್ಯಯನ

ಗ್ರಾಮೀಣ ಜನತೆಗೆ ಉದ್ಯೋಗ ಸೃಷ್ಟಿಸುವ ಕಾಯಕವನ್ನು ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳು ಕಾಲಕಾಲಕ್ಕೆ ಲಭ್ಯ ಆದಾಯದಿಂದ ಒಂದಾಂಶವನ್ನು ನಿರ್ದಿಷ್ಟವಾಗಿ ಸಂಗ್ರಹಿಸುವ ವ್ಯವಸ್ಥೆಯನ್ನು ರೂಪಿಸಿಕೊಂಡಿರುವುದು ಅಧ್ಯಯನದಿಂದ ವ್ಯಕ್ತವಾಗುತ್ತದೆ. ಗ್ರಾಮೀಣ ಜನತೆಯ ಉಳಿತಾಯವನ್ನು ಸಮರ್ಪಕವಾಗಿ ಕ್ರೋಢಿಕರಿಸಿ ನಿರ್ಧಿಷ್ಟ ಖಾತೆಗಳಲ್ಲಿ ಸಂಗ್ರಹಿಸುವ ವಿದ್ಯಾಮಾನವು ಅರ್ಥವ್ಯವಸ್ಥೆಯ ಅತೀ ಸಣ್ಣ ಘಟಕವಾದ ಕುಟುಂಬಗಳಲ್ಲಿ ವ್ಯವಸ್ಥೆ ಮಾಡಿಕೊಂಡಿರುವ ಆರ್ಥಿಕ ಅಭಿವೃದ್ಧಿಯ ವೇಗವು ಹೆಚ್ಚಾಗಲು ಪ್ರಾರಂಭವಾಗುವುದು. ಲಭ್ಯ ಅಂಕಿಅಂಶಗಳ ಪ್ರಕಾರ ಶೇಕಡಾ ೮೬ರಷ್ಟು ಸದಸ್ಯರಲ್ಲಿ ಈ ರೀತಿಯ ವ್ಯವಸ್ಥಿತ ಉಳಿತಾಯ ಪದ್ಧತಿ ರೂಪಿಸಲಾಗಿದೆ. ಆದರೆ ಮಾಹಿತಿದಾರರಲ್ಲಿ ಶೇಕಡಾ ೧೪ರಷ್ಟು ಸದಸ್ಯರ ಘಟಕದಲ್ಲಿ ಈ ರೀತಿಯ ವ್ಯವಸ್ಥಿತ ಉಳಿತಾಯದ ಬಗ್ಗೆ ಯೋಜನೆ ಇಲ್ಲದಿರುವುದು ಅಧ್ಯಯನದಿಂದ ಕಂಡು ಬರುತ್ತದೆ.

೩.೨.೩೫. ಸರ್ಕಾರೇತರ ಸಂಸ್ಥೆಗಳು ಸಂಗ್ರಹಿಸಿದ ಹಣದ ವಿನಿಯೋಗದ ವಿವರ

ಸದಸ್ಯರಿಂದ ಸಂಗ್ರಹಿಸಿದ ಹಣವನ್ನು ಸರ್ಕಾರೇತರ ಸಂಸ್ಥೆಯು ವಿವಿಧ ರೂಪದಲ್ಲಿ ಅಭಿವೃದ್ಧಿಗೆ ಉಪಯೋಗಿಸಲಾಗುತ್ತದೆ. ಸಂಶೋಧನೆಗೆ ಒಳಪಟ್ಟ ಶೇಕಡಾ ೨೬ ಸದಸ್ಯರು ಸದಸ್ಯತನವನ್ನು ಹೊಂದಿರುವ ಸರ್ಕಾರೇತರ ಸಂಸ್ಥೆಯಲ್ಲಿ ಸದಸ್ಯರಿಂದ ವಾರದಲ್ಲಿ ಸಂಗ್ರಹಿಸುವ ಹಣವನ್ನು ಸರ್ಕಾರೇತರ ಸಂಸ್ಥೆಯ ಠೇವಣಿಯಲ್ಲಿ ತೊಡಗಿಸಿದ್ದಾರೆ, ಶೇಕಡಾ ೫೧ ಮಂದಿ ಸದಸ್ಯತನವನ್ನು ಹೊಂದಿರುವ ಸಂಸ್ಥೆಯಲ್ಲಿ ಸದಸ್ಯರಿಗೆ ಸಾಲವಾಗಿ ನೀಡುತ್ತಾರೆ ಎಂಬುದು ಸಂಶೋಧನೆಯಿಂದ ವ್ಯಕ್ತವಾಗಿದೆ. ಅಧ್ಯಯನಕ್ಕೆ ಒಳಪಡಿಸಿದ ಶೇಕಡಾ ೨೩ ಮಂದಿ ಸದಸ್ಯರ ಅಭಿಪ್ರಾಯದಂತೆ ಸರ್ಕಾರೇತರ ಸಂಸ್ಥೆಯಲ್ಲಿ ವಿವಿಧ ಅಗತ್ಯಗಳಿಗೆ ಅಂದರೆ ಸದಸ್ಯರಿಗೆ ಸಾಲವಾಗಿ ನೀಡಲು, ಸರ್ಕಾರೇತರ ಸಂಸ್ಥೆಯ ಬ್ಯಾಂಕ್ ಖಾತೆಯಲ್ಲಿ ಠೇವಣಿಯಾಗಿಡಲು ಮೊದಲಾದ ಅಗತ್ಯಗಳಿಗೆ ವಿನಿಯೋಗ ಮಾಡಲಾಗುತ್ತದೆ ಎಂಬುದು ಸಂಶೋಧನೆಯಿಂದ ವ್ಯಕ್ತವಾಗುತ್ತದೆ. ಸರ್ಕಾರೇತರ ಸಂಸ್ಥೆಯು ಅಭಿವೃದ್ಧಿಗೆ ಪೂರಕವಾಗಿ ಸಂಗ್ರಹಿಸಿದ ಹಣವನ್ನು ಉಪಯೋಗಿಸುತ್ತಿದ್ದಾರೆ ಎಂಬುದು ಸಮೀಕ್ಷೆಯಿಂದ ತಿಳಿದುಬಂದಿದೆ.

.೩.೨.೩೬ ಸರ್ಕಾರೇತರ ಸಂಸ್ಥೆಗಳ ಸೇವಾವಧಿ (ವರ್ಷಗಳು)

ಸಂಶೋಧನೆಗೊಳಗಾದ ೮೦ ಸದಸ್ಯರುಗಳಲ್ಲಿ ಶೇಕಡಾ ೨೪ ಸದಸ್ಯರು ಸಹಾಯವನ್ನು ಪಡೆದ ಸಂಸ್ಥೆ ೧ ರಿಂದ ೩ ವರ್ಷಗಳ ಸೇವೆಯನ್ನು ನೀಡಿದ ಸಂಸ್ಥೆಗಳಾಗಿದ್ದು ಅತೀ ಹೆಚ್ಚು ಸದಸ್ಯರಿರುವ ಸಂಸ್ಥೆಗೆ ೪ ರಿಂದ ೬ ವರ್ಷದ ಸೇವಾ ಪರಿಚಯವಿದೆ. ಈ ಸಂಸ್ಥೆಗಳಲ್ಲಿ ಒಟ್ಟು ಫಲಾನುಭವಿಗಳಲ್ಲಿ ಶೇಕಡಾ ೩೦ ಮಂದಿ ಸದಸ್ಯರಾಗಿದ್ದಾರೆ. ೭ ರಿಂದ ೯ ವರ್ಷಗಳಿಂದ ಕಾರ್ಯಪ್ರವೃತ್ತವಾಗಿರುವ ಸಂಸ್ಥೆಯಲ್ಲಿ ಶೇಕಡಾ ೨೧ ಮಂದಿ ಸದಸ್ಯತನವನ್ನು ಹೊಂದಿದ್ದಾರೆ. ಶೇಕಡಾ ೨೫ ಮಂದಿ ೯ ಕ್ಕಿಂತಲೂ ಹೆಚ್ಚು ವರ್ಷಗಳಿಂದ ಜನಸೇವೆಯನ್ನು ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳಾಗಿದೆ ಎಂಬುದು ಸಂಶೋಧನೆಯಿಂದ ತಿಳಿದು ಬರುತ್ತದೆ.

೩.೨.೩೭ ೫ ವರ್ಷಗಳಿಂದ ಸರ್ಕಾರೇತರ ಸಂಸ್ಥೆಯಿಂದ ಉಂಟಾಗಿರುವ ಆರ್ಥಿಕ ಪ್ರಯೋಜನಗಳ ಅಧ್ಯಯನ

ಸಂಶೋಧನೆಗೆ ಒಳಪಡಿಸಿದ ೫ ವರ್ಷದ ಕಾಲಾವಧಿಯಲ್ಲಿ ವಿವಿಧ ಸರ್ಕಾರೇತರ ಸಂಸ್ಥೆಯ ಸದಸ್ಯರಿಗೆ ಅವರು ಸದಸ್ಯತನವನ್ನು ಹೊಂದಿರುವ ಸಂಸ್ಥೆಯಿಂದ ಅವರಿಗೆ ಲಭಿಸಿದ ಆರ್ಥಿಕ ಮತ್ತು ಆರ್ಥಿಕೇತರ ಪ್ರಯೋಜನಗಳ ಅಧ್ಯಯನವು ಬಹಳ ಕುತೂಹಲಕಾರಿಯಾಗಿದೆ. ಯಾಕೆಂದರೆ ಆರ್ಥಿಕ ಸಹಾಯವನ್ನು ಪಡೆದ ಶೇಕಡಾ ೨೮ ಮಂದಿ ತಮ್ಮ ಹಳೆಯ ಸಾಲ ಮರುಪಾವತಿಯ ಅಗತ್ಯಕ್ಕೆ ಸರ್ಕಾರೇತರ ಸಂಸ್ಥೆಯಿಂದ ಸಾಲ ಪಡೆದಿರುವುದು ಸಂಶೋಧನೆಯಿಂದ ವ್ಯಕ್ತವಾಗುತ್ತದೆ. ಶೇಕಡಾ ೧೮ ಮಂದಿ ಸದಸ್ಯರು ಸಾಲದ ಮೊತ್ತವನ್ನು ಗೃಹ ನಿರ್ಮಾಣ ಮತ್ತು ದುರಸ್ತಿಗೆ ಬಳಸಿರುವುದು ವ್ಯಕ್ತವಾಗಿದೆ. ಶೇಕಡಾ ೭ ಮಂದಿ ಸದಸ್ಯರು ಹೆಚ್ಚುವರಿ ಸ್ವ-ಉದ್ಯೋಗ ಅಗತ್ಯಗಳಿಗೆ ಸಾಲದ ಹಣವನ್ನು ಉಪಯೋಗಿಸಿರುವುದಾಗಿ ಕಂಡು ಬಂದಿದೆ. ಒಟ್ಟು ಫಲಾನುಭವಿಗಳಲ್ಲಿ ೨೫ ಮಂದಿ, ಅವರು ಸದಸ್ಯರಾಗಿರುವ ಸಂಸ್ಥೆಯಿಂದ ಹಲವು ರೀತಿಯ ಸಾಂಸ್ಕೃತಿಕ, ಸಾಮಾಜಿಕ ಮತ್ತು ತರಬೇತಿಯಂತಹ ಪ್ರಯೋಜನ ಮತ್ತು ಕೃಷಿಯ ವಿವಿಧ ಅಗತ್ಯಗಳಿಗೆ ಆರ್ಥಿಕ ಪ್ರಯೋಜನವನ್ನು ಬಳಸಿರುವುದು ಅಧ್ಯಯನದಿಂದ ತಿಳಿದುಬಂದಿದೆ. ೧೩ ಮಂದಿ ಸದಸ್ಯರು ಮೇಲೆ ಸೂಚಿಸಿದ ಎಲ್ಲ ರೀತಿಯ ಪ್ರಯೋಜನವನ್ನು ಅವರ ಸದಸ್ಯತನದ ಕಾಲಾವಧಿಯಲ್ಲಿ ಪಡೆದಿರುವುದು ಸಂಶೋಧನೆಯಿಂದ ವ್ಯಕ್ತವಾಗುತ್ತದೆ.

೩.೨.೩೮. ಫಲಾನುಭವಿಗಳ ಮಕ್ಕಳ ಶಿಕ್ಷಣಕ್ಕೆ ಸರ್ಕಾರೇತರ ಸಂಸ್ಥೆಯಿಂದ ಲಭಿಸಿದ ಸಹಾಯದ ಅಧ್ಯಯನ

ಸರ್ಕಾರೇತರ ಸಂಸ್ಥೆಗಳು ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ಅಭಿವೃದ್ಧಿಗಾಗಿ ಸಹಾಯ ನೀಡುವುದಲ್ಲದೆ ಇತರ ಆರ್ಥಿಕೇತರ ವಿಷಯಗಳಲ್ಲಿ ತಮ್ಮ ಸೇವಾಕಾರ್ಯಗಳನ್ನು ವಿಸ್ತರಿಸಿರುವುದು ಅವುಗಳ ಕಾರ್ಯಗಳಿಂದ ತಿಳಿಯುತ್ತದೆ. ಈ ಅಧ್ಯಯನದಲ್ಲಿ ದೊರೆತ ಅಂಶಗಳ ಪ್ರಕಾರ ಸಾಂಸ್ಕೃತಿಕ ಪರಿವರ್ತನೆಗಾಗಿ ಸರ್ಕಾರೇತರ ಸಂಸ್ಥೆಗಳು ತಮ್ಮ ಸೇವೆಯನ್ನು ಸಲ್ಲಿಸಿರುವುದು ಕಂಡು ಬಂದಿದ್ದು ಅವುಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನೀಡಲಾದ ಪ್ರಾಶಸ್ತ್ಯ ಉಲ್ಲೇಖನೀಯ.

ಒಟ್ಟು ೮೦ ಮಂದಿ ಫಲಾನುಭವಿಗಳಲ್ಲಿ ೩೧ ಮಂದಿ ಮಾಹಿತಿದಾರರು ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರೇತರ ಸಂಸ್ಥೆಗಳು ಹಣಕಾಸು ನೀಡುವ ಬಗ್ಗೆ ಅರಿವು ಇರುವುದನ್ನು ವ್ಯಕ್ತಪಡಿಸಿರುತ್ತಾರೆ. ಆದರೆ ಶೇಕಡಾ ೬೧ ಮಂದಿ ಶಿಕ್ಷಣ ಕ್ಷೇತ್ರಕ್ಕೆ ಸಹಾಯ ನೀಡುವ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ವ್ಯಕ್ತಪಡಿಸಿರುತ್ತಾರೆ.

೩.೨.೩೯ ಫಲಾನುಭವಿಗಳ ಮಕ್ಕಳ ಶಿಕ್ಷಣಕ್ಕೆ ಲಭಿಸಿದ ಸಹಾಯದ ವಿವಿಧ ರೂಪಗಳ ವಿಶ್ಲೇಷಣೆ

ಸರ್ಕಾರೇತರ ಸಂಸ್ಥೆಗಳು ಅದರ ಸದಸ್ಯರಿಗೆ ಹಲವು ರೀತಿಯಲ್ಲಿ ಸಹಾಯ ನೀಡುತ್ತದೆ ಎಂಬುದು ಬಹಳ ವಿಶೇಷತೆಯ ವಿಷಯವಾಗಿದೆ. ಕೆಲವು ಸರ್ಕಾರೇತರ ಸಂಸ್ಥೆಗಳು ಸದಸ್ಯರಿಗೆ ಆರ್ಥಿಕ ಸಹಾಯವನ್ನು ನೀಡಿದರೆ ಇನ್ನೂ ಕೆಲವು ಆರ್ಥಿಕೇತರ ಸಹಾಯವನ್ನು ನೀಡುತ್ತದೆ ಎಂಬುದು ಸಂಶೋಧನೆಯಿಂದ ತಿಳಿದುಬಂದಿದೆ. ಅಧ್ಯಯನಕ್ಕೆ ಒಳಗಾದ ಒಟ್ಟು ೮೦ ಮಂದಿ ಫಲಾನುಭವಿಗಳಲ್ಲಿ ೩೧ ಮಂದಿ ಫಲಾನುಭವಿಗಳ

ಮಕ್ಕಳ ಶಿಕ್ಷಣಕ್ಕೆ ಸಹಾಯ ಲಭಿಸಿದೆ. ಮತ್ತು ೪೯ ಮಂದಿ ಸದಸ್ಯರ ಮಕ್ಕಳಿಗೆ ಶಿಕ್ಷಣಕ್ಕೆ ಸಹಾಯ ಲಭಿಸಿಲ್ಲ ಎಂಬುದು ಸಮೀಕ್ಷೆಯಿಂದ ವ್ಯಕ್ತವಾಗಿದೆ. ಸದಸ್ಯತನ ಹೊಂದಿರುವ ಸರ್ಕಾರೇತರ ಸಂಸ್ಥೆಗಳಿಂದ ೨ ಸದಸ್ಯರ ಮಕ್ಕಳಿಗೆ ಉಚಿತ ಪುಸ್ತಕ ಮತ್ತು ಸಮವಸ್ತ್ರಕ್ಕಿರುವ ಸಹಾಯ, ೧ ಸದಸ್ಯನ ಮಕ್ಕಳಿಗೆ ಶಾಲೆಗಿರುವ ಸಾರಿಗೆ ವ್ಯವಸ್ಥೆ ಉಚಿತವಾಗಿ ಲಭಿಸಿರುವುದು ತಿಳಿದು ಬಂದಿದೆ. ಶಿಕ್ಷಣಕ್ಕೆ ಸಹಾಯ ದೊರೆತ ಒಟ್ಟು ೩೧ ಮಂದಿ ಸದಸ್ಯರ ಮಕ್ಕಳಲ್ಲಿ ೨೩ ಮಂದಿ ಸದಸ್ಯರ ಮಕ್ಕಳಿಗೆ ಸರ್ಕಾರೇತರ ಸಂಸ್ಥೆಯಿಂದ ಉಚಿತ ಶಿಕ್ಷಣ ಉಚಿತ ಪುಸ್ತಕ ಮತ್ತು ಸಮವಸ್ತ್ರ, ಸಾರಿಗೆ ವ್ಯವಸ್ಥೆ ಮೊದಲಾದವುಗಳು ಲಭಿಸಿರುವ ಬಗ್ಗೆ ಸಂಶೋಧನೆಯಲ್ಲಿ ವ್ಯಕ್ತವಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಕಾರ್ಯವೆಸಗುತ್ತಿರುವ ಸರ್ಕಾರೇತರ ಸಂಘ ಸಂಸ್ಥೆಗಳು ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಬೆಳಕು ಚೆಲ್ಲುತ್ತಿದ್ದು ಗ್ರಾಮೀಣಾಭಿವೃದ್ಧಿಗೆ ಕೊಡುಗೆಯನ್ನು ನೀಡುತ್ತಿರುವುದು ಸಂಶೋಧನೆಯಿಂದ ವ್ಯಕ್ತವಾಗಿದೆ.

೩.೨.೪೦. ಮಹಿಳಾ ಸದಸ್ಯರ ವಿವರಗಳು

ಪ್ರಸ್ತುತ ಅಧ್ಯಯನದಲ್ಲಿ ಫಲಾನುಭವಿಗಳ ಪಾಲುಗೊಳ್ಳುವಿಕೆ ವಿಚಾರವಾಗಿ ಲಿಂಗಾನುಪಾತ ವಿಷಯದ ವ್ಯಾಪ್ತಿಗೊಳಪಟ್ಟು ವಿಶ್ಲೇಷಿದಾಗ ಬಹುತೇಕ ಎಲ್ಲಾ ಸರ್ಕಾರೇತರ ಸಂಸ್ಥೆಗಳ ಯೋಜನೆಗಳ ಅಡಿಯಲ್ಲಿ ಪುರುಷರು ಮತ್ತು ಮಹಿಳೆಯರು ವಿಭಿನ್ನ ನಿಷ್ಪತ್ತಿಯಲ್ಲಿ ಫಲಾನುಭವಿಗಳಾಗಿರುವುದು ಗೋಚರವಾಗುತ್ತದೆ. ಆದರೆ ಅಧ್ಯಯನಕ್ಕೆ ಒಳಪಡಿಸಿದ ೮೦ ಮಂದಿ ಸದಸ್ಯರಲ್ಲಿ ೭೦ ಮಂದಿಗಳಲ್ಲಿ ಸಂಗ್ರಹಿಸಲಾದ ಅಂಕಿ ಅಂಶಗಳ ಪ್ರಕಾರ ಸರ್ಕಾರೇತರ ಸಂಸ್ಥೆಗಳ ಘಟಕಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಇರುವುದನ್ನು ಕಾಣಲಾಗಿದೆ. ಮತ್ತು ೧೦ ಮಂದಿ ಫಲಾನುಭವಿಗಳು ತಾವು ಫಲಾನುಭವಿಯಾಗಿರುವ ಘಟಕದಲ್ಲಿ ಮಹಿಳಾ ಸದಸ್ಯರು ಇಲ್ಲದಿರುವಿಕೆಯನ್ನು ವ್ಯಕ್ತಪಡಿಸಲಾಗಿರುತ್ತದೆ.

೩.೨.೪೧ ಮಹಿಳಾ ಸದಸ್ಯರಿಗೆ ಲಭ್ಯವಾದ ಸವಲತ್ತುಗಳು

ಗ್ರಾಮೀಣಾ ಅಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರಗಳನ್ನು ಈ ಅಧ್ಯಯನದಲ್ಲಿ ಹಲವು ಆಯಾಮಗಳ ಮೂಲಕ ಮಾಹಿತಿ ಸಂಗ್ರಹಿಸಿ ಆ ಪ್ರಕಾರ ಕಂಡು ಬಂದ ಅಂಶಗಳಲ್ಲಿ ಪ್ರಮುಖವಾದವುಗಳೆಂದರೆ ಮಹಿಳೆಯರ ಸಾಲಸೌಲಭ್ಯ, ಸ್ವ – ಉದ್ಯೋಗ ತರಬೇತಿ, ಉಳಿತಾಯ ಪ್ರವೃತಿ ಮಾಹಿತಿ ಕಾರ್ಯಾಗಾರ ಮೊದಲಾದವುಗಳು ಅಧ್ಯಯನದಲ್ಲಿ ಕಂಡುಬಂದ ಒಂದು ಪ್ರಮುಖ ವಿಷಯವೆಂದರೆ ಮಹಿಳೆಯರಿಗೆ ನೀಡಲಾದ ಸಾಲಸೌಲಭ್ಯವು ಸರ್ಕಾರೇತರ ಸಂಸ್ಥೆಗಳ ಒಂದು ವಿಶಿಷ್ಟ ಯೋಜನೆಯಾಗಿದ್ದು ಅದರಿಂದಾಗಿ ಆರ್ಥಿಕ ಅಭಿವೃದ್ಧಿಯಾಗಿದೆ ಎನ್ನುವ ಅಭಿಪ್ರಾಯವನ್ನು ಒಟ್ಟು ೭೦ ಫಲಾನುಭವಿಗಳಲ್ಲಿ ೧೪ ಮಂದಿ ಅಂದರೆ ಶೇಕಡಾ ೨೦ರಷ್ಟು ವ್ಯಕ್ತಿಗಳು ವ್ಯಕ್ತಪಡಿಸಿರುತ್ತಾರೆ. ಇಂದಿನ ಅರ್ಥವ್ಯವಸ್ಥೆಯಲ್ಲಿ ಬಂಡವಾಳದ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಧಾರಾಳ ಲಭ್ಯವಿರುವ ಮಾನವ ಸಂಪನ್ಮೂಲ ಮತ್ತು ಭೌತಿಕ ಅಥವಾ ಪ್ರಾಕೃತಿಕ ಸಂಪನ್ಮೂಲಗಳ ಬಳಕೆಯಾಗಿರುತ್ತಿರಲಿಲ್ಲ.

ಆರ್ಥಿಕ ಹಿಂದುಳಿವಿಕೆಗೆ ಮೂಲಭೂತ ಸೌಕರ್ಯಗಳಲ್ಲಿ ಹಣ ತೊಡಗಿಸುವಿಕೆಯು ಆರ್ಥಿಕ ಪ್ರಗತಿಯ ಚಕ್ರವನ್ನು ವೇಗವಾಗಿ ತಿರುಗುವಂತೆ ಮಾಡುತ್ತದೆ. ಅಧ್ಯಯನಕ್ಕೆ ಒಳಪಡಿಸಲಾದ ಒಟ್ಟು ೭೦

ಮಂದಿ ಮಹಿಳಾ ಫಲಾನುಭವಿಗಳಲ್ಲಿ ಶೇಕಡಾ ೩೬ರಷ್ಟು ಜನ ಸರ್ಕಾರೇತರ ಸಂಸ್ಥೆಗಳು ನೀಡುತ್ತಿರುವ ಸ್ವ–ಉದ್ಯೋಗ ಯೋಜನೆಯ ಬಗೆಗೆ ತಮ್ಮ ಒಲವು ವ್ಯಕ್ತಪಡಿಸಿರುತ್ತಾರೆ. ಸ್ವಾವಲಂಬನೆಯ ಬದುಕಿಗಾಗಿ ಸ್ವಂತ ದುಡಿಮೆ ಅತೀ ಅಗತ್ಯ ಎನ್ನುವುದು ಇದರ ವಾದ. ಈ ನಿಟ್ಟಿನಲ್ಲಿ ಗ್ರಾಮೀಣ ನಿರುದ್ಯೋಗಿ ಜನತೆ ವಿವಿಧ ಕ್ಷೇತ್ರದಲ್ಲಿ ಸ್ವಂತ ಉದ್ದಿಮೆಯ ಪ್ರಾರಂಭಿಸಲು ಅಗತ್ಯವಾದ ಮಾಹಿತಿಯನ್ನು ನೀಡುತ್ತಿರುವ ಬಗ್ಗೆ ಬಹಳಷ್ಟು ಮಂದಿ ಫಲಾನುಭವಿಗಳು ಒಮ್ಮತದಿಂದ ಶ್ಲಾಘನ ವ್ಯಕ್ತಪಡಿಸಿ ತಮ್ಮ ಅಭಿವೃದ್ಧಿಗೆ ಇದುವೇ ಮೂಲಕಾರಣ ಎಂದು ತಿಳಿಸಿರುವುದು ಅಧ್ಯಯನದಿಂದ ವ್ಯಕ್ತವಾಗಿರುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ ಶಿಕ್ಷಣವು ಒಂದೆಡೆ ಜ್ಞಾನದಾಯಕವಾಗಿಯು ಇನ್ನೊಂದೆಡೆ ಫಲಾದಾಯಕವಾಗಿಯು ಇರುವಂತೆ ಜ್ಞಾನದೊಂದಿಗೆ ಕೌಶಲ್ಯವು ಅಗತ್ಯ ಎನ್ನುವುದು ಸಾಬೀತಾಗಿರುತ್ತದೆ.

ಅಭಿವೃದ್ಧಿಯಲ್ಲಿ ಉಳಿತಾಯಕ್ಕೆ ಮಹತ್ವದ ಪಾತ್ರವಿದೆ. ಉಳಿತಾಯವು ವ್ಯಕ್ತಿಗಳಿಗೆ ಭವಿಷ್ಯದಲ್ಲಿ ಅಭಿವೃದ್ಧಿಯ ತಳಪಾಯವನ್ನು ನೀಡುತ್ತದೆ. ಅಧ್ಯಯನಕ್ಕೆ ಒಳಪಡಿಸಲಾದ ಮಹಿಳಾ ಫಲಾನುಭವಿಗಳಲ್ಲಿ ೬ ಮಂದಿ ಉಳಿತಾಯದ ಮಹತ್ವಕ್ಕೆ ಪ್ರಾಶಸ್ತ್ಯವನ್ನು ನೀಡಿರುತ್ತಾರೆ. ಸರ್ಕಾರೇತರ ಸಂಸ್ಥೆಗಳು ಜನರಿಗೆ ಕಾಲಕಾಲಕ್ಕೆ ಒತ್ತಾಯದ ಉಳಿತಾಯ ಮಾಡುವಂತೆ ಯೋಜನೆಗಳನ್ನು ರೂಪಿಸಿರುತ್ತದೆ. ಮೇಲ್ನೋಟಕ್ಕೆ ಇವುಗಳು ಅಹಿತಕರ ಎಂದು ಕಂಡು ಬಂದರೂ ಒತ್ತಾಯದ ಉಳಿತಾಯವು ನಿಧಿ ಸಂಚಯನಕ್ಕೆ ನಾಂದಿಯಾಗಿ ಮುಂದಿನ ಸಾಲರಹಿತ ಹೂಡಿಕೆಗೆ ಈ ನಿಧಿಯ ಬಳಕೆಯಾಗುತ್ತದೆ. ಹಾಗಾಗಿ ಸರ್ಕಾರೇತರ ಸಂಸ್ಥೆಗಳು ಉಳಿತಾಯ ಪ್ರವೃತ್ತಿಯಿಂದಾಗಿ ಜನರಿಗೆ ಸಾಲರಹಿತವಾಗಿ ಸ್ವ–ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ.

ಸರ್ಕಾರೇತರ ಸಂಸ್ಥೆಗಳ ವಿವಿಧ ಕಾರ್ಯಯೋಜನೆಗಳಲ್ಲಿ ಮಾಹಿತಿ ಕಾರ್ಯಾಗಾರ ಶ್ರೀ ಸಾಮಾನ್ಯರಿಗೆ ಸಿಗುವ ಉಚಿತ ಸವಲತ್ತಾಗಿರುತ್ತದೆ. ಈ ಮಾಹಿತಿ ಕಾರ್ಯಾಗಾರದಲ್ಲಿ ನಿರ್ವಹಣೆಯ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತದೆ. ನಿರ್ವಹಣೆಯಲ್ಲಿ ಉತ್ಪಾದನಾ ಘಟಕಗಳ ನಿರ್ವಹಣೆ, ಸಂಸ್ಕರಣೆ, ಮಾರುಕಟ್ಟೆ, ಹಣಕಾಸು ನಿರ್ವಹಣೆ, ಸಿಬ್ಬಂದಿ ನಿರ್ವಹಣೆ ಮೊದಲಾದ ಅಂಶಗಳಿಗೆ ಸಂಬಂಧ ಪಟ್ಟಂತೆ ಮಾಹಿತಿಯನ್ನು ನೀಡಲಾಗುತ್ತದೆ. ಒಟ್ಟು ಮಹಿಳಾ ಫಲಾನುಭವಿಗಳಲ್ಲಿ ೪ ಮಂದಿ ಮಾಹಿತಿ ಕಾರ್ಯಾಗಾರದ ಬಗ್ಗೆ ತಮ್ಮ ಒಲವು ವ್ಯಕ್ತಪಡಿಸಿರುತ್ತಾರೆ. ಗ್ರಾಮೀಣ ಪ್ರದೇಶದ ಉದ್ದಿಮೆಗಾರರು ಪ್ರಚಲಿತ ವಿದ್ಯಾಮಾನಗಳನ್ನು ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ನೆಲೆಯಲ್ಲಿ ಅರಿತಾಗ ಮಾತ್ರ ಉದ್ಯಮ ಸಾಹಸಕ್ಕೆ ಕೈ–ಹಾಕಲು ಸಾಧ್ಯವಾಗುತ್ತದೆ ಎಂಬ ಅಂಶವು ಅಧ್ಯಯನದಲ್ಲಿ ಕಂಡು ಬರುತ್ತದೆ.

ಒಟ್ಟು ೭೦ ಮಹಿಳಾ ಫಲಾನುಭವಿಗಳಲ್ಲಿ ೨೧ ಮಂದಿ ಅಂದರೆ ಶೇಕಡಾ ೩೦ರಷ್ಟು ವ್ಯಕ್ತಿಗಳು ಯಾವುದೇ ರೀತಿಯ ವ್ಯಕ್ತಿಗತ ವಿಷಯಗಳಿಗೆ ಆಸ್ಪದ ನೀಡದೆ ಸಮಗ್ರವಾಗಿ ಎಲ್ಲಾ ವಿಷಯಗಳು ಸರಿಸಮಾನ ಸ್ಥಾನದಲ್ಲಿ ಪ್ರಾಮುಖ್ಯವಾಗಿದೆ ಎಂಬ ಇಂಗಿತವನ್ನು ವ್ಯಕ್ತಪಡಿಸಿರುತ್ತಾರೆ. ಒಬ್ಬ ಯಶಸ್ವಿ ಉದ್ದಿಮೆದಾರನಿಗೆ ಸಾಮರ್ಥ್ಯವಾಗಿ ಉದ್ದಿಮೆಶೀಲತೆಯನ್ನು ಗ್ರಾಮೀಣ ಮಟ್ಟದಲ್ಲಿ ರೂಪಿಸಿಕೊಳ್ಳಲು ಹಣಕಾಸಿನ ಸೌಲಭ್ಯ ತರಬೇತಿ ಮತ್ತು ಮಾಹಿತಿ ಉಳಿತಾಯ ಮತ್ತು ಹೂಡಿಕೆಯ ಪ್ರವೃತ್ತಿ ಇವು ಎಲ್ಲಾವು ಅತ್ಯಗತ್ಯ ಎಂಬುದಾಗಿ ಮಾಹಿತಿ ನೀಡಿರುವುದನ್ನು ಈ ಅಧ್ಯಯನದಲ್ಲಿ ಕಾಣಲಾಗಿದೆ.

೩.೨.೪೨ ಸರ್ಕಾರೇತರ ಸಂಸ್ಥೆಯ ಮೂಲಕ ಲಭ್ಯವಿರುವ ಸಾಲದ ಮೊತ್ತದ ವಿವರ

ವಿವಿಧ ಸರ್ಕಾರೇತರ ಸಂಸ್ಥೆಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ೭೦ ಫಲಾನುಭವಿಗಳು ಸರ್ಕಾರೇತರ ಸಂಸ್ಥೆಯಿಂದ ಸಾಲದ ರೂಪದಲ್ಲಿ ಆರ್ಥಿಕ ಸಹಾಯವನ್ನು ಪಡೆದಿರುವುದು ವ್ಯಕ್ತವಾಗಿದೆ. ಕೆಲವು ಸಂಸ್ಥೆಗಳು ಸದಸ್ಯರಿಂದ ವಾರದಲ್ಲಿ ಸಂಗ್ರಹ ಮಾಡಿದ ಹಣದ ಮೊತ್ತವನ್ನು ಸದಸ್ಯರಿಗೆ ಅಲ್ಪವಾದಿಗೆ ಸಾಲವಾಗಿ ನೀಡುತ್ತಾರೆ ಎಂಬುದು ತಿಳಿದು ಬಂದಿದೆ. ಈಗ ನೀಡುವ ಮೊತ್ತವು ೧೦,೦೦೦ಕ್ಕಿಂತಲೂ ಕಡಿಮೆಯಾಗಿದ್ದು ಒಟ್ಟು ೭೦, ಫಲಾನುಭವಿಗಳಲ್ಲಿ ೧೨ ಸದಸ್ಯರು ಈ ಸಣ್ಣ ಪ್ರಮಾಣದ ಸಾಲದ ವ್ಯವಸ್ಥೆಯ ಪ್ರಯೋಜನ ಪಡೆದಿದ್ದಾರೆ. ೧೦,೦೦೦ಕ್ಕಿಂತಲೂ ಮೇಲ್ಪಟ್ಟ ಮೊತ್ತವನ್ನು ಸರ್ಕಾರೇತರ ಸಂಸ್ಥೆಗಳ ಮೂಲ ಸಂಸ್ಥೆಯ ಮುಖಾಂತರ ಸದಸ್ಯರಿಗೆ ವಿತರಣೆ ಮಾಡುವ ವ್ಯವಸ್ಥೆ ಇರುವುದು ಸಂಶೋಧನೆಯಿಂದ ತಿಳಿದು ಬಂದಿದೆ. ಇಂತಹ ವ್ಯವಸ್ಥೆಯ ಮೂಲಕ ಸಂಶೋಧನೆಗೆ ಒಳಪಡಿಸಿದ ಕೆಲವು ಸರ್ಕಾರೇತರ ಸಂಸ್ಥೆಗಳು ೧ ಲಕ್ಷದವರೆಗೂ ಅದಕ್ಕಿಂತಲೂ ಮೇಲ್ಪಟ್ಟು ಸಾಲವನ್ನು ನೀಡಿದ್ದಾರೆ ಎಂಬುದು ಸಂಶೋಧನೆಯಿಂದ ತಿಳಿದು ಬಂದಿದೆ.

ಸದ್ರಿ ಯೋಜನೆಯಡಿಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾದ ಫಲಾನುಭವಿಗಳಲ್ಲಿ ಶೇಕಡಾ ೨೪ ಮಂದಿ ಫಲಾನುಭವಿಗಳು ೨೫,೦೦೦ದಿಂದ ೫೦,೦೦೦ರ ವರೆಗೆ ಸಾಲದ ಮೊತ್ತವನ್ನು ಪಡೆದವರು ಇದ್ದಾರೆ ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ. ಮಾತ್ರವಲ್ಲದೆ ಶೇಕಡಾ ೨೨ ಮಂದಿ ಸದಸ್ಯರು ೫೦,೦೦೦ ಸಾವಿರದಿಂದ ೧,೦೦,೦೦೦ ಲಕ್ಷದ ವರೆಗಿನ ಸಾಲಯೋಜನೆಗಳಲ್ಲಿ ತೊಡಗಿಸಿದ್ದು ಒಟ್ಟು ಫಲಾನುಭವಿಗಳಲ್ಲಿ ಶೇ. ೨೦ ಮಂದಿ ಸದಸ್ಯರು ಒಂದು ಲಕ್ಷಕ್ಕೂ ಮೇಲ್ಪಟ್ಟು ಬಂಡವಾಳ ತೊಡಗಿಸುವ ಯೋಜನೆಗಳಲ್ಲಿ ಸರ್ಕಾರೇತರ ಸಂಸ್ಥೆಗಳ ಆರ್ಥಿಕ ಪ್ರಯೋಜನ ಪಡೆದಿರುವುದು ಸಂಶೋಧನೆಯಿಂದ ವ್ಯಕ್ತವಾಗಿದೆ.

೩.೨.೪೩. ಸರ್ಕಾರೇತರ ಸಂಸ್ಥೆಗಳನ್ನು ಆರ್ಥಿಕ ಸವಲತ್ತುಗಳಿಗೆ ಆಯ್ಕೆ ಮಾಡಲು ಕಾರಣ

ಅಧ್ಯಯನದಲ್ಲಿ ಒಟ್ಟು ೭೦ ಮಂದಿ ಸದಸ್ಯರು ವಿವಿಧ ಅಗತ್ಯಗಳಿಗೆ ಸರ್ಕಾರೇತರ ಸಂಸ್ಥೆಗಳಿಂದ ಸಹಾಯ ಪಡೆದವರಾಗಿದ್ದಾರೆ. ಫಲಾನುಭವಿಗಳನ್ನು ಸಂಪರ್ಕಿಸಿ ಸರ್ಕಾರೇತರ ಸಂಸ್ಥೆಗಳ ಸಾಲನೀಡಿಕೆಯ ವೈಶಿಷ್ಟತೆಗಳನ್ನು ಅಧ್ಯಯನ ಮಾಡಿದಾಗ ಕಂಡುಬಂದ ೪ ಅಂಶಗಳು ಪ್ರಧಾನವಾಗಿದೆ. ಅಧ್ಯಯನಕ್ಕೆ ಒಳಪಡಿಸಿದ ಫಲಾನುಭವಿಗಳಲ್ಲಿ ಶೇಕಡಾ ೧೧ರಷ್ಟು ಫಲಾನುಭವಿಗಳು ತಾವು ಸರ್ಕಾರೇತರ ಸಂಸ್ಥೆಗಳ ತ್ವರಿತಗತಿಯ ಸಾಲ ನೀಡಿಕೆ ವಿಧಾನದ ಸದುಪಯೋಗ ಪಡೆಯುವುದಕ್ಕೆ ಸರ್ಕಾರೇತರ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡಿರುವುದಾಗಿ ವ್ಯಕ್ತವಾಗಿರುತ್ತದೆ. ಸದಸ್ಯರಲ್ಲಿ ಶೇಕಡಾ ೧೩ ಫಲಾನುಭವಿಗಳು ತಾವು ಸರ್ಕಾರೇತರ ಸಂಸ್ಥೆಗಳಿಂದ ಸಾಲವನ್ನು ಪಡೆಯಲು ಕಡಿಮೆ ದಾಖಲೆ ಪತ್ರಗಳು ಅಗತ್ಯವಿರುವುದು ಎಂಬ ವಿಷಯ ಮನಗಂಡು ಅನ್ಯ ಬ್ಯಾಂಕುಗಳಿಂದ ಆರ್ಥಿಕ ಸಹಾಯ ಪಡೆಯದೆ ಸರ್ಕಾರೇತರ ಸಂಸ್ಥೆಗಳನ್ನು ಅವಲಂಬಿಸಿರುವುದಾಗಿ ತಿಳಿದು ಬಂದಿದೆ. ಶೇಕಡಾ ೭ ರಷ್ಟು ಫಲಾನುಭವಿಗಳು ತಿಳಿಸಿರುವ ಅಭಿಪ್ರಾಯದಂತೆ ಇತರ ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳನ್ನು ಹೋಲಿಸುವಾಗ ಕಡಿಮೆ ಪ್ರಮಾಣದ ಸಾಲಕ್ಕೆ ಸರ್ಕಾರೇತರ ಸಂಸ್ಥೆಗಳ ಬಡ್ಡಿದರವು ಕಡಿಮೆಯಾಗಿರುವ ಕಾರಣದಿಂದಾಗಿ ಫಲಾನುಭವಿಗಳು ಸಾಲದ ಪಡೆದಿದ್ದಾರೆ ಎಂಬ ವಿಷಯ ತಿಳಿದು ಬಂದಿದೆ. ಸರ್ಕಾರೇತರ ಸಂಸ್ಥೆಗಳ

ಸಂಘಗಳು ಗ್ರಾಮೀಣ ಪ್ರದೇಶದಲ್ಲಿ ಇರುವುದರಿಂದ ಮತ್ತು ಅವುಗಳೊಂದಿಗೆ ನಿಕಟ ಸಂಪರ್ಕ ಇರುವುದರಿಂದ ತಾವು ಸಾಲ ಸೌಲಭ್ಯವನ್ನು ಪಡೆದಿರುವುದಾಗಿ ಶೇಕಡಾ ೭ರಷ್ಟು ಸದಸ್ಯರು ವ್ಯಕ್ತಪಡಿಸಿರುವುದು ಅಂಕಿಅಂಶಗಳಿಂದ ತಿಳಿದುಬಂದಿದೆ. ಉಳಿದ ಶೇ. ೬೨ ಫಲಾನುಭವಿಗಳು ಮೇಲೆ ಹೇಳಲಾದ ಎಲ್ಲಾ ಅಂಶಗಳಿಂದ ಪ್ರೇರಿತವಾಗಿ ತಾವು ಸರ್ಕಾರೇತರ ಸಂಸ್ಥೆಗಳಿಂದ ಹಣಕಾಸಿನ ಸೌಲಭ್ಯಕ್ಕಾಗಿ ಬಳಸಿಕೊಂಡಿರುವ ವಿಷಯ ಈ ಅಧ್ಯಯನದಲ್ಲಿ ಲಭ್ಯವಾಗಿರುತ್ತದೆ.

೩.೨.೪೪. ಫಲಾನುಭವಿಗಳ ಕೃಷಿಗೆ ಸಂಬಂಧಿಸಿ ವಿವರ

ಸರ್ಕಾರೇತರ ಸಂಸ್ಥೆಯ ಫಲಾನುಭವಿಗಳು ಕೃಷಿಯಲ್ಲಿ ಒಳಗೊಳ್ಳುವಿಕೆಯ ಬಗ್ಗೆ ಕೈಗೊಂಡ ಸಮೀಕ್ಷೆಯಲ್ಲಿ ಆಶಾದಾಯಕವಾದ ಫಲಿತಾಂಶವಿದೆ. ಕೃಷಿಯೇ ಆರ್ಥಿಕ ಅಭಿವೃದ್ಧಿಗೆ ಬೆನ್ನೆಲುಬಾಗಿರುವ ಭಾರತದಲ್ಲಿ ಈ ಅಧ್ಯಯನವು ಮಹತ್ವ ಪೂರ್ಣವಾಗಿದೆ. ಒಟ್ಟು ೮೦ ಮಂದಿಯ ಅಧ್ಯಯನವು ಮಹತ್ವಪೂರ್ಣವಾಗಿದೆ. ಒಟ್ಟು ೮೦ ಮಂದಿಯ ಸಮೀಕ್ಷೆಯಲ್ಲಿ ಒಟ್ಟು ೨೫ ಮಂದಿ ಕೃಷಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂಬುದು ಸಂಶೋಧನೆಯಿಂದ ತಿಳಿದು ಬಂದಿದೆ. ಈ ಅಂಶವು ಅಧ್ಯಯನದಲ್ಲಿ ಪ್ರಾಪ್ತವಾದ ಮಹತ್ತರವಾದ ವಿಷಯವಾಗಿದ್ದು ಬಹುಸಂಖ್ಯೆಯ ಜನರು ತಮಗೆ ಲಭಿಸಿದ ಆರ್ಥಿಕ ಸಹಾಯವನ್ನು ಕೃಷಿ ಅಭಿವೃದ್ಧಿಗೆ ಮುಡಿಪಾಗಿಟ್ಟಿರುವುದು ಗ್ರಾಮೀಣಾಭಿವೃದ್ಧಿಯ ಕನಸು ನನಸಾಗಲು ಸಹಕಾರಿಯಾಗಿದೆ. ಫಲಾನುಭವಿಗಳಲ್ಲಿ ಒಟ್ಟು ೫೫ ಮಂದಿ ಗೃಹ ನಿರ್ಮಾಣ, ಹಳೆ ಸಾಲ ಮರುಪಾವತಿ ಇತರ ರಂಗಗಳಲ್ಲಿ ಉದ್ಯೋಗ ಸೃಷ್ಟಿ ಮೊದಲಾದ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಅವೆಲ್ಲವುಗಳಲ್ಲಿ ತೊಡಗಿಸಿದವರ ಸರಾಸರಿ ಸಂಖ್ಯೆಯು ಕೃಷಿ ರಂಗದಲ್ಲಿ ತೊಡಗಿಸಿರುವುದಕ್ಕೆ ಕಡಿಮೆಯಾಗಿರುತ್ತದೆ.

೩.೨.೪೫. ಕೃಷಿಯಲ್ಲಿ ಆಧುನಿಕ ತಾಂತ್ರಿಕತೆಯ ಉಪಯೋಗದ ಬಗ್ಗೆ ವಿಶ್ಲೇಷಣೆ

ಅಧ್ಯಯನದಲ್ಲಿ ಕೃಷಿರಂಗದ ಭಾಗವನ್ನು ಸಮಗ್ರವಾಗಿ ಅವಲೋಕಿಸಿದಾಗ ಸರ್ಕಾರೇತರ ಸಂಸ್ಥೆಗಳು ಕೇವಲ ಕೃಷಿ ಅಭಿವೃದ್ಧಿಗಾಗಿ ಹಣಕಾಸಿನ ಸೌಲಭ್ಯವನ್ನು ಮಾತ್ರ ನೀಡದೆ ಹಣಕಾಸೇತರ ಸಹಾಯುವನ್ನು ನೀಡುತ್ತಿರುವುದು ವ್ಯಕ್ತವಾಗುತ್ತದೆ. ಅಧ್ಯಯನ ಒಳಪಡಿಸಲಾದ ೮೦ ಮಂದಿ ಸದಸ್ಯರಲ್ಲಿ ಶೇಕಡಾ ೬೫ಮಂದಿ ಸರ್ಕಾರೇತರ ಸಂಸ್ಥೆಗಳು ತಮಗೆ ಕೃಷಿ ಅಭಿವೃದ್ಧಿ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ವಸ್ತು ರೂಪಿ ಸಲಕರಣೆಗಳ ಮೂಲಕ ಹಾಗೂ ತರಬೇತಿಗಳ ಮೂಲಕ ನೀಡಿರುವ ಬಗ್ಗೆ ಅಧ್ಯಯನ ಬೆಳಕು ಚೆಲ್ಲುತ್ತದೆ. ಆದರೆ ಅಧ್ಯಯನಕ್ಕೆ ಒಳಪಡಿಸಲಾದ ಫಲಾನುಭವಿಗಳಲ್ಲಿ ಶೇಕಡಾ ೩೫ ಕೃಷಿಕರು ತಾವು ಸಾಲಸೌಲಭ್ಯ ಪಡೆದಿರುವ ಸರ್ಕಾರೇತರ ಸಂಸ್ಥೆಗಳು ಈ ಸೌಲಭ್ಯದ ಹೊರತಾಗಿ ಯಾವುದೇ ಹಣಕಾಸೇತರ ಸೌಲಭ್ಯವನ್ನು ಕೃಷಿ ರಂಗಕ್ಕೆ ನೀಡಿರುವುದಿಲ್ಲ ಎಂಬ ವಿಷಯವನ್ನು ತಿಳಿಸಿರುವುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಕೃಷಿರಂಗದ ಯಶಸ್ವಿಗೆ ಹಣಕಾಸಿನ ಸೌಲಭ್ಯ ಒಂದೇ ಪರಿಹಾರವಾಗಿರದೆ ಉಳಿದ ಪ್ರಮುಖ ಅಂಶಗಳಾದ ತಂತ್ರಜ್ಞಾನ ಮಾರುಕಟ್ಟೆ ನಿರ್ವಹಣೆ, ಶೇಖರಣೆ, ಸಾಗಣಿಕೆ, ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಸಮಗ್ರ ಮಾಹಿತಿ ನೀಡುವುದು ಅಗತ್ಯವಾಗಿರುತ್ತದೆ.

ಸರ್ಕಾರೇತರ ಸಂಸ್ಥೆಗಳು, ಸಾಮಾಜಿಕ ರಂಗದಲ್ಲಿ ಸಕ್ರಿಯವಾಗಿದ್ದು ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳ ಸುಧಾರಣೆಯಲ್ಲಿ ಮಹತ್ವದ ಕಾರ್ಯವನ್ನು ನಿರ್ವಹಿಸುತ್ತಿವೆ. ಗ್ರಾಮೀಣ ಸಮಾಜದಲ್ಲಿ ಈಗಲೂ ನೆಲೆನಿಂತಿರುವ

ಸಾಮಾಜಿಕ ಆಚರಣೆಗಳು, ನಂಬಿಕೆಗಳು ಅನಭಿವೃದ್ಧಿಗೆ ಕಾರಣವಾಗಿದೆ. ಸಾಮಾಜಿಕ ಕೆಡುಕುಗಳ ನಿವಾರಣೆ ಮತ್ತು ಮಾನವ ಸಂಪನ್ಮೂಲಾಭಿವೃದ್ಧಿಗೆ ಪ್ರಯತ್ನವಾದಂತಹ ಸನ್ನಿಹಿತವಾಗಿದೆ. ಸರಕಾರದ ಯೋಜನೆಗಳು ಗ್ರಾಮೀಣ ಸಾಮಾನ್ಯ ಜನತೆಗೆ ತಲುಪಲು ಸ್ಥಳೀಯವಾಗಿ ಕಾರ್ಯಚರಿಸುತ್ತಿರುವ ಸರ್ಕಾರೇತರ ಸಂಸ್ಥೆಗಳ ಪಾತ್ರ ಉಲ್ಲೇಖನಿಯ. ಆದುದರಿಂದ ಸರ್ಕಾರೇತರ ಸಂಸ್ಥೆಯ ಸೇವೆಗಳು ಉನ್ನತೀಕರಿಸಲ್ಪಡುತ್ತಿವೆ. ಸರ್ಕಾರೇತರ ಸಂಸ್ಥೆಗಳು ಕೈಗೊಳ್ಳುವ ಗ್ರಾಮೀಣಾಭಿವೃದ್ಧಿ ಯೋಜನೆಗಳ ಫಲದಿಂದಾಗಿ ಗ್ರಾಮೀಣ ಜನತೆಯ ಜೀವನ ಉತ್ತಮವಾಗಲು ಪೂರಕವಾಗಿದೆ ಎಂಬುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಕೋಷ್ಟಕ ೩.೨.೧

ಸರ್ಕಾರೇತರ ಸಂಘ–ಸಂಸ್ಥೆಗಳ ಫಲಾನುಭವಿ / ಸದಸ್ಯರ ವಿವರ

ಸರ್ಕಾರೇತರ ಸಂಸ್ಥೆಯ ಹೆಸರು	ಫಲಾನುಭವಿಗಳ ಸಂಖ್ಯೆ	ಶೇಕಡಾ
ಕೆನರಾ ಅಭಿವೃದ್ಧಿ ಮತ್ತು ಶಾಂತಿ ಸಂಸ್ಥೆ	೨೪	೩೦
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ	೨೬	೩೨
ಕಲ್ಪವೃಕ್ಷ ಸ್ವ–ಸಹಾಯ ಸಂಸ್ಥೆ	೧೦	೧೩
ನವೋದಯ ಸ್ವ–ಸಹಾಯ ಸಂಸ್ಥೆ	೧೦	೧೨.೫
ಅನಂತಶ್ರೀ ಹೊಲಿಗೆ ತರಬೇತಿ ಸಂಸ್ಥೆ	೧೦	೧೨.೫
ಒಟ್ಟು	**೮೦**	**೧೦೦**

ಕೋಷ್ಟಕ ೩.೨.೨

ಫಲಾನುಭವಿಗಳ ಲಿಂಗಾನುಪಾತ

ಲಿಂಗ	ಸಂಖ್ಯೆ	ಶೇಕಡ
ಪುರುಷರು	೧೦	೧೨.೫೦
ಮಹಿಳೆಯರು	೭೦	೮೭.೫೦
ಒಟ್ಟು	೮೦	೧೦೦

ಕೋಷ್ಟಕ ೩.೨.೩

ಫಲಾನುಭವಿಗಳ ವಯೊಮಾನದ ಅಧ್ಯಯನ

ಫಲಾನುಭವಿಗಳ ವಯಸ್ಸು	ಸಂಖ್ಯೆ	ಶೇಕಡಾ
೧೬ಕ್ಕಿಂತ ಕೆಳಗಿನವರು	೦	೦
೧೬ – ೩೦	೧೦	೧೨.೫
೩೧ – ೪೫	೫೦	೬೨.೫
೪೬ – ೬೦	೧೯	೨೩.೭೫
೬೦ಕ್ಕಿಂತ ಮೇಲ್ಪಟ್ಟು	೧	೧.೨೫
ಒಟ್ಟು	೮೦	೧೦೦

ಕೋಷ್ಟಕ ೩.೨.೪

ಫಲಾನುಭವಿಗಳ ವಿದ್ಯಾರ್ಹತೆ

ವಿದ್ಯಾರ್ಹತೆ	ಸಂಖ್ಯೆ	ಶೇಕಡಾ
ಅನಕ್ಷರಸ್ಥರು	೦	೦
೧ – ೫	೭	೮.೭೫
೬ – ೧೦	೫೪	೬೭.೫೦
ಪಿಯುಸಿ/ಪ್ಲಸ್.ಟು	೧೭	೨೧.೨೫
ಪದವಿ ಮೇಲ್ಪಟ್ಟು	೨	೨.೫೦
ಒಟ್ಟು	೮೦	೧೦೦

ಕೋಷ್ಟಕ ೩.೨.೫

ಫಲಾನುಭವಿಗಳ ಕುಟುಂಬದ ಸದಸ್ಯರ ಸಂಖ್ಯೆಯ ಬಗ್ಗೆ ಅಧ್ಯಯನ

ಕುಟುಂಬದಲ್ಲಿರುವ ಜನರ ಸಂಖ್ಯೆ	ಸಂಖ್ಯೆ	ಶೇಕಡಾ
೨ - ೫	೪೮	೬೦
೬ - ೯	೨೭	೩೩.೭೫
೧೦ - ೧೩	೪	೫
೧೩ ಮೇಲ್ಪಟ್ಟು	೧	೧.೨೫
ಒಟ್ಟು	೮೦	೧೦೦

ಕೋಷ್ಟಕ ೩.೨.೬

ಫಲಾನುಭವಿಗಳ ಕುಟುಂಬದ ಸದಸ್ಯರ ಶಿಕ್ಷಣದ ವಿಶ್ಲೇಷಣೆ

ಫಲಾನುಭವಿಗಳಲ್ಲಿ ಶಿಕ್ಷಣದ ಅಂತಸ್ತು	ಸಂಖ್ಯೆ	ಶೇಕಡಾ.
ಅಶಿಕ್ಷಿತರು	೧೦	೧೨.೫
ಶಿಕ್ಷಿತರು	೭೦	೮೭.೫
ಒಟ್ಟು	೮೦	೧೦೦

ಕೋಷ್ಟಕ ೩.೨.೭

ಫಲಾನುಭವಿಗಳ ಧರ್ಮ

ಧರ್ಮ	ಸಂಖ್ಯೆ	ಶೇಕಡಾ
ಹಿಂದು	೭೧	೮೮.೭೫
ಮುಸ್ಲಿಂ	೭	೮.೭೫
ಕ್ರಿಶ್ಚಿಯನ್	೨	೨.೫೦
ಇತರ	೦	೦
ಒಟ್ಟು	೮೦	೧೦೦

ಕೋಷ್ಟಕ ೩.೨.೮

ವರ್ಗಕ್ಕೆ ಅನುಗುಣವಾಗಿ ಫಲಾನುಭವಿಗಳು

ವರ್ಗ	ಸಂಖ್ಯೆ	ಶೇಕಡಾ
ಒ.ಬಿ.ಸಿ	೩೫	೪೩.೭೫
ಒ.ಇ.ಸಿ	೧೭	೨೧.೨೫
ಎಸ್.ಸಿ	೯	೧೧.೨೫
ಎಸ್.ಟಿ	೧೭	೨೧.೨೫
ಸಾಮಾನ್ಯ ವರ್ಗ	೨	೨.೫೦
ಒಟ್ಟು	೮೦	೧೦೦

ಕೋಷ್ಟಕ ೩.೨.೯

ಫಲಾನುಭವಿಗಳಿಗೆ ಸರ್ಕಾರೇತರ ಸಂಸ್ಥೆಯ ಸದಸ್ಯರಾಗಲು ಪ್ರೇರಣೆ ನೀಡಿದವರ ಬಗ್ಗೆ ಅಧ್ಯಯನ

ಪ್ರೇರಣೆ ನೀಡಿದವರು	ಸಂಖ್ಯೆ	ಶೇಕಡಾ
ಕುಟುಂಬದ ಸದಸ್ಯರು	೧೨	೧೫
ಸಹಪಾಠಿಗಳು	೧೫	೧೮.೭೫
ಮಿತ್ರರು	೧೦	೧೨.೫
ಸರ್ಕಾರೇತರ ಸಂಸ್ಥೆಯ ಸದಸ್ಯರು	೪೩	೫೩.೭೫
ಧಾರ್ಮಿಕ ಮುಖಂಡರು	೦	೦
ಒಟ್ಟು	೮೦	೧೦೦

ಕೋಷ್ಟಕ ೩.೨.೧೦

ಮಾಹಿತಿದಾರರ ಸದಸ್ಯತನದ ಉದ್ದೇಶದ ಅಧ್ಯಯನ

ಸದಸ್ಯತನದ ಉದ್ದೇಶ	ಸಂಖ್ಯೆ	ಶೇಕಡಾ
ಆರ್ಥಿಕ ಸಹಾಯ	೨೩	೨೮.೭೫
ತರಬೇತಿ ಮತ್ತು ಮಾಹಿತಿ	೧೫	೧೮.೭೫
ಸದಸ್ಯತನ	೧	೧.೨೫
ಆರ್ಥಿಕ ಸಹಾಯ, ತರಬೇತಿ ಮತ್ತು ಮಾಹಿತಿ	೮	೧೦
ಆರ್ಥಿಕ ಸಹಾಯ ಮತ್ತು ಸದಸ್ಯತನ	೬	೭.೫
ತರಬೇತಿ ಮತ್ತು ಮಾಹಿತಿ ಮತ್ತು ಸದಸ್ಯತನ	೩	೩.೭೫
ಆರ್ಥಿಕ ಸಹಾಯ, ತರಬೇತಿ ಮತ್ತು ಮಾಹಿತಿ ಮತ್ತು ಸಾಂಸ್ಕೃತಿಕ ಪ್ರಯೋಜನ	೩	೩.೭೫
ಆರ್ಥಿಕ ಸಹಾಯ, ಸದಸ್ಯತನ ಮತ್ತು ಸಾಂಸ್ಕೃತಿಕ ಪ್ರಯೋಜನ	೮	೧೦
ಈ ಮೇಲಿನ ಎಲ್ಲವೂ	೧೩	೧೬.೨೫
ಒಟ್ಟು	**೮೦**	**೧೦೦**

ಕೋಷ್ಟಕ ೩.೨.೧೧

ಫಲಾನುಭವಿಗಳ ಆಹಾರ ವೈವಿಧ್ಯತೆ

ಆಹಾರ ವಸ್ತುಗಳು	ಸಂಖ್ಯೆ	ಶೇಕಡಾ
ಅಕ್ಕಿ	೬೫	೮೧%
ಗೋಧಿ	೩	೪%
ಹಾಲು/ಹಣ್ಣು	೫	೬%
ಮೇಲಿನ ಎಲ್ಲಾ	೭	೯%
	೮೦	೧೦೦

ಕೋಷ್ಟಕ ೩.೨.೧೨

ಫಲಾನುಭವಿಗಳ ಆಹಾರ ಪದ್ಧತಿ

ವಿಭಾಗ	ಸಂಖ್ಯೆ	ಶೇಕಡಾ(%)
ಸಸ್ಯಹಾರಿ	೧೦	೧೨.೫
ಮಾಂಸಹಾರಿ	೭೦	೮೭.೫
ಒಟ್ಟು	೮೦	೧೦೦

ಕೋಷ್ಟಕ ೩.೨.೧೩

ಫಲಾನುಭವಿಗಳ ಪ್ರಧಾನ ವೃತ್ತಿಯ ಮಾಹಿತಿ

ಪ್ರಧಾನ ವೃತ್ತಿ	ಸಂಖ್ಯೆ	ಶೇಕಡಾ
ಕೃಷಿ	೨	೨.೫
ಬೀಡಿ ಕೆಲಸ	೩೯	೪೮.೭೫
ಸರಕಾರಿ	೧	೧.೨೫
ಅರೇ ಸರಕಾರಿ	೭	೮.೭೫
ಕೈಗಾರಿಕೆ	೪	೫
ಇತರ	೨೭	೩೩.೭೫
ಒಟ್ಟು	೮೦	೧೦೦

ಕೋಷ್ಟಕ ೩.೨.೧೪

ಉಪವೃತ್ತಿಯಲ್ಲಿ ತೊಡಗಿಸಿಕೊಂಡ ಫಲಾನುಭವಿಗಳ ಮಾಹಿತಿ

ಉಪವೃತ್ತಿ	ಸಂಖ್ಯೆ	ಶೇಕಡಾ
ಹೈನುಗಾರಿಕೆ	೩೪	೪೨.೫
ಕೋಳಿ ಸಾಕಾಣೆ	೨೬	೩೨.೫
ಜೇನು ವ್ಯವಸಾಯ	೧೦	೧೨.೫
ಇತರ	೧೦	೧೨.೫
ಒಟ್ಟು	೮೦	೧೦೦

ಕೋಷ್ಟಕ ೩.೨.೧೫

ಫಲಾನುಭವಿಗಳ ಆದಾಯದ ಸ್ಥಿತಿಗತಿ

ವಾರ್ಷಿಕ ಆದಾಯದ ಮಿತಿ	ಸಂಖ್ಯೆ	ಶೇಕಡಾ
೧,೦೦,೦೦೦ ಕ್ಕಿಂತ ಕೆಳಗೆ	೩೬	೪೫
೧,೦೦,೦೦೧ ರಿಂದ ೨,೦೦,೦೦೦	೧೮	೨೨.೫
೨,೦೦,೦೦೧ ರಿಂದ ೩೦೦,೦೦೦	೧೨	೧೫
೩,೦೦,೦೦೧ ರಿಂದ ೪,೦೦,೦೦೦	೯	೧೧
೪,೦೦,೦೦೧ ರಿಂದ ೫,೦೦,೦೦೦	೩	೪
೫,೦೦,೦೦೦ ಮೇಲ್ಪಟ್ಟು	೨	೨.೫
ಒಟ್ಟು	೮೦	೧೦೦

ಕೋಷ್ಟಕ ೩.೨.೧೬

ಫಲಾನುಭವಿಗಳ ಕುಟುಂಬದಲ್ಲಿ ದುಡಿಯುವವರ ಸಂಖ್ಯೆ

ದುಡಿಯುವವರು ಶೇಕಡಾದಲ್ಲಿ	ಸದಸ್ಯರ ಸಂಖ್ಯೆ
೩೦ಕ್ಕಿಂತ ಕೆಳಗೆ	೧೭
೩೦ – ೫೦	೪೯
೫೧ – ೭೦	೬
೭೧ – ೯೦	೫
೯೧ – ೧೦೦	೩

ಕೋಷ್ಟಕ ೩.೨.೧೭

ಫಲಾನುಭವಿಯ ಮನೆಯ ಸ್ವರೂಪದ ಅಧ್ಯಯನ

ಮನೆಯ ಸ್ವರೂಪ	ಸಂಖ್ಯೆ	ಶೇಕಡಾ
ಹಂಚಿನ ಮನೆ	೨೯	೩೬.೨೫
ತಾರಸಿನ ಮನೆ	೪೮	೬೧
ಸಿಮೆಂಟ್ ಶೀಟ್	೩	೩.೭೫
ಮುಳಿಹುಲ್ಲು	೦	೦
ಒಟ್ಟು	೮೦	೧೦೦

ಕೋಷ್ಟಕ ೩.೨.೧೮

ಮಾಹಿತಿದಾರರ ಭೂಹಿಡುವಳಿಯ ಗಾತ್ರದ ಅಧ್ಯಯನ

ಭೂಹಿಡುವಳಿ	ಸಂಖ್ಯೆ	ಶೇಕಡಾ
೦ – ೧	೭೫	೯೩.೭೫
೧ – ೫	೩	೩.೭೫
೫ – ೧೦	೨	೨.೫೦
೧೦ ಮೇಲ್ಪಟ್ಟು	೦	೦
ಒಟ್ಟು	೮೦	೧೦೦

ಕೋಷ್ಟಕ ೩.೨.೧೯

ಮಾಹಿತಿದಾರರ ಭೂಮಿಯ ಒಡೆತನಕ್ಕೆ ಸಂಬಂಧಿಸಿದ ಸಮೀಕ್ಷೆ

ಒಡೆತನ	ಸಂಖ್ಯೆ	ಶೇಕಡಾ(%)
ಸ್ವಂತ	೪೨	೫೨.೫
ಪಿತ್ರಾರ್ಜಿತ	೩೪	೪೩
ಗೇಣಿ	೧	೧.೨೫
ಸರ್ಕಾರಿ ಭೂಮಿ	೨	೨.೫
ಇತರ	೧	೧.೨೫
ಒಟ್ಟು	೮೦	೧೦೦

ಕೋಷ್ಟಕ ೩.೨.೨೦

ಫಲಾನುಭವಿಗಳ ವಾಹನದ ಒಡೆತನದ ಅಧ್ಯಯನ

	ಇದೆ	ಇಲ್ಲ	ಒಟ್ಟು
ಸಂಖ್ಯೆ	೩೫	೪೫	೮೦
ಶೇಕಡಾ	೪೪	೫೬	೧೦೦

ಕೋಷ್ಟಕ ೩.೨.೨೧

ಫಲಾನುಭವಿಗಳ ವಾಹನದ ಸ್ವರೂಪ

ವಾಹನದ ಸ್ವರೂಪ	ಸಂಖ್ಯೆ	ಶೇಕಡಾ
ದ್ವಿಚಕ್ರ	೨೪	೬೯
ತ್ರಿಚಕ್ರ	೩	೯
ಚರ್ತುಚಕ್ರ	೫	೧೧
ಇತರ	೧	೩
ದ್ವಿಚಕ್ರ ಮತ್ತು ಚರ್ತುಚಕ್ರ	೨	೬
ಒಟ್ಟು	೩೫	೧೦೦

ಕೋಷ್ಟಕ ೩.೨.೨೨

ಮಾಹಿತಿದಾರರ ಋಣಭಾರದ ವಿವರ

	ಸಂಖ್ಯೆ	ಶೇಕಡಾ
ಸಾಲ ಪಡೆದವರು	೭೪	೯೨.೫
ಸಾಲ ರಹಿತ	೬	೭.೫
ಒಟ್ಟು	೮೦	೧೦೦

ಕೋಷ್ಟಕ ೩.೨.೨೩

ಫಲಾನುಭವಿಗಳ ಸಾಲದ ಮೂಲದ ಸ್ವರೂಪ

ಸಾಲದ ಮೂಲ	ಸಂಖ್ಯೆ	ಶೇಕಡಾ(%)
ಸಹಕಾರಿ ಸಂಘ	೧೬	೨೨
ವಾಣಿಜ್ಯ ಬ್ಯಾಂಕ್	೯	೧೨
ಲೇವಾದೇವಿದಾರರು	೧	೧
ಸರ್ಕಾರೇತರ ಸಂಸ್ಥೆಗಳು	೪೮	೬೫
ಒಟ್ಟು	೮೦	೧೦೦

ಕೋಷ್ಟಕ ೩.೨.೨೪

ಸಾಲದಲ್ಲಿ ಸರ್ಕಾರಿ ಸಹಾಯ ಧನದ ವಿವರ

ಸಹಾಯಧನ	ಸಂಖ್ಯೆ	ಶೇಕಡಾ(%)
ಇದೆ	೮	೧೧
ಇಲ್ಲ	೬೬	೮೯
ಒಟ್ಟು	೭೪	೧೦೦

ಕೋಷ್ಟಕ ೩.೨.೨೫

ಸಾಲ ವಸೂಲಾತಿಗೆ ಕಟ್ಟುನಿಟ್ಟಿನ ಕ್ರಮ

ಶಿಸ್ತಿನ ಕ್ರಮ	ಸಂಖ್ಯೆ	ಶೇಕಡಾ
ಇದೆ	೨	೨೨
ಇಲ್ಲ	೭	೭೮
ಒಟ್ಟು	೯	೧೦೦

ಕೋಷ್ಟಕ ೩.೨.೨೬

ಫಲಾನುಭವಿಗಳ ಸಾಲದ ಮರುಪಾವತಿಯ ವಿವರ

ಸಾಲ ಮರುಪಾವತಿ	ಸಂಖ್ಯೆ	ಶೇಕಡಾ(%)
ಸಮರ್ಪಕವಾಗಿದೆ	೬೫	೮೮
ಸಮರ್ಪಕವಾಗಿಲ್ಲ	೯	೧೨
	೭೪	೧೦೦

ಕೋಷ್ಟಕ ೩.೨.೨೭

ಫಲಾನುಭವಿಗಳ ಬ್ಯಾಂಕ್ ಖಾತೆಯ ವಿವರ

ಖಾತೆಯ ವಿವರ	ಸಂಖ್ಯೆ	ವಿವರ
ಖಾತೆ ಹೊಂದಿದವರು	೮೦	೧೦೦
ಖಾತೆ ರಹಿತರು	೦	೦
ಒಟ್ಟು	೮೦	೧೦೦

ಕೋಷ್ಟಕ ೩.೨.೨೮

ಫಲಾನುಭವಿಗಳ ಆರ್ಥಿಕ ಸಾಮಾಜಿಕ ಬದಲಾವಣೆಗಳ ವಿವರ

ಬದಲಾವಣೆ	ಸಾಮಾಜಿಕ		ಆರ್ಥಿಕ	
	ಸಂಖ್ಯೆ	ಶೇಕಡಾ(%)	ಸಂಖ್ಯೆ	ಶೇಕಡಾ(%)
ಇಲ್ಲ	೦	೦	೦	೦
ಇದೆ	೮೦	೧೦೦	೮೦	೧೦೦
ಒಟ್ಟು	೮೦	೧೦೦	೮೦	೧೦೦

ಕೋಷ್ಟಕ ೩.೨.೨೯

ಆರ್ಥಿಕ ಸವಲತ್ತುಗಳ ಸದ್ಬಳಕೆಯ ವಿವರದ ಅಧ್ಯಯನ

ಪ್ರಯೋಜದ ಸದ್ಬಳಕೆ	ಸಂಖ್ಯೆ	ಶೇಕಡಾ(%)
ಮಾಡಿದೆ	೬೬	೮೩
ಇಲ್ಲ	೧೪	೧೭
ಒಟ್ಟು	೮೦	೧೦೦

ಕೋಷ್ಟಕ ೩.೨.೩೦

ಆರ್ಥಿಕ ಪ್ರಯೋಜನದ ಸ್ವರೂಪದ ಅಧ್ಯಯನ

ಪ್ರಯೋಜನದ ಸ್ವರೂಪ	ಸಂಖ್ಯೆ	ಶೇಕಡಾ(%)
ಹೈನುಗಾರಿಕೆ	೫	೮
ಗುಡಿಕೈಗಾರಿಕೆ	೨	೩
ಸ್ವಂತ ಉದ್ಯೋಗ	೧೫	೨೨
ವ್ಯವಸಾಯ	೫	೮
ಇತರ ಅಗತ್ಯ	೩೯	೫೯
ಒಟ್ಟು	೬೬	೧೦೦

ಕೋಷ್ಟಕ ೩.೨.೩೧

ಆರ್ಥಿಕ ಸಹಾಯ ಲಭ್ಯತೆಗೆ ತಗಲಿದ ಸಮಯ

ಸಾಲ ಸೌಲಭ್ಯತೆ ತಗುಲಿದ ಸಮಯ	ಸಂಖ್ಯೆ	ಶೇಕಡಾ(%)
ಒಂದು ವಾರ	೯	೧೪
ಒಂದು ಪಕ್ಷ	೨	೩
ಒಂದು ತಿಂಗಳು	೩೫	೫೩
ಒಂದು ತಿಂಗಳು ಮೇಲ್ಪಟ್ಟು	೨೦	೩೦
ಒಟ್ಟು	೬೬	೧೦೦

ಕೋಷ್ಟಕ ೩.೨.೩೨

ಫಲಾನುಭವಿಗಳ ಆರ್ಥಿಕ ಸವಲತ್ತುಗಳ ಉಪಯೋಗ

ಆರ್ಥಿಕ ಸಹಾಯದ ಉಪಯೋಗ	ಸಂಖ್ಯೆ	ಶೇಕಡಾ(%)
ಸಮರ್ಪಕವಾಗಿದೆ	೫೪	೬೮
ಸಮರ್ಪಕವಾಗಿಲ್ಲ	೨೬	೩೨
ಒಟ್ಟು	೮೦	೧೦೦

ಕೋಷ್ಟಕ ೩.೨.೩೩

ಆರ್ಥಿಕ ಸಹಾಯದ ಆರ್ಥಿಕೇತರ ಉದ್ದೇಶಗಳು

ಆರ್ಥಿಕೇತರ ಉದ್ದೇಶದ ಸ್ವರೂಪ	ಸಂಖ್ಯೆ	ಶೇಕಡಾ(%)
ಸಾಮಾಜಿಕ ಆಚರಣೆ	೫	೧೯
ಧಾರ್ಮಿಕ ಉದ್ದೇಶ	೧	೪
ಹಳೆಯ ಸಾಲದ ಪಾವತಿ	೬	೨೩
ಇತರ ಅಗತ್ಯಗಳಿಗಾಗಿ	೪	೫೪
ಒಟ್ಟು	೮೦	೧೦೦

ಕೋಷ್ಟಕ ೩.೨.೩೪

ಫಲಾನುಭವಿಗಳಿಂದ ಹಣ ಸಂಗ್ರಹಿಸುವ ವ್ಯವಸ್ಥೆಯ ಅಧ್ಯಯನ

ಹಣ ಸಂಗ್ರಹಿಸುವ ವ್ಯವಸ್ಥೆ	ಸಂಖ್ಯೆ	ಶೇಕಡಾ(%)
ಇದೆ	೬೯	೮೬
ಇಲ್ಲ	೧೧	೧೪
ಒಟ್ಟು	೮೦	೧೦೦

ಕೋಷ್ಟಕ ೩.೨.೩೫

ಸರ್ಕಾರೇತರ ಸಂಸ್ಥೆಗಳು ಸಂಗ್ರಹಿಸಿದ ಹಣದ ವಿನಿಯೋಗದ ವಿವರ

ವಿನಿಯೋಗ ಮಾಡಿದ ಕ್ಷೇತ್ರ	ಸಂಖ್ಯೆ	ಶೇಕಡಾ(%)
ಸರ್ಕಾರೇತರ ಸಂಸ್ಥೆಯ ಠೇವಣಿಯಲ್ಲಿ ತೊಡಗಿಸುವಿಕೆ	೧೮	೨೬
ಸದಸ್ಯರಿಗೆ ಸಾಲವಾಗಿ ನೀಡುವುದು	೩೫	೫೧
ಸಾರ್ವಜನಿಕ ಸೇವೆಗೆ ವಿನಿಯೋಗ	೦	೦
ಈ ಮೇಲಿನ ಎಲ್ಲವೂ	೧೬	೨೩
ಒಟ್ಟು	೬೯	೧೦೦

ಕೋಷ್ಟಕ ೩.೨.೩೬

ಸರ್ಕಾರೇತರ ಸಂಸ್ಥೆಗಳ ಸೇವಾವಧಿ (ವರ್ಷಗಳು)

ವರ್ಷ	ಸಂಖ್ಯೆ	ಶೇಕಡಾ(%)
೧ – ೩	೧೯	೨೪
೪ – ೬	೨೪	೩೦
೭ – ೯	೧೭	೨೧
೯ ಕ್ಕಿಂತ ಮೇಲ್ಪಟ್ಟು	೨೦	೨೫
ಒಟ್ಟು	೮೦	೧೦೦

ಕೋಷ್ಟಕ ೩.೨.೩೭

೫ ವರ್ಷಗಳಿಂದ ಸರ್ಕಾರೇತರ ಸಂಸ್ಥೆಯಿಂದ ಉಂಟಾಗಿರುವ ಆರ್ಥಿಕ ಪ್ರಯೋಜನಗಳ ಅಧ್ಯಯನ

ತೊಡಗಿಸಿಕೊಂಡ ಯೋಜನೆ	**ಸಂಖ್ಯೆ**	**ಶೇಕಡಾ(%)**
ಹಳೆಸಾಲ ಮರುಪಾವತಿ	೨೨	೨೮
ಗೃಹನಿರ್ಮಾಣ ಅಥವಾ ದುರಸ್ತಿ	೧೪	೧೮
ಹೆಚ್ಚುವರಿ ಉದ್ಯೋಗ ಅವಕಾಶ	೬	೭
ಸಾಂಸ್ಕೃತಿಕ ಮತ್ತು ಕೃಷಿಯ ಅಭಿವೃದ್ಧಿ	೨೫	೩೧
ಈ ಮೇಲಿನ ಎಲ್ಲವೂ	೧೩	೧೬
ಒಟ್ಟು	**೮೦**	**೧೦೦**

ಕೋಷ್ಟಕ ೩.೨.೩೮

ಫಲಾನುಭವಿಗಳ ಮಕ್ಕಳ ಶಿಕ್ಷಣಕ್ಕೆ ಸರ್ಕಾರೇತರ ಸಂಸ್ಥೆಯಿಂದ ಲಭಿಸಿದ ಸಹಾಯದ ಅಧ್ಯಯನ

ಶಿಕ್ಷಣಕ್ಕೆ ಸಹಾಯ	**ಸಂಖ್ಯೆ**	**ಶೇಕಡಾ(%)**
ಲಭಿಸಿದೆ	೩೧	೩೯
ಇಲ್ಲ	೪೯	೬೧
ಒಟ್ಟು	**೮೦**	**೧೦೦**

ಕೋಷ್ಟಕ ೩.೨.೩೯

ಫಲಾನುಭವಿಗಳ ಮಕ್ಕಳ ಶಿಕ್ಷಣಕ್ಕೆ ಲಭಿಸಿದ ಸಹಾಯದ ವಿವಿಧ ರೂಪಗಳ ವಿಶ್ಲೇಷಣೆ

ಶಿಕ್ಷಣ ಸಹಾಯದ ಸ್ವರೂಪ	ಸಂಖ್ಯೆ	ಶೇಕಡಾ(%)
ಉಚಿತ ಶಿಕ್ಷಣ	೨	೬
ಉಚಿತ ಪುಸ್ತಕ ಮತ್ತು ಸಮವಸ್ತ್ರ	೫	೧೬
ಉಚಿತ ಸಾರಿಗೆ ವ್ಯವಸ್ಥೆ	೧	೩
ಈ ಮೇಲಿನ ಎಲ್ಲಾವೂ	೨೩	೭೫
ಒಟ್ಟು	೩೧	೧೦೦

ಕೋಷ್ಟಕ ೩.೨.೪೦

ಮಹಿಳಾ ಸದಸ್ಯರ ವಿವರಗಳು

ಮಹಿಳಾ ಸದಸ್ಯರು	ಸಂಖ್ಯೆ	ಶೇಕಡಾ (%)
ಇದ್ದಾರೆ	೭೦	೮೮
ಇಲ್ಲ	೧೦	೧೨
ಒಟ್ಟು	೮೦	೧೦೦

ಕೋಷ್ಟಕ ೩.೨.೪೧

ಮಹಿಳಾ ಸದಸ್ಯರಿಗೆ ಲಭ್ಯವಾದ ಸವಲತ್ತುಗಳು

ಸವಲತ್ತುಗಳು	ಸಂಖ್ಯೆ	ಶೇಕಡಾ
ಸಾಲ ಸೌಲಭ್ಯ	೧೪	೨೦
ಸ್ವ-ಉದ್ಯೋಗ ತರಬೇತಿ	೨೫	೩೬
ಉಳಿತಾಯ ಸೌಲಭ್ಯ	೬	೯
ಮಾಹಿತಿ ಕಾರ್ಯಗಾರ	೪	೫
ಈ ಮೇಲಿನ ಎಲ್ಲಾವೂ	೨೧	೩೦
ಒಟ್ಟು	೭೦	೧೦೦

ಕೋಷ್ಟಕ ೩.೨.೪೨

ಸರ್ಕಾರೇತರ ಸಂಸ್ಥೆಯ ಮೂಲಕ ಲಭ್ಯವಿರುವ ಸಾಲದ ಮೊತ್ತ

ಸಾಲದ ಮೊತ್ತ	ಸಂಖ್ಯೆ	ಶೇಕಡಾ(%)
೧೦,೦೦೦ ಕ್ಕಿಂತ ಕಡಿಮೆ	೧೨	೧೭
೧೦,೦೦೦ ದಿಂದ ೨೫,೦೦೦ವರೆಗೆ	೧೨	೧೭
೨೫,೦೦೧ ದಿಂದ ೫೦,೦೦೦ ವರೆಗೆ	೧೭	೨೪
೫೦೦೦೧ ದಿಂದ ೧,೦೦,೦೦೦ವರೆಗೆ	೧೫	೨೨
೧,೦೦,೦೦೦ ದಿಂದ ಮೇಲ್ಪಟ್ಟು	೧೪	೨೦
ಒಟ್ಟು	**೭೦**	**೧೦೦**

ಕೋಷ್ಟಕ ೩.೨.೪೩

ಸರ್ಕಾರೇತರ ಸಂಸ್ಥೆಗಳನ್ನು ಆರ್ಥಿಕ ಸವಲತ್ತುಗಳಿಗೆ ಆಯ್ಕೆ ಮಾಡಲು ಕಾರಣ

ಸವಲತ್ತು ಪಡೆಯಲು ಕಾರಣವಾದ ಅಂಶಗಳು	ಸಂಖ್ಯೆ	ಶೇಕಡಾ
ಅಲ್ಪ ಕಾಲದಲ್ಲಿ ಸಾಲ ನೀಡಿಕೆ	೮	೧೧
ಕಡಿಮೆ ದಾಖಲೆ ಪತ್ರ	೯	೧೩
ಕಡಿಮೆ ಬಡ್ಡಿ ದರ	೫	೭
ಸ್ಥಳೀಯ ಪಟ್ಟದಲ್ಲಿ ಸ್ಥಾಪನೆ	೫	೭
ಎಲ್ಲಾ ಅಂಶಗಳು	೪೩	೬೨
ಒಟ್ಟು	**೭೦**	**೧೦೦**

ಕೋಷ್ಟಕ ೩.೨.೪೪

ಫಲಾನುಭವಿಗಳ ಕೃಷಿಗೆ ಸಂಬಂಧಿಸಿ ವಿವರ

ಕೃಷಿಯಲ್ಲಿ ತೊಡಗಿಸುವಿಕೆ	ಸಂಖ್ಯೆ	ಶೇಕಡಾ
ಹೌದು	೨೫	೩೧
ಇಲ್ಲ	೫೫	೬೯
ಒಟ್ಟು	೮೦	೧೦೦

ಕೋಷ್ಟಕ ೩.೨.೪೫

ಕೃಷಿಯಲ್ಲಿ ಆಧುನಿಕ ತಾಂತ್ರಿಕತೆಯ ಉಪಯೋಗದ ಬಗ್ಗೆ ವಿಶ್ಲೇಷಣೆ

ತಾಂತ್ರಿಕತೆಯ ಬಗ್ಗೆ ಮಾಹಿತಿ	ಸಂಖ್ಯೆ	ಶೇಕಡಾ(%)
ನೀಡುತ್ತಾರೆ	೫೨	೬೫
ಇಲ್ಲ	೨೮	೩೫
ಒಟ್ಟು	೮೦	೧೦೦

ಅಧ್ಯಾಯ ೪

ಸಾರಾಂಶ ಸಲಹೆ, ಸೂಚನೆಗಳು ಮತ್ತು ಉಪಸಂಹಾರ

೪.೧. ಸಾರಂಶ

ಗ್ರಾಮೀಣ ಪ್ರದೇಶ ಭಾರತದ ಜೀವನಾಡಿ ಆದರೆ ಗ್ರಾಮೀಣ ಭಾರತದ ಅಭಿವೃದ್ಧಿ ಒಂದು ಸವಾಲೇ ಸರಿ. ಕೃಷಿಯ ಬೆಳವಣಿಗೆ, ನೀರಾವರಿ, ಸಾರಿಗೆ – ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ವಸತಿ, ಉದ್ಯೋಗ, ತರಬೇತಿ, ಸಾಮಾಜಿಕ ಯೋಗ ಕ್ಷೇಮ ಇವೇ ಮೊದಲಾದ ಗ್ರಾಮೀಣಾಭಿವೃದ್ಧಿಯ ಸೂಚಕಗಳಾಗಿದ್ದು ಇವುಗಳು ಎಷ್ಟರ ಮಟ್ಟಿಗೆ ಗ್ರಾಮಗಳಲ್ಲಿ ನೆರವೇರುತ್ತಾದೆ ಎಂಬುದು ಪ್ರಾಮುಖ್ಯತೆಯನ್ನು ಪಡೆದಿದೆ. ಸರಕಾರ ಮತ್ತು ಸ್ಥಳೀಯಾಡಳಿತ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಬಡಜನರ ಜೀವನ ಮಟ್ಟ ಸುಧಾರಣೆ, ಕೃಷಿ ಅಭಿವೃದ್ಧಿ ಮತ್ತು ರಾಜಕೀಯ ವ್ಯವಸ್ಥೆಯ ಬದಲಾವಣೆ ಪ್ರಾಮಾಣಿಕ ಮತ್ತು ಸಾಮಾಜಿಕ ಮುಂದಾಳತ್ವದ ಬೆಳವಣಿಗೆ, ಉದ್ಯೋಗಾವಕಾಶಗಳ ಸೃಷ್ಠಿ, ಸಣ್ಣ ಮತ್ತು ಗುಡಿಕೈಗಾರಿಕೆಗಳ ಅಭಿವೃದ್ಧಿ ಹಾಗೂ ಗ್ರಾಮೀಣ ಪ್ರದೇಶದ ಒಟ್ಟಾರೆ ಸುಧಾರಣೆಯನ್ನು ಮಾಡಲು ಪ್ರಯತ್ನಿಸುತ್ತಿದೆ.

ಕೇರಳದ ಕಾಸರಗೋಡು ಜಿಲ್ಲೆಯ ಗಡಿನಾಡಿನ ತಾಲೂಕದ ಮಂಜೇಶ್ವರದಲ್ಲಿ ಹಿಂದುಳಿದ ಐದು ಗ್ರಾಮ ಪಂಚಾಯತುಗಳಲ್ಲಿ ಆಯ್ದ ಸರ್ಕಾರೇತರ ಸಂಸ್ಥೆಗಳ ೮೦ ಫಲಾನುಭವಿಗಳನ್ನು ಮತ್ತು ಸದಸ್ಯರನ್ನು ಬೇಟಿಯಾಗಿ ಪೂರ್ವನಿರ್ಮಿತ ಪ್ರಶ್ನಾವಳಿಯ ಮುಖಾಂತರ ದತ್ತಾಂಶಗಳನ್ನು ಸಂಗ್ರಹಿಸಿ ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಫಲಾನುಭವಿಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಮತ್ತು ಮಂಜೇಶ್ವರ ತಾಲೂಕಿನ ಆಯ್ದ ವಿವಿಧ ಸರ್ಕಾರೇತರ ಸಂಸ್ಥೆಗಳು ಗ್ರಾಮೀಣಾಭಿವೃದ್ಧಿಗೆ ನೀಡುವ ಕೊಡುಗೆಗಳ ಬಗ್ಗೆ ವಿವರಿಸಲಾಗಿದೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಪ್ರಥಮ ಮೂಲಗಳಿಂದ ಸಂಗ್ರಹಿಸಿದ ಮಾಹಿತಿ, ಪರಮಾರ್ಶನ ಗ್ರಂಥಗಳಿಂದ, ನಿಯತಕಾಲಿಕೆಗಳಿಂದ, ಪತ್ರಿಕೆಗಳಿಂದ ದೊರೆತ ಮಾಹಿತಿಯನ್ನು ಕ್ರೋಢಿಕರಿಸಿ **"ಗ್ರಾಮೀಣಾಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ"** ಎಂಬ ಶೀರ್ಷಿಕೆಯ ಅಧ್ಯಯನವನ್ನು ನಡೆಸಿ ಕೆಲವು ತೀರ್ಮಾನಗಳಿಗೆ ಬರಲಾಗಿದೆ.

೪.೨. ಅಧ್ಯಯನದ ಶೋಧ

ಫಲಾನುಭವಿಗಳ ಲಿಂಗಾನುಪಾತದ ಅಧ್ಯಯನದಲ್ಲಿ ೭:೧ ನಿಷ್ಪತ್ತಿಯಲ್ಲಿ ಸ್ತ್ರೀ–ಪುರುಷರ ಪಾಲ್ಗೊಳ್ಳುವಿಕೆ ಗೋಚರವಾಗಿದ್ದು, ಈ ಬೆಳವಣಿಗೆಯು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ವಿಭಿನ್ನ ರೀತಿಯ ನಿರುದ್ಯೋಗದಿಂದಾಗಿ ಕಂಗೆಟ್ಟ ಮಹಿಳೆಯರಿಗೆ ಸರ್ಕಾರೇತರ ಸಂಸ್ಥೆಗಳ ಯೋಜನೆಗಳು ಹೆಚ್ಚು ಆಕರ್ಷಣೀಯವಾಗಿ ಕಂಡು ಬಂದಿದ್ದು ಗಾಂಧೀಜಿಯವರ ಕಾಯಕ ಅನ್ನ ಪರಿಕಲ್ಪನೆಗೆ ಪೂರಕವಾಗಿ ಕನಿಷ್ಠ ಸ್ವಾವಲಂಬನೆ ಬದುಕಿಗೆ ಸರ್ಕಾರೇತರ ಸಂಸ್ಥೆಗಳ ಕೊಡುಗೆ ಸಹಕಾರಿಯಾಗುವುದು ವ್ಯಕ್ತವಾಗುತ್ತದೆ.

ಸರ್ಕಾರೇತರ ಸಂಸ್ಥೆಗಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಎಲ್ಲಾ ಧರ್ಮದ ಜನರು ಫಲಾನುಭವಿಗಳಾಗಿರುತ್ತಾರೆ. ಅಭಿವೃದ್ಧಿಗಾಗಿ ಹಂಬಲಿಸುವ ಜನರಿಗೆ ಧಾರ್ಮಿಕ ಕಟ್ಟುಪಾಡು ಅಡ್ಡಿಯಾಗುವುದಿಲ್ಲ. ಸಕ್ರಿಯ ಪಾಲ್ಗೊಳ್ಳುವಿಕೆ ಸಾಮರಸ್ಯದ ಬದುಕಿಗೆ ನಾಂದಿ ಹಾಡುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಬಹು ಸಂಖ್ಯೆಯ ಹಿಂದು ಧರ್ಮದವರು ಅದರಲ್ಲೂ ಇತರ ಹಿಂದುಳಿದ ವರ್ಗದ ಜನರು ಅತೀ ಹೆಚ್ಚಿರುವುದರಿಂದ ಹೆಚ್ಚಿನ ಫಲಾನುಭವಿಗಳು ಹಿಂದುಧರ್ಮದಲ್ಲಿರುವ ಇತರ ಹಿಂದುಳಿದ ವರ್ಗದ

ಜನರಾಗಿದ್ದಾರೆ. ಅಲ್ಪಸಂಖ್ಯಾತ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಜನರ ಸಂಖ್ಯೆ ಕಡಿಮೆಯಾದುದರಿಂದ ಇವರು ಫಲಾನುಭವಿಗಳಾಗಿರುವುದು ಕಡಿಮೆ ಎಂದು ಕಂಡುಕೊಂಡಿದೆ.

ಸರ್ಕಾರೇತರ ಸಂಸ್ಥೆಗಳ ಫಲಾನುಭವಿಗಳಾದ ಹೆಚ್ಚಿನ ಜನರು ಕಡಿಮೆ ವಿದ್ಯಾರ್ಹತೆಯನ್ನು ಹೊಂದಿದ ಮಧ್ಯ ವಯಸ್ಕರಾಗಿದ್ದು ಉನ್ನತ ವಿದ್ಯಾರ್ಹತೆಯುಳ್ಳ ಯುವಕ ಯುವತಿಯರು ಆರ್ಥಿಕ ಸಂಪಾದನೆಯ ಅಗತ್ಯದ ತೀವ್ರತೆಯು ಮನದಟ್ಟಾಗದ ಹಾಗೂ ಸ್ವ-ಉದ್ಯೋಗದಲ್ಲಿ ತೊಡಗುವ ನಿರ್ಧಾರಕ್ಕೆ ಬಾರದೆ ಇರುವುದು ತಿಳಿದು ಬಂದಿದೆ.

ಬಹುತೇಕ ಮಾಹಿತಿದಾರರು ಅಕ್ಕಿ ಆಧಾರಿತ ಆಹಾರವನ್ನು ರೂಢಿ ಮಾಡಿಕೊಂಡಿದ್ದು ಅವರಲ್ಲಿ ಹೆಚ್ಚಿನವರು ಮಾಂಸಹಾರಿಗಳಾಗಿರುತ್ತಾರೆ. ಕರವಾಳಿ ಪ್ರದೇಶದಲ್ಲಿ ರೂಢಿಯಿಂದ ಪ್ರಚಲಿತವಾಗಿರುವ ಮಾಂಸಹಾರದ ಅಭಿರುಚಿಯನ್ನು ಈಡೇರಿಸಿಕೊಳ್ಳಲು ಮಾಹಿತಿದಾರರು ತಮ್ಮ ಆದಾಯದಲ್ಲಿ ಒಂದು ಪ್ರಧಾನ ಭಾಗವನ್ನು ವ್ಯಯಮಾಡುತ್ತಾರೆ.

ಸಣ್ಣ ಮತ್ತು ಅತೀ ಸಣ್ಣ ಭೂಹಿಡುವಳಿಯಲ್ಲಿ ವಾಸಿಸುವ ಜನರಿಗೆ ಸರ್ಕಾರಿ, ಅರೇ ಸರ್ಕಾರಿ ಅಥವಾ ಖಾಸಗಿ ಖಾಯಂ ಉದ್ಯೋಗ ಇಲ್ಲದಿರುವ ಸಂದರ್ಭದಲ್ಲಿ ಸ್ವಾವಲಂಬನೆಯ ಬದುಕಿಗೆ ಆಸಕ್ತಿ ಅಗತ್ಯವಾಗಿದ್ದು ಅಂತಹ ಸಂದರ್ಭದಲ್ಲಿ ಸರ್ಕಾರೇತರ ಸಂಸ್ಥೆಗಳನ್ನು ಅವಲಂಬಿಸಿರುವುದು ಕಂಡುಕೊಂಡ ಪ್ರಮುಖ ವಿಷಯವಾಗಿದೆ. ಫಲಾನುಭವಿಗಳೆನಿಸಿದವರ ಕುಟುಂಬದಲ್ಲಿ ಹೆಚ್ಚಿನ ಮನೆಯಲ್ಲಿ ಶೇಕಡಾ ೫೦ಕ್ಕಿಂತಲೂ ಕಡಿಮೆ ಜನರು ದುಡಿಯುವವರಾಗಿದ್ದು ಉಳಿದ ಶೇಕಡಾ ೫೦ ಜನರು ಅವರನ್ನು ಅವಲಂಬಿಸಿ ಜೀವಿಸುವವರಾಗಿದ್ದಾರೆ ಎಂದು ವ್ಯಕ್ತವಾಗಿದೆ.

ಅವಿಭಕ್ತ ಕುಟುಂಬಗಳು ಛಿದ್ರಗೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ ಅನೇಕ ಮಂದಿ ಸ್ವಂತ ಅಥವಾ ಪಿತ್ರಾರ್ಜಿತ ಭೂಮಿಗೆ ಒಡೆತನ ಇಲ್ಲದೆ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿರುತ್ತಾರೆ. ಇಂತಹ ವ್ಯಕ್ತಿಗಳು ಹಣಕಾಸು ಸಂಸ್ಥೆಯಿಂದ ಅಥವಾ ಸರಕಾರದ ವತಿಯಿಂದ ದೊರಕುವ ಸವಲತ್ತುಗಳಿಂದ ವಂಚಿತರಾಗಿದ್ದು ಈ ಸಂದರ್ಭದಲ್ಲಿ ಸರ್ಕಾರೇತರ ಸಂಘ-ಸಂಸ್ಥೆಗಳ ನೆರವು ಶ್ಲಾಘನೀಯ. ಅಭಿವೃದ್ಧಿಯ ಇಂಗಿತದೊಂದಿಗೆ ಹಲವಾರು ಸರ್ಕಾರೇತರ ಸಂಸ್ಥೆಗಳು ಅರ್ಹ ಫಲಾನುಭವಿಗಳ ಆರ್ಥಿಕ ಮತ್ತು ಆರ್ಥಿಕೇತರ ಅಗತ್ಯಗಳನ್ನು ಮನದಟ್ಟು ಮಾಡಿ ಸಹಾಯ ನೀಡಿರುವುದು ಕಂಡುಬಂದಿದೆ. ಮಾಹಿತಿದಾರರಲ್ಲಿ ಶೇ. ೯೦ಕ್ಕಿಂತಲೂ ಹೆಚ್ಚು ಮಂದಿ ಹಣಕಾಸು ಮತ್ತು ಉಳಿದವರು ಹಣಕಾಸೇತರ ಸೌಲಭ್ಯ ಪಡೆದು ಇನ್ನಷ್ಟು ಮಂದಿ ಅರ್ಹರಿಗೆ ಫಲಾನುಭವಿಯಾಗುವಂತೆ ಪ್ರೇರಣೆ ನೀಡಿರುವುದು ಕಂಡುಕೊಳ್ಳಲಾಗಿದೆ.

ಗ್ರಾಮೀಣ ಜನತೆ ಸರ್ಕಾರೇತರ ಸಂಸ್ಥೆಗಳ ಹಲವಾರು ವಿಶೇಷ ಯೋಜನೆಗಳಿಂದಾಗಿ ಆಕರ್ಷಿತರಾಗಿರುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಯುವಕರಿಗೆ ಸಹಾಯ, ಮಹಿಳಾ ಸದಸ್ಯರಿಗೆ ಸ್ವ ಉದ್ಯೋಗಕ್ಕಾಗಿ ವಿಶೇಷ ತರಬೇತಿ, ಕಡಿಮೆ ಬಡ್ಡಿಯಲ್ಲಿ ಅಲ್ಪಕಾಲದ ಸಾಲ, ಸುಲಭ ಕಂತುಗಳಲ್ಲಿ ಮರುಪಾವತಿ, ಉಳಿತಾಯ ಸಂಗ್ರಹ ಬ್ಯಾಂಕ್ ಖಾತೆಗಳ ನಿರ್ವಹಣಾ ತರಬೇತಿ, ಮರುಪಾವತಿಯ ಬಗ್ಗೆ ಸಮರ್ಪಕ ಮೇಲ್ವಿಚಾರಣೆ ಗೃಹ ನಿರ್ಮಾಣ, ಕೃಷಿ ಕಾರ್ಯಗಳಿಗೆ ಸಹಾಯ ಮೊದಲಾದವುಗಳನ್ನು ನೀಡಿರುವುದರಿಂದ ಅವುಗಳು ಜನಪ್ರಿಯಗೊಳ್ಳುತ್ತಿದೆ ಎಂಬುದು ತಿಳಿದು ಬಂದಿದೆ.

ಸರ್ಕಾರೇತರ ಸಂಸ್ಥೆಗಳ ಸಾಲದ ನಿಯಮಗಳು ಇತರ ವಾಣಿಜ್ಯ ಸಹಕಾರಿ, ಗ್ರಾಮೀಣ ಬ್ಯಾಂಕುಗಳ ನಿಯಮಗಳಿಗೆ ತುಲನೆ ಮಾಡಿದಾಗ ಸರ್ಕಾರೇತರ ಸಂಸ್ಥೆಗಳ ನಿಯಮಗಳು ಜನಸ್ನೇಹಿ ಎಂದು ಕಂಡುಕೊಳ್ಳಲಾಗಿದೆ. ಸರ್ಕಾರೇತರ ಸಂಸ್ಥೆಗಳ ಸಾಲ ಯೋಜನೆಯಲ್ಲಿ ಯಾವುದೇ ಬೆಲೆ ಬಾಳುವ ವಸ್ತು ಅಥವಾ ಸಂಪತ್ತನ್ನು ಅಥವಾ ದಾಖಲೆಪತ್ರಗಳು ಅಡವಿಡಲಿಕ್ಕಿರುವುದಿಲ್ಲವಾದುದರಿಂದ ಸದಸ್ಯರಿಗೆ ಈ ಸಾಲ ಯೋಜನೆಯ ಪ್ರಯೋಜನ ಸುಲಭವಾಗಿ ಪಡೆಯಬಹುದು.

ಸರ್ಕಾರೇತರ ಸಂಸ್ಥೆಯ ಸದಸ್ಯರಾಗಲು ಅಥವಾ ಫಲಾನುಭವಿಯಾಗಲು ಯಾವುದೇ ರಾಜಕೀಯ ಪಕ್ಷದ ಹಸ್ತಕ್ಷೇಪ ಇಲ್ಲದಿರುವುದು, ಅದುಮಾತ್ರವಲ್ಲದೆ ಫಲಾನುಭವಿಯಾಗಲು ಸರ್ಕಾರೇತರ ಸಂಸ್ಥೆಯ ಕಾರ್ಯಕರ್ತೆ ಅಥವಾ ಸಂಸ್ಥೆಯ ಕಾರ್ಯಕಾರಿ ಸದಸ್ಯರ ಹಸ್ತಕ್ಷೇಪವಿರುವುದಿಲ್ಲ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

೪.೩. ಸಲಹೆಗಳು ಮತ್ತು ಸೂಚನೆಗಳು

ಸರ್ಕಾರೇತರ ಸಂಘ ಸಂಸ್ಥೆಗಳು ತಮ್ಮ ಚೌಕಟ್ಟಿನೊಳಗೆ ಆರ್ಥಿಕ ಹಾಗೂ ಆರ್ಥಿಕೇತರ ಸಹಾಯಗಳನ್ನು ಒದಗಿಸುತ್ತಿದ್ದು ಅವುಗಳ ಪ್ರಯೋಜನವನ್ನು ಪಡೆದಿರುವ ಜನತೆ ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳಲ್ಲಿ ಪ್ರಗತಿ ಹೊಂದಿದ್ದರೂ ಈ ವಿಚಾರದಲ್ಲಿ ಸಂಪೂರ್ಣ ಇನ್ನಷ್ಟು ಪ್ರಯತ್ನಗಳು ಆಗಬೇಕಾಗಿರುತ್ತದೆ. ಸರಕಾರೇತರ ಸಂಸ್ಥೆಗಳು ತಮ್ಮದೇ ಆದ ಮಿತಿಯೊಳಗಿದ್ದರೂ, ಪ್ರಸ್ತುತ ಅಧ್ಯಯನದಲ್ಲಿ ಕಂಡು ಬಂದ ಮಾಹಿತಿ ಹಾಗೂ ಅಂಕಿ ಅಂಶಗಳ ಪ್ರಕಾರ ಕೆಲವೊಂದು ಸಲಹೆ ಮತ್ತು ಸೂಚನೆಗಳನ್ನು ಈ ನಿಬಂಧದಲ್ಲಿ ಒಳಪಡಿಸಲಾಗಿದೆ. ಹಾಗೂ ಇವುಗಳು ಇನ್ನಷ್ಟು ಕ್ಷಿಪ್ರಗತಿಯ ಅಭಿವೃದ್ಧಿಯನ್ನು ರೂಪಿಸಲು ಸಹಾಯಕವಾಗಬಹುದೆನ್ನುವ ಆಶಯದೊಂದಿಗೆ ಈ ಭಾಗವನ್ನು ಸೇರ್ಪಡೆಗೊಳಿಸಲಾಗಿದೆ.

- ಪ್ರಸ್ತುತ ಅಧ್ಯಯನದಲ್ಲಿ ಸರ್ಕಾರೇತರ ಕಾರ್ಯಯೋಜನೆಗಳಲ್ಲಿ ಯುವಜನತೆಯ ಪಾಲ್ಗೊಳ್ಳುವಿಕೆ ತೀರಾ ಕಡಿಮೆಯಾಗಿರುವುದು ಅಧ್ಯಯನದಿಂದ ವ್ಯಕ್ತವಾಗಿದ್ದು ಈ ನಿಟ್ಟಿನಲ್ಲಿ ಹೆಚ್ಚಿನ ಒಲವು ತೋರುವಂತೆ ಶಿಕ್ಷಣ ಮತ್ತು ತರಬೇತಿಯನ್ನು ನೀಡಬೇಕಾಗಿರುವ ಅನಿವಾರ್ಯತೆ ಗೋಚರವಾಗುತ್ತಿದೆ. ಯುವ ಉದ್ದಿಮೆಗಾರರು ರೂಪುಗೊಂಡರೆ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಠಿಯಾಗಿ ಗ್ರಾಮೀಣ ಪ್ರದೇಶದ ಬಳಕೆಯಾಗದ ಸಂಪನ್ಮೂಲಗಳಿಗೆ ಮುಕ್ತಿ ಕಾಣಿಸಲು ಸಾಧ್ಯವಾಗಬಹುದು ಎಂದೆನಿಸುತ್ತದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಲ್ಲಿ ವ್ಯವಹಾರ ನಿರ್ವಹಣೆಯ ಬಗ್ಗೆ ಒಲವು ಮಾಡುವ ಅಗತ್ಯವಿದೆ.
- ಪ್ರಸ್ತುತ ವ್ಯವಸ್ಥೆಯಲ್ಲಿ ಸರ್ಕಾರೇತರ ಸಂಸ್ಥೆಗಳು ತಮ್ಮ ಲಭ್ಯ ಸಂಪನ್ಮೂಲವನ್ನು ಅಲ್ಪ ಕಾಲದ ಯೋಜನೆಗಳ ಅನುಷ್ಠಾನಕ್ಕೆ ವಿನಿಯೋಗಿಸುತ್ತಿರುವುದು ಅಧ್ಯಯನದಿಂದ ವ್ಯಕ್ತವಾಗಿರುತ್ತದೆ. ಅಲ್ಪಾವಧಿಯ ಯೋಜನೆಗಳನ್ನು ಹೂಡಿಕೆ ಮಾಡುವುದು ಹಾಗೂ ಕಾಲಕಾಲಕ್ಕೆ ಪಡೆದ ಆರ್ಥಿಕ ಸಹಾಯವನ್ನು ಮರುಪಾವತಿ ಮಾಡುವುದು ಸಂಪ್ರದಾಯವಾಗಿದ್ದು, ಇವುಗಳು ಕೇವಲ ಕೆಲವು ಅಲ್ಪಕಾಲಿಕ ಪ್ರತಿಫಲ ನೀಡಬಲ್ಲ ಘಟಕಗಳಿಗೆ ಮಾತ್ರ ಫಲಪ್ರದಲಾಗಬಲ್ಲುದು. ಆದರೆ ದೀರ್ಘಕಾಲಿಕ ಪ್ರತಿಫಲ ನೀಡಬಲ್ಲ ಯೋಜನೆಗಳಲ್ಲೂ ತೊಡಗಿಸಬಹುದಾದ ವಿಷಯಗಳಿಗೆ ಸಂಬಂಧಪಟ್ಟ ದೀರ್ಘಕಾಲಿಕ ಆರ್ಥಿಕ ಸೌಲಭ್ಯವನ್ನು ನೀಡುವುದು ಮತ್ತು ಸಾಲದ ಮೊತ್ತದಲ್ಲಿ ಹೆಚ್ಚಳವನ್ನು ಮಾಡುವುದು ಈ ಯೋಜನೆಗಳ ಅಗತ್ಯ ಎಂಬ ಅಂಶ ಈ ಅಧ್ಯಯನದಿಂದ ವ್ಯಕ್ತವಾಗಿರುತ್ತದೆ.

- ಉದ್ದಿಮೆಶೀಲತೆಯ ಯಶಸ್ಸಿಯ ಹಿಂದೆ ಹಣಕಾಸಿನ ಪ್ರಭಾವವೊಂದೇ ಇರುವುದಲ್ಲ. ಯೋಜನೆಯ ಫಲಾನುಭವಿಗೆ ತನ್ನ ಉದ್ಯಮಶೀಲತೆಯಿಂದ ಸೃಷ್ಟಿಗೊಳಿಸಿದ ಉತ್ಪನ್ನದ ಮಾರಟ, ಸಂಸ್ಕರಣೆ, ಸಾಗಟ, ದಾಸ್ತನು, ವಿಮೆಗೆ ಸಂಬಂದ ಪಟ್ಟ ಮಾಹಿತಿ ಹಾಗೂ ಸಲಹೆಗಳನ್ನು ನೀಡುವುದರೊಂದಿಗೆ ಇಂತಹ ಘಟಕಗಳ ಮೇಲ್ನೋಟ ಹಾಗೂ ಮೇಲ್ವಿಚಾರಿಕೆಯ ಮೇಲೆ ನಿಗಾ ಇಡುವ ಅಗತ್ಯವಿದೆಯೆಂಬ ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ. ಒಂದು ವೇಳೆ ಉದ್ಯಮಿಗಳ ಮುನ್ನಂದಾಜು ಲೆಕ್ಕಚಾರ ಸಮರ್ಪಕವಾಗದೇ ಹೋದಲ್ಲಿ ತಕ್ಷಣ ಉಂಟಾಗುವ ಅಸ್ತಿರತೆಯನ್ನು ಹೋಗಲಾಡಿಸುವ ಸಲುವಾಗಿ ಸರ್ಕಾರೇತರ ಸಂಸ್ಥೆಗಳು ಹೆಚ್ಚಿನ ಕಾಳಜಿವಹಿಸಿಕೊಳ್ಳುವ ಅನಿವಾರ್ಯತೆಯಿರುವುದು ಕಂಡುಬರುತ್ತದೆ.

- ಸರ್ಕಾರೇತರ ಸಂಘ ಸಂಸ್ಥೆಗಳು ನೀಡಲಾಗುತ್ತಿರುವ ಆರ್ಥಿಕ ಹಾಗೂ ಆರ್ಥಿಕೇತರ ಸಹಾಯದ ಬಗೆಗಿನ ಸಂಪೂರ್ಣ ಮಾಹಿತಿ ಗ್ರಾಮೀಣ ಪ್ರದೇಶದ ಎಲ್ಲರಿಗೂ ಇನ್ನೂ ದೊರೆತಿರುವುದಿಲ್ಲ. ಸರ್ಕಾರೇತರ ಯೋಜನೆಗಳ ವಿವಿಧ ಕಾರ್ಯಯೋಜನೆಗಳು ಅವುಗಳಲ್ಲಿ ಫಲಾನುಭವಿಗಳಾಗಲು ಇರುವ ಅರ್ಹತೆ, ಕಾರ್ಯಕ್ರಮಗಳ ಸ್ವರೂಪ, ಕಾರ್ಯಯೋಜನೆಯ ಅವಧಿ, ಆರ್ಥಿಕೇತರ ಸಹಾಯಗಳ ವಿವರಗಳನ್ನು ಕ್ರಮಬದ್ದವಾಗಿ ಎಲ್ಲರಿಗೂ ತಿಳಿಸುವುದರಿಂದ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಹಾಗೂ ಪಡೆಯಲು ಸುಲಭ ಸಾಧ್ಯವಾಗಬಹುದು. ಈ ಕಾರ್ಯವನ್ನು ಗ್ರಾಮೀಣ ಪ್ರದೇಶದಲ್ಲಿ ಸಮೂಹ ಮಾಧ್ಯಮಗಳು, ಸರ್ಕಾರೇತರ ಸಂಸ್ಥೆಗಳು ಒದಗಿಸಿಕೊಡಬೇಕಾದ ಅನಿವಾರ್ಯತೆ ಕಾಣಿಸಿಕೊಳ್ಳುತ್ತದೆ. ಯೋಜನೆಗಳ ಅರಿವು ಇದ್ದಾಗ ಮಾತ್ರ ಅದರಲ್ಲಿ ಪಾಲ್ಗೊಳ್ಳಲು ಹಾಗೂ ಯಶಸ್ಸನ್ನು ಕಾಣಲು ಸಾಧ್ಯವಾಗುತ್ತದೆ.

- ಸರ್ಕಾರೇತರ ಸಂಸ್ಥೆಗಳ ವಿಚಾರವಾಗಿ ಗ್ರಾಮೀಣ ಪ್ರದೇಶದ ಆರ್ಥಿಕ ಹಾಗೂ ಆರ್ಥಿಕೇತರ ವಿಚಾರವಾಗಿ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಮಾಡಲಾದ ಅಧ್ಯಯನದಲ್ಲಿ ಪುರುಷರ ಪಾಲ್ಗೊಳ್ಳುವಿಕೆ ನಿರಾಶಾದಾಯಕವಾಗಿರುವುದು ಅತ್ಯಂತ ಕಳವಳಕಾರಿಯಾಗಿರುವ ಸಂಗತಿಯಾಗಿದೆ. ನಿರುದ್ಯೋಗಿ ಪುರುಷರು ಗ್ರಾಮೀಣ ಮಟ್ಟದಲ್ಲಿ ಸ್ವಂತ ಉದ್ಯಮಶೀಲತೆಯಲ್ಲಿ ತೊಡಗಿ ಅದರಲ್ಲಿ ತನ್ನ ಮನೆಮಂದಿಯನ್ನು ಮತ್ತು ನೆರೆಮನೆಗಳ ಸದಸ್ಯರನ್ನು ಒಳಗೊಳ್ಳುವಂತೆ ಮಾಡಿದಾಗ ಯೋಚನೆ ಹೆಚ್ಚು ಯಶಸ್ವಿನತ್ತ ಸಾಗಬಹುದು ಎಂಬ ಅಭಿಪ್ರಾಯ ಎಲ್ಲರಿಗೂ ಸಮ್ಮತವಾಗಬಹುದು ಯಾಕೆಂದರೆ ಪುರುಷ ಫಲಾನುಭವಿಗಳಿಗಿರಬಹುದಾದ ಚಲನಶೀಲತೆ ಹಾಗೂ ಮಾರುಕಟ್ಟೆ ನಿರ್ವಹಣೆಯ ಪ್ರಯೋಜದ ಬಳಕೆಯನ್ನು ಸಂಪೂರ್ಣ ಈ ಯೋಜನೆಗಳಲ್ಲಿ ತೊಡಗಿಸಲು ಸಾಧ್ಯವಾಗುತ್ತದೆ. ಮಹಿಳೆಯರಿಗೆ ಸಂಬಂಧಿಸಿ ಹೇಳುವುದಾದರೆ ಚಲನಾ ಸ್ವಾತಂತ್ರ್ಯದಲ್ಲಿರುವ ಮಿತಿ ಹಾಗೂ ಮರುಕಟ್ಟೆಯ ಮಿತಿಯಿರುವುದು ಅಧ್ಯಯನದಿಂದ ವ್ಯಕ್ತವಾಗುತ್ತದೆ.

- ಸಕಲ ಸಂಪನ್ಮೂಲಗಳ ಆಗರವೆನಿಸಿರುವ ಸಮೃದ್ಧ ವಿಶಾಲ ಭಾರತದಲ್ಲಿ ಬಡತನವು ತನ್ನ ಶಾಶ್ವತ ನೆಲೆ ಮಾಡಿಕೊಂಡಿರುವುದು ಒಂದು ವಿಪರ್ಯಾಸದ ವಿಷಯ. ಭಾರತೀಯರಿಗೆ ಬೇಕಾಗಿರುವುದು ಕೇವಲ ಆರ್ಥಿಕ ಬೆಳವಣಿಗೆಯೊಂದೇ ಅಲ್ಲ. ಅದರ ಬದಲಾಗಿ ಸಹಬಾಳ್ವೆಯ ಸಾಮರಸ್ಯದ ಸಹಕಾರಿ ಮನೋಭಾವನೆಯ ಪರಸ್ಪರ ಅರಿತು ಬಾಳುವ ಬದುಕು. ಈ ಹಿನ್ನೆಲೆಯಲ್ಲಿ ಸರ್ಕಾರೇತರ ಸಂಸ್ಥೆಗಳು ನೀಡುತ್ತಿರುವ ಸಹಾಯ ಉಲ್ಲೇಖನೀಯ. ಇದರ ಪ್ರಭಾವವನ್ನು ಇನ್ನಷ್ಟು ತೀವ್ರಗೊಳಿಸುವ ಸಲುವಾಗಿ ವಿವಿಧ ತರಬೇತಿ ಹಾಗೂ ವಿಚಾರ ಸಂಕಿರಣದ ಮೂಲಕ ಆರ್ಥಿಕೇತರ ಅಂಶಗಳನ್ನು

ಮನದಟ್ಟು ಮಾಡಿಸುವ ಅಗತ್ಯವಿದೆ. ವ್ಯಕ್ತಿಗಳ ಸಾಮಾಜಿಕ ಬದುಕಿಗೆ, ಸಾಂಸ್ಕೃತಿಕ ಸೊಬಗಿಗೆ ಅಡ್ಡಿಯಾಗುವ ಅಂಶಗಳನ್ನು ಪ್ರತಿಯೊಬ್ಬರಿಗೂ ತಿಳಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಅಗತ್ಯವಿದೆ. ಪ್ರಚಲಿತ ವಿದ್ಯಮಾನದಲ್ಲಿ ಬಹುತೇಕ ಸಮಸ್ಯೆಯ ಸೃಷ್ಟಿಗೆ ಕಾರಣವಾಗಿರುವುದು ಅಗತ್ಯಕ್ಕಿಂತ ಹೆಚ್ಚಾಗಿರುವ ಮಾನವ ಜನಾಂಗದ ಸದಸ್ಯರ ಸಂಖ್ಯೆಯಲ್ಲಿ ಉಂಟಾಗಿರುವ ಹೆಚ್ಚಳವಾಗಿದೆ. ಆದರ್ಶ ಕುಟುಂಬವೊಂದರಲ್ಲಿ ಇರಬೇಕಾದ ಮಕ್ಕಳ ಸಂಖ್ಯೆಯ ಬಗ್ಗೆ, ಕುಟುಂಬ ಯೋಜನೆಯ ಬಗೆಗೆ ಮಾಹಿತಿ ನೀಡುವುದು ಭಾರತದ ಭವಿಷ್ಯದ ಬಗ್ಗೆ ಚಿಂತಿಸುಸುವುದಾದರೆ ಬಹಳ ಅಗತ್ಯವಾಗಿರುತ್ತದೆ.

- ಸರ್ಕಾರೇತರ ಸಂಸ್ಥೆಗಳು ರೂಪಿಸಿಕೊಟ್ಟಿರುವ ಯೋಜನೆಗಳಲ್ಲಿ ಕೆಲವೊಂದು ಸಂದರ್ಭದಲ್ಲಿ ಹಲವಾರು ಕಾರಣಗಳಿಂದಾಗಿ ವೈಫಲ್ಯ ಕಂಡು ಬರಲೂಬಹುದು. ಈ ವೈಫಲ್ಯಗಳನ್ನು ಎದುರಿಸುವ ಶಕ್ತಿ ಎಲ್ಲ ವ್ಯಕ್ತಿಗಳಲ್ಲಿ ಸಮಾನವಾಗಿ ಇರಬೇಕಾಗಿಲ್ಲ. ಆದುದರಿಂದ ಮುನ್ನೆಚ್ಚರಿಕೆಯಂತೆ ರಕ್ಷಣಾ ವಿಮೆಯೊಂದನ್ನು ನೀಡುವುದು ಅಗತ್ಯವೆಂದೆನಿಸುತ್ತದೆ. ವಿಮಾ ಸೌಲಭ್ಯವನ್ನು ಸ್ಥಳೀಯ ಸರ್ಕಾರ ಅಥವಾ ಸರ್ಕಾರೇತರ ಸಂಸ್ಥೆಗಳು ನೀಡುವಂತೆ ಹಾಗೂ ವಿಮಾ ಕಂತಿನ ಮೊತ್ತವನ್ನು ಕಾಲಕಾಲಕ್ಕೆ ಸಂಗ್ರಹಿಸುವ ವ್ಯವಸ್ಥೆ ರೂಪಿಸಿಕೊಳ್ಳುವುದು ಮತ್ತು ವಿಮಾ ಯೋಜನೆಯ ಅಗತ್ಯ ಒದಗಿ ಬಂದಿಲ್ಲವಾದಂತಹ ಸಂದರ್ಭದಲ್ಲಿ ಸಂಪೂರ್ಣ ವಿಮಾ ಮೊತ್ತವನ್ನು ಒಂದು ನಿರ್ದಿಷ್ಟ ಕಾಲದ ತರುವಾಯ ಸಂಬಂಧಿತ ಉದ್ಯಮೆ ಸಂಸ್ಥೆಗೆ ಹಿಂದಿರುಗಿಸಲು ವ್ಯವಸ್ಥೆ ಮಾಡಿಕೊಳ್ಳುವುದರಿಂದ ಶ್ರೇಯಸ್ಸು ಉಂಟಾಗಬಹುದು.

- ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಮಟ್ಟದಲ್ಲಿ ಉದ್ಯೋಗ ನೀಡಬಲ್ಲ ಕಾರ್ಯಕ್ರಮದೊಂದಿಗೆ ಪರಿಸರ ಸಂರಕ್ಷಣೆಯ ವಿಚಾರವಾಗಿ ಮಾಹಿತಿ ನೀಡಿಕೆ ಇಂದಿನ ಅಗತ್ಯವಾಗಿದೆ. ಈ ವಿಚಾರದಲ್ಲಿ ಮಿತವಾದ ಸಂಪನ್ಮೂಲದ ಸದ್ಬಳಕೆ, ಘನ ತಾಜ್ಯ ವಿಲೇವಾರಿ, ಶುದ್ಧ ಜಲ ಬಳಕೆ ಮತ್ತು ಅಂತರ್ಜಲ ಮಟ್ಟ, ಆರೋಗ್ಯ, ಶಿಕ್ಷಣ, ಪ್ಲಾಸ್ಟಿಕ್ ಮುಕ್ತ ಸಮಾಜದ ಸೃಷ್ಠಿಗೆ ಯೋಚನೆ ಮತ್ತು ಯೋಜನೆ ಆಂತರಿಕ ಹಾಗೂ ಬಾಹ್ಯ ಸ್ವಚ್ಚತೆ ವಿಷಯಗಳಲ್ಲಿ ಸಂಪೂರ್ಣ ಜ್ಞಾನ ನೀಡಿಕೆಯ ಜವಬ್ಧಾರಿ ವಹಿಸಿಕೊಂಡಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸುಸ್ಥಿರ ಹಾಗೂ ಸಮತೋಲನಯುಕ್ತ ಅಭಿವೃದ್ಧಿಗೆ ಅವಕಾಶ ನೀಡಿದಂತಾಗುತ್ತದೆ ಮತ್ತು ಆದರಿಂದಾಗಿ ನಮ್ಮ ಕನಸ್ಸಿನ ಸುಂದರ ಭಾರತ ನಿರ್ಮಾಣವಾಗುತ್ತದೆ.

- ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಅವುಗಳ ಉದ್ದೇಶ ಕಾರ್ಯಕ್ಷೇತ್ರ, ಯಶಸ್ಸಿನ ಆಧಾರದಲ್ಲಿ ಅನುದಾನವನ್ನು ಗ್ರಾಮೀಣಾಭಿವೃದ್ಧಿಗಾಗಿ ನೀಡುವುದರಿಂದ ಅವುಗಳಿಗೆ ಹೆಚ್ಚಿನ ಸ್ಥಿರತೆಯನ್ನು ಹೊಂದಲು ಸಾಧ್ಯವಾಗಬಹುದು. ಪ್ರಸ್ತುತ ಪ್ರಚಲಿತವಾಗಿರುವ ಇಂತಹ ಸರ್ಕಾರೇತರ ಸಂಸ್ಥೆಗಳಿಗೆ ಬಂಡವಾಳ ಕ್ರೋಢಿಕರಣದ ವಿಚಾರವಾಗಿ ಮಿತಿಯಿದ್ದುದರಿಂದ ಹಣಕಾಸಿನ ವಿಚಾರದಲ್ಲಿ ಉದಾರೀಕೃತ ಯೋಜನೆಗಳ ಅನುಷ್ಠಾನಕ್ಕೆ ತೊಂದರೆಯಿರುತ್ತದೆ. ಈ ಅಡಚಣೆಯ ನಿವಾರಣೆಗಾಗಿ ಯಶಸ್ವಿ ಸಂಘ ಸಂಸ್ಥೆಗಳನ್ನು ಯಶಸ್ಸಿನ ಆಧಾರದಲ್ಲಿ ಆಯ್ಕೆಗೊಳಿಸಿ ಅಂತಹ ಸಂಸ್ಥೆಗಳಿಗೆ ಸರಕಾರದ ವತಿಯಿಂದ ಅನುದಾನ ನೀಡಿದಲ್ಲಿ ಉತ್ತಮ.

೪.೪. ಉಪಸಂಹಾರ

ಬಹುತೇಕ ಭಾರತೀಯರು ಗ್ರಾಮೀಣ ಪ್ರದೇಶದಲ್ಲಿ ಬದುಕು ರೂಪಿಸಿಕೊಂಡವರು. ಗ್ರಾಮೀಣ ಜನರ ಬದುಕನ್ನು ಇನ್ನಷ್ಟು ಸುಖದಾಯಕವಾಗಿಸುವ ಪ್ರಯತ್ನ ಇಂದು ನಿನ್ನೆಯದಲ್ಲ, ಸ್ವಾತಂತ್ರ್ಯದ ತರುವಾಯ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳು ಈ ನಿಟ್ಟಿನಲ್ಲಿ ನಿರಂತರ ಪರಿಶ್ರಮ ನಡೆಸುತ್ತಲೇ ಇದ್ದರೂ ಅದರ ಪೂರ್ಣ ಸಾಕ್ಷಾತ್ಕಾರ ಇದುವರೆಗೆ ಆಗಿರುವುದಿಲ್ಲ.. ಮಹಾತ್ಮ ಗಾಂಧೀಯವರ ಗ್ರಾಮ ಸ್ವರಾಜ್ಯದ ಕಲ್ಪನೆಗೆ ಸರಕಾರ ವಲಯದ ಸಾಂಘೀಕ ಪ್ರಯತ್ನದೊಂದಿಗೆ ಅನೇಕ ಸರ್ಕಾರೇತರ ಸಂಘ–ಸಂಸ್ಥೆಗಳು ಕೈಜೋಡಿಸಿರುವುದು ಬಹಳ ಹೆಮ್ಮೆಯ ವಿಷಯ. ಸರಕಾರಿ ಸಂಸ್ಥೆಗಳಿಗಿಂತ ಮಿಗಿಲಾಗಿ ಸರ್ಕಾರೇತರ ಸಂಸ್ಥೆಗಳು ಮತ್ತು ಅದರ ಕಾರ್ಯಕರ್ತೆಯರು, ಸದಸ್ಯರು, ಗ್ರಾಮೀಣ ಅಭಿವೃದ್ಧಿ ಯೋಜನೆಗಳ ಕೊಡುಗೆಯನ್ನು ನೀಡುತ್ತಿದ್ದಾರೆ.

ನಿರುದ್ಯೋಗಿಗಳ, ಅನಕ್ಷರಸ್ಥರ, ಮಹಿಳೆಯರ ಸಮಸ್ಯೆಗಳ ನಿವಾರಣೆ, ಮೂಲಭೂತ ಸೌಕರ್ಯದ ಅಭಿವೃದ್ಧಿ, ಉಳಿತಾಯದ ಮನೋಭಾವನೆ, ಆರೋಗ್ಯ, ಶಿಕ್ಷಣ ಹೀಗೆ ಅನೇಕ ರಂಗಗಳಲ್ಲಿ ಗ್ರಾಮೀಣ ಪ್ರದೇಶವನ್ನು ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರೇತರ ಸಂಸ್ಥೆಗಳ ಪ್ರಯೋಜನವನ್ನು ಪಡೆಯಲು ಸೂಕ್ತ ಮಾಹಿತಿ ಮತ್ತು ಸಲಹೆಗಳನ್ನು ನೀಡಬೇಕು. ಗ್ರಾಮೀಣ ಸಮುದಾಯದ ಅಭಿವೃದ್ಧಿ ಕೇವಲ ಸರಕಾರ ಅಥವಾ ಸರಕಾರೇತರ ಸಂಸ್ಥೆಗಳ ಪ್ರಯತ್ನದಿಂದ ಮಾತ್ರ ಸಾಧ್ಯವಾಗದ ಸಂಗತಿ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಹಿಂದುಳಿದ ಜನರು ಅವರ ಆರ್ಥಿಕ ಸಾಮಾಜಿಕ, ಸಾಂಸ್ಕೃತಿಕ, ವೈಯುಕ್ತಿಕ ಪರಿಸ್ಥಿತಿಯನ್ನು ತಿಳಿದು ಮುಂದುವರಿಯಲು ಪ್ರಯತ್ನಿಸಲು ಸಫಲರಾಗಬೇಕು. ಕೆನರಾ ಅಭಿವೃದ್ಧಿ ಮತ್ತು ಶಾಂತಿ ಸಂಸ್ಥೆ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ನವೋದಯ ಸ್ವ–ಸಹಾಯ ಸಂಸ್ಥೆಯ ಯೋಜನೆಗಳು, ಕಲ್ಪವೃಕ್ಷ, ಅನಂತಶ್ರೀ ಜನರ ಸಹಾಯ ಗುಂಪುಗಳು ಗ್ರಾಮೀಣಾಭಿವೃದ್ಧಿಗೆ ಮಾದರಿಯಾಗಿದೆ. ಪ್ರತಿಯೊಬ್ಬ ಗ್ರಾಮೀಣ ಪ್ರಜೆಯು ಗ್ರಾಮೀಣಾಭಿವೃದ್ಧಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಭಾರತದ ಗ್ರಾಮೀಣ ಅಭಿವೃದ್ಧಿ ಕನಸು ನನಸಾಗಬಹುದು.

ಗ್ರಂಥ ಸೂಚಿ

೧. ಎಂ. ಚಂದ್ರ ಪೂಜಾರಿ, *ಸಂಶೋಧನ ಪ್ರಸ್ತಾವ*, ಹಂಪಿ : ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ೧೯೯೭

೨. ಎಂ. ಚಂದ್ರ ಪೂಜಾರಿ, *ಸಂಶೋಧನೆ ಏನು? ಏಕೆ? ಹೇಗೆ?* ಹಂಪಿ : ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ೨೦೦೯

೩. ಎಂ. ಚಂದ್ರ ಪೂಜಾರಿ, *ಸಮಾಜ: ಸಂಶೋಧನೆ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೫

೪. ಪ್ರೋ. ಒಡೆಯರ ಡಿ. ಹೆಗ್ಗಡೆ, *ಅರ್ಥಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರ ಪದಕೋಶ,* ಮೈಸೂರು : ಅರ್ಜುನ್ ಪಬ್ಲೀಕೇಶನ್ ಹೌಸ್, ೨೦೧೧

೫. ವಿ ಎಂ. ರಾವ್, *ಕರ್ನಾಟಕ ಆರ್ಥಿಕತೆ,* ವಿದ್ಯಾರಣ್ಯ ಹಂಪಿ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ೧೯೯೭

೬. ಎಚ್. ಆರ್. ಕೆ, *ಅಭಿವೃದ್ಧಿ ಅರ್ಥಶಾಸ್ತ್ರ,* ಬೆಂಗಳೂರು : ಸ್ವಪ್ನ ಬುಕ್ ಹೌಸ್, ೨೦೦೮

೭. ಬಿ. ಪ್ರಭಾಕರ ಶಿಶಿಲ, *ಸಂಶೋಧನೆಯ ವಿಧಾನಗಳು,* ಸುಳ್ಯ : ಪ್ರಗತಿ ಪ್ರಕಾಶನ, ೨೦೦೭

೮. ಬಿ. ಪ್ರಭಾಕರ ಶಿಶಿಲ, *ಅಭಿವೃದ್ಧಿಯ ಆಯಾಮಗಳು,* ಮಂಗಳೂರು : ಮಂಗಳ ಪ್ರಕಾಶನ, ೨೦೦೬

೯. ಉಪ್ಪಂಗಳ ರಾಮಭಟ್ಟ, *ಗಡಿನಾಡು ಕಾಸರಗೋಡು,* ಉಡುಪಿ : ಅಕಲಂಕ ಪ್ರಕಾಶನ ಮತ್ತು ಭಾರದ್ವಾಜ ಪ್ರಕಾಶನ, ೧೯೯೪

೧೦. ವೈ. ಎಸ್. ವಿ. ಭಟ್, *ಗಡಿನಾಡಿನ ಕಿಡಿ,* ಕಾಸರಗೋಡು : ಲಲಿತಕಲಾ ಸದನ, ೧೯೯೦

೧೧. ಜಿ. ವಿ. ಜೋಶಿ, ನೋರ್ಬರ್ಟ್ ಲೋಬೊ, *ಕರವಾಳಿ ಕರ್ನಾಟಕದ ಅರ್ಥವ್ಯವಸ್ಥೆ ಹಿಂದಿನಿಂದ ಇಂದಿನವರೆಗೆ,* ಮಂಗಳೂರು : ಮಂಗಳ ಪ್ರಕಾಶನ, ೨೦೦೯

೧೨. ಕೆ. ಮೋಹನ್‌ಕೃಷ್ಣ ರೈ, *ಕೆನರಾದ ವಿಭಜನೆ,* ಹಂಪಿ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೧೦

೧೩. ಟಿ ಆರ್. ಚಂದ್ರಶೇಖರ, *ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ,* ಹಂಪಿ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೧೦೧೦

೧೪. ಪ್ರೋ. ವಿ. ಕುಲಕರ್ಣಿ, ಹರಿಕೃಷ್ಣಭರಣ್ಯ ಬಿ., ಸದಾಶಿವ, *ಸಂಶೋಧನ ವಿಧಾನ*, ಮದುರೈ : ಪ್ರಭಸ ಬಿಡುಗಡೆ, ೧೯೮೯

೧೫. ಎಚ್. ಆರ್ ಕೆ., *ಕರ್ನಾಟಕ ಆರ್ಥಿಕತೆ*, ಬೆಂಗಳೂರು : ಸ್ವಪ್ನ ಬುಕ್ ಹೌಸ್, ೨೦೧೦

೧೬. ಸ್ವಪನ್‌ಗಾರ್ಯನ್, *ಟ್ರೈನಿಂಗ್ ಗ್ರಾಸ್‌ರೂಟ್ಸ್ ಲೆವೆಲ್ ವರ್ಕಾರ್ಸ್ ಇನ್ ಎಂಪವರಿಂಗ್ ದಿ ರೂರಲ್ ಪುವರ್*, ಜುಲೈ ೫೪, ೧೯೯೩, ಪೇಜ್ ನಂ. ೩೮೧-೩೯೨

೧೭. ಡಿ. ಪಿ. ಅಂಗಡಿ, ಬಿ. ಚಂದ್ರಶೇಖರ, *ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ*, ಮಂಗಳೂರು : ಕಿಶನ್ ಪಬ್ಲಿಕೇಶನ್, ೨೦೦೭

೧೮. ಜೋಮನ್ ಮ್ಯಾಥ್ಯು, ಜೊಬೈ ವಗೀಸ್, ೨೦೧೧, Available at Karnataka blogspot.com.hgo

ಪತ್ರಿಕೆಗಳು

- **ಉದಯವಾಣಿ, ಕನ್ನಡ ದೈನಿಕ**
- **ವಿಜಯ ಕರ್ನಾಟಕ ಕನ್ನಡ ದೈನಿಕ**
- **ದಿ. ಹಿಂದು, ಇಂಗ್ಲೀಷ್ ದೈನಿಕ**
- **ಕಾರವಲ್, ಕನ್ನಡ ಸ್ಥಳೀಯ ಪತ್ರಿಕೆ**

ಅನುಬಂಧ

"ಗ್ರಾಮೀಣಾಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ"

ಪ್ರಶ್ನಾವಳಿ

ಸೂಚನೆಗಳು

೧. ತಾವು ನೀಡುವ ಮಾಹಿತಿಯನ್ನು ಗೌಪ್ಯವಾಗಿ (**Secret**) ಇಡಲಾಗುವುದು.

೨. ತಾವು ನೀಡುವ ಮಾಹಿತಿಯನ್ನು "ಗ್ರಾಮೀಣಭಿವೃದ್ಧಿಯಲ್ಲಿ ಮಂಜೇಶ್ವರ ತಾಲೂಕಿನ ಸರ್ಕಾರೇತರ ಸಂಸ್ಥೆಗಳ ಪಾತ್ರ" ಎಂಬ ಸಂಪ್ರಭಂದದ ಅಗತ್ಯಗಳಿಗೆ ಮಾತ್ರ ಬಳಸಲಾಗುವುದು.

೩. ಈ ಸಂಶೋಧನಾ ಪ್ರಭಂದಕ್ಕೆ ತಾವು ನೀಡುವ ಮೌಲ್ಯಯುತವಾದ ಮಾಹಿತಿಗಳಿಗೆ ಧನ್ಯವಾದಗಳು.

ಅ) ವೈಯುಕ್ತಿಕ ಮಾಹಿತಿ

೧. ಹೆಸರು ಮತ್ತು ವಿಳಾಸ :

೨. ವಯಸ್ಸು :

ಅ) ೧೬ಕ್ಕಿಂತ ಕೆಳಗೆ ಆ) ೧೬–೩೦ ಇ) ೩೧–೪೫ ಈ) ೪೬–೬೦

ಉ) ೬೦ರಿಂದ ಮೇಲ್ಪಟ್ಟು

೩. ಧರ್ಮ :

೪. ವರ್ಗ :

೫. ಶೈಕ್ಷಣಿಕ ಅರ್ಹತೆ

ಅ) ಅನಕ್ಷರಸ್ಥ/ಸ್ಥೆ ಆ) ೧–೫ ಇ) ೬–೧೦

ಈ) ಪಿಯುಸಿ/ಪ್ಲಸ್‌ಟು ಉ) ಪದವಿ ಮತ್ತು ಮೇಲ್ಪಟ್ಟು

೬. ಪ್ರಧಾನ ವೃತ್ತಿ :

೭. ಉಪ ವೃತ್ತಿ :

ಅ) ಹೈನುಗಾರಿಕೆ ಆ) ಕೋಳಿಸಾಕಣೆ ಇ) ಜೇನು ವ್ಯವಸಾಯ
ಈ) ಹಂದಿಸಾಕಣೆ ಉ) ಇತರ.

೮. ತಾವು ಯಾವ ತರದ ಆಹಾರ ಸೇವನೆ ಮಾಡುತ್ತೀರಿ ?

ಅ) ಅಕ್ಕಿಯಿಂದ ತಯಾರು ಮಾಡಿದ್ದು ಆ) ಗೋದಿಯಿಂದ ತಯಾರು ಮಾಡಿದ್ದು

ಇ) ಹಾಲು ಮತ್ತು ಹಣ್ಣುಹಂಪಲು ಈ) ಇತರ

೯. ನಿಮ್ಮ ಆಹಾರದ ಪದ್ಧತಿ

ಅ) ಸಸ್ಯಹಾರಿ ಆ) ಮಾಂಸಹಾರಿ

೧೦. ತಾವು ಯಾವುದಾದರೂ ರೋಗದಿಂದ ಬಳಲುತ್ತಿದ್ದಿರಾ?

ಅ) ಹೌದು ಆ) ಇಲ್ಲ

೧೧. ತಾವು ಔಷಧಿಗಾಗಿ ಯಾವ ಆಸ್ಪತ್ರೆಯನ್ನು ಆಯ್ಕೆ ಮಾಡುತ್ತೀರಿ?

ಅ) ಸರ್ಕಾರಿ ಆ) ಖಾಸಗಿ ಭಿ) ಸಹಕಾರಿ

ಆ) ಕುಟುಂಬದವರ ಮತ್ತು ಮನೆಯ ವಿವರಗಳು

೧೨. ಕುಟುಂಬದ ಸದಸ್ಯರ ಸಂಖ್ಯೆ ಮತ್ತು ಪ್ರಾಯ

	೨೦ರಿಂದ ಕೆಳಗೆ	೨೦-೩೦	೩೦-೪೦	೪೧-೫೦	೫೧-೬೦	೬೧-೭೦	ಮೇಲ್ಪಟ್ಟು	ಒಟ್ಟು
ಗಂಡು								
ಹೆಣ್ಣು								
ಒಟ್ಟು								

೧೩. ಕುಟುಂಬದ ಸದಸ್ಯರ ಶೈಕ್ಷಣಿಕ ಮಟ್ಟ :

ಅ) ಅಶಿಕ್ಷಿತರು

ಆ) ಶಿಕ್ಷಿತರು

೧-೫	೬-೧೦	ಪಿಯುಸಿ/ಪ್ಲಸ್‌ಟು	ಪದವಿ	ಮೇಲ್ಪಟ್ಟು

೧೪. ಕುಟುಂಬದಲ್ಲಿ ದುಡಿಯುವವರ ಸಂಖ್ಯೆ :

ಗಂಡು	ಹೆಣ್ಣು

೧೫. ಭೂಮಿಯ ಒಡೆತನ

ಸ್ವಂತ ಭೂಮಿ	ಪಿತ್ರಾರ್ಜಿತ	ಗೇಣಿ	ಸರ್ಕಾರಿ	ಇತರ

೧೬. ತಾವು ವಾಸವಾಗಿರುವ ಮನೆಯ ಎಂತಹದ್ದು?

ಅ) ಹಂಚಿನ ಮನೆ ಆ) ತಾರಸಿನ ಮನೆ ಇ) ಸಿಮೆಂಟ್ / ತಗಡು ಈ) ಮುಳಿಹುಲ್ಲು

೧೭. ಭೂ ಹಿಡುವಳಿಯ ಗಾತ್ರ

ಅ) ೦-೧ ಎಕ್ಕರೆ ಆ) ೧-೫ ಎಕ್ಕರೆ ಇ) ೫-೧೦ ಎಕ್ಕರೆ ಈ) ೧೦ ಎಕ್ಕರೆ ಮೇಲ್ಪಟ್ಟು

೧೮. ತಮ್ಮ ಮನೆ ವಿದ್ಯುತ್ಕರಿಸಲಾಗಿದೆಯೇ?

ಅ) ಹೌದು ಆ) ಇಲ್ಲ

೧೯.ಅ. ಸ್ವಂತ ವಾಹನ ಇದೆಯಾ?

ಅ) ಇದೆ ಆ)ಇಲ್ಲ

೧೯.ಆ. ಇದ್ದಲ್ಲಿ

ಅ) ದ್ವಿಚಕ್ರ ಆ) ತ್ರಿಚಕ್ರ ಇ) ಚತುರ್ಚಕ್ರ ಈ) ಇತರ

೨೦ಅ. ಸಾಲ ಇದೆಯಾ?

ಚ) ಇದೆ ಛ) ಇಲ್ಲ

೨೦.ಆ. ಇದೆ ಎಂದಾದಲ್ಲಿ ಸಾಲದ ಮೂಲ

ಅ) ಸಹಕಾರಿ ಸಂಘ ಆ) ವಾಣಿಜ್ಯ ಬ್ಯಾಂಕ್ ಇ) ಲೇವಾದೇವಿಗಾರರು

ಈ) ಸರ್ಕಾರೇತರ ಸಂಸ್ಥೆ

೨೧. ಸಾಲ ಪಾವತಿ

ಅ) ಸಮರ್ಪಕವಾಗಿದೆ ಆ) ಸಮರ್ಪಕವಾಗಿಲ್ಲ

೨೨. ಸರ್ಕಾರಿ ಸಾಲದಲ್ಲಿ ಸಹಾಯಧನ ದೊರಕಿದೆಯೆ ?

ಅ) ದೊರತಿದೆ ಆ) ಇಲ್ಲ

೨೩. ಸಾಲವಸೂಲಾತಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆಯೆ?

ಅ) ಇದೆ ಆ) ಇಲ್ಲ

ಇ) ಸರ್ಕಾರೇತರ ಸಂಸ್ಥೆಯ ವಿವರ

೨೪. ಸರ್ಕಾರೇತರ ಸಂಸ್ಥೆಯ ಬಗ್ಗೆ ತಮಗೆ ಅರಿವು ಇದೆಯ?

ಅ) ಇದೆ ಆ) ಇಲ್ಲ

೨೫. ತಾವು ಯಾವ ಸರ್ಕಾರೇತರ ಸಂಸ್ಥೆಯಲ್ಲಿ ತಮ್ಮನ್ನು ತೊಡಗಿಸಿಕೊಂಡೀರಿ?

೨೬. ತಾವು ಸದಸ್ಯರಾಗಿರುವ ಸಕಾರೇತರ ಸಂಸ್ಥೆಯ ಸ್ವರೂಪ

ಅ) ನೋಂದಾಯಿತ ಆ) ನೋಂದಾಯಿತವಲ್ಲದ

೨೭. ತಾವು ಒಂದಕ್ಕಿಂತ ಹೆಚ್ಚು ಸರ್ಕಾರೇತರ ಸಂಸ್ಥೆಯಲ್ಲಿ ಸದಸ್ಯತ್ಯ ಹೊಂದಿದ್ದೀರಾ?

ಅ) ಹೌದು ಆ) ಅಲ್ಲ

೨೮. ತಮಗೆ ಸರ್ಕಾರೇತರ ಸಂಸ್ಥೆಯ ಸದಸ್ಯರಾಗಲು ಪ್ರೇರಣೆ ನೀಡಿದವರ್ಯಾರು

ಅ) ಕುಟುಂಬದ ಸದಸ್ಯರು ಆ) ಸಹಪಾಠಿಗಳು

ಇ) ಮಿತ್ರರರು ಈ) ಸರ್ಕಾರೇತರ ಸಂಸ್ಥೆಯ ಸದಸ್ಯರು

ಉ) ಧಾರ್ಮಿಕ ಮುಖಂಡರು

೨೯. ತಾವು ಸರ್ಕಾರೇತರ ಸಂಸ್ಥೆಗೆ ಸೇರಿದ ಉದ್ದೇಶ ಏನಾಗಿತ್ತು?

ಅ) ಸಮಾಜ ಸೇವೆಗೆ ಆ) ಆರ್ಥಿಕ ಸಹಾಯ ಪಡೆಯಲು ಇ) ಇತರರ ಒತ್ತಾಯದ ಮೇರೆಗೆ

೩೦. ತಾವು ಸರ್ಕಾರೇತರ ಸಂಸ್ಥೆಯಿಂದ ಪಡೆದ ಫಲದ ರೂಪ

ಅ) ಆರ್ಥಿಕ ಸಹಾಯ ಆ) ತರಬೇತಿ ಮತ್ತು ಮಾಹಿತಿ ಇ) ಸದಸ್ಯತನ

ಈ) ಸಾಂಸ್ಕೃತಿಕ ಪ್ರಯೋಜನ.

೩೧. ತಾವು ಸದಸ್ಯರಾಗಿರುವ ಸರ್ಕಾರೇತರ ಸಂಸ್ಥೆಯು ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು?

ಅ) ೧–೩ ಆ) ೪–೬ ಇ) ೭–೯ ಈ) ೯ಕ್ಕಿಂತ ಮೇಲ್ಪಟ್ಟು

೩೨. ವರ್ಷ ಕಳೆದಂತೆ ತಮ್ಮ ಸಂಸ್ಥೆಯ ಸದಸ್ಯರ ಸಂಖ್ಯೆ ಹೇಗಿದೆ ?

ಅ) ಹೆಚ್ಚಾಗುತ್ತದೆ ಆ) ಕಡಿಮೆಯಾಗುತ್ತಿದೆ

೩೩. ತಮ್ಮ ಹೆಸರಿನಲ್ಲಿ ಉಳಿತಾಯದ ಖಾತೆ ಇದೆಯೇ?

ಅ) ಇದೆ ಆ) ಇಲ್ಲ

ಈ) ಆರ್ಥಿಕ ಸಾಮಾಜಿಕ ಮಾಹಿತಿ

೩೪. ಸರ್ಕಾರೇತರ ಸಂಸ್ಥೆಗೆ ಸೇರಿದ ನಂತರ ತಮ್ಮ ಆರ್ಥಿಕ ಸ್ಥಿತಿಗತಿಯಲ್ಲಿ ಬದಲಾವಣೆ ಆಗಿದೆಯೇ?

ಅ) ಇದೆ ಆ) ಇಲ್ಲ

೩೫. ಸರ್ಕಾರೇತರ ಸಂಸ್ಥೆಗೆ ಸೇರಿದ ನಂತರ ತಮ್ಮ ಸಾಮಾಜಿಕ ಸ್ಥಿತಿಗತಿಯಲ್ಲಿ ಬದಲಾವಣೆ ಆಗಿದೆಯೇ?

ಅ) ಇದೆ ಆ) ಇಲ್ಲ

೩೬ಅ. ತಮಗೆ ಲಭಿಸಿದ ಆರ್ಥಿಕ ಪ್ರಯೋಜನದ ಸದ್ಬಳಕೆ ಮಾಡಿರುವಿರಾ?

ಅ) ಹೌದು ಆ) ಇಲ್ಲ

೩೬ಆ. ಹೌದು ಆಗಿದ್ದಲ್ಲಿ ನೀವು ಕೈಗೊಂಡ ಯೋಜನೆ ಏನು?

ಅ) ಹೈನುಗಾರಿಕೆ ಆ) ಗುಡಿಕೈಗಾರಿಕೆ

ಇ) ಸ್ವಂತ ಉದ್ಯೋಗ ಈ) ವ್ಯವಸಾಯ ಜ) ಇತರ

೩೭. ಸರ್ಕಾರೇತರ ಸಂಸ್ಥೆಯಿಂದ ಆರ್ಥಿಕ ಸವಲತ್ತು ಪಡೆಯಲು ತಮಗೆ ತಗಲಿದ ಸಮಯ

ಅ) ಒಂದು ವಾರ ಆ) ಒಂದು ಪಕ್ಷ(೧೫ ದಿನಗಳು) ಇ) ಒಂದು ತಿಂಗಳು

ಈ) ಒಂದು ತಿಂಗಳು ಮೇಲ್ಪಟ್ಟು

೩೮. ಆರ್ಥಿಕ ಸವಲತ್ತುಗಳ ಫಲಾನುಭವಿಯಾಗಲು ಗಣ್ಯ ವ್ಯಕ್ತಿಗಳ ಪ್ರಭಾವ ಬೇಕಾಗಿದೆಯೆ?

ಅ) ಬೇಕಾಗಿದೆ ಆ) ಇಲ್ಲ

೩೯.ಅ ಆರ್ಥಿಕ ಸವಲತ್ತುಗಳ ಮೊತ್ತವನ್ನು ಸಂಪೂರ್ಣವಾಗಿ ಯೋಜನೆಗೆ ತೊಡಗಿಸಲಾಗಿದೆಯೆ?

ಅ) ಹೌದು ಆ) ಇಲ್ಲ

೩೯ಆ. ಇಲ್ಲವೆಂದಾದಲ್ಲಿ ಅದರ ಬಳಕೆ ಮಾಡಲಾದ ಕ್ಷೇತ್ರ

ಅ) ಸಾಮಾಜಿಕ ಆಚರಣೆ ಆ) ಧಾರ್ಮಿಕ ಉದ್ದೇಶಕ್ಕಾಗಿ

ಇ) ಹಳೆಯ ಸಾಲದ ಪಾವತಿಗಾಗಿ ಈ) ಇತರ ಅಗತ್ಯಗಳಿಗಾಗಿ

೪೦. ತಮ್ಮ ವಾರ್ಷಿಕ ಆದಾಯ ಎಷ್ಟು?

ಅ) ೧,೦೦,೦೦೦ಕ್ಕಿಂತ ಕಡಿಮೆ ಆ) ೧,೦೦,೦೦೧ ರಿಂದ ೨,೦೦,೦೦೦

ಇ) ೨,೦೦,೦೦೧ ರಿಂದ ೩,೦೦,೦೦೦ ಈ) ೩,೦೦,೦೦೧ ರಿಂದ ೪,೦೦,೦೦೦

ಉ) ೪,೦೦,೦೦೧ ರಿಂದ ೫,೦೦,೦೦೦ ಊ) ೫,೦೦,೦೦೦ ಮೇಲ್ಪಟ್ಟು

ಉ) ಶಿಕ್ಷಣ ಕೃಷಿ ಮತ್ತು ಮಹಿಳಾ ಸದಸ್ಯರ ವಿವರ

೪೧ಅ.ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರೇತರ ಸಂಸ್ಥೆಯ ಸಹಾಯ ಲಭಿಸಿದೆಯೆ?

ಅ) ಲಭಿಸಿದೆ ಆ) ಇಲ್ಲ

೪೧ಆ.ಲಭಿಸಿದೆ ಎಂದಾದಲ್ಲಿ ಯಾವ ರೀತಿಯ ಸಹಾಯ

ಅ) ಉಚಿತ ಶಿಕ್ಷಣ ಆ) ಉಚಿತ ಪುಸ್ತಕ ಮತ್ತು ಸಮವಸ್ತ್ರ

ಇ) ಉಚಿತ ಸಾರಿಗೆ ವ್ಯವಸ್ಥೆ ಈ) ಈ ಮೇಲಿನ ಎಲ್ಲವೂ

೪೨. ತಾವು ಸದಸ್ಯರಾಗಿರುವ ಸರ್ಕಾರೇತರ ಸಂಸ್ಥೆಯಲ್ಲಿ ಮಹಿಳಾ ಸದಸ್ಯರಿದ್ದಾರೆಯೆ?

ಅ) ಇದ್ದಾರೆ ಇ) ಇಲ್ಲ

೪೩. ಮಹಿಳಾ ಸದಸ್ಯರ ಅಭಿವೃದ್ಧಿಗೆ ತಮ್ಮ ಸಂಸ್ಥೆಯ ಕೊಡುಗೆಯೇನು?

ಅ) ಸಾಲ ಸೌಲಭ್ಯ ಆ) ಸ್ವ ಉದ್ಯೋಗ ತರಬೇತಿ

ಇ) ಹಣ ಉಳಿತಾಯ ಸೌಲಭ್ಯ ಈ) ಮಾಹಿತಿ ಕಾರ್ಯಗಾರ ಉ) ಈ ಮೇಲಿನ ಎಲ್ಲಾವೂ

೪೪. ಸರ್ಕಾರೇತರ, ಸಂಸ್ಥೆಗಳ ಚಟುವಟಿಕೆಗಳಿಂದಾಗಿ ಮಹಿಳೆಯರು ಆರ್ಥಿಕವಾಗಿ ಸಬಲೀಕರಣಗೊಂಡಿದ್ದಾರೆಯೇ?

ಅ) ಹೌದು ಆ) ಇಲ್ಲ

೪೫. ತಾವು ಸದಸ್ಯರಾಗಿರುವ ಸರ್ಕಾರೇತರ ಸಂಸ್ಥೆಯ ಎಲ್ಲಾ ಮಹಿಳೆಯರು ವಿದ್ಯಾವಂತರೆ

ಅ) ಹೌದು ಆ) ಇಲ್ಲ ಇ) ಗೊತ್ತಿಲ್ಲ

೪೬ಅ.ತಾವು ಸದಸ್ಯರಾಗಿರುವ ಸರ್ಕರೇತರ ಸಂಸ್ಥೆಯಲ್ಲಿ ಸದಸ್ಯರಿಂದ ವಾರದ ಅಥವಾ ಮಾಸಿಕ ಹಣ ಸಂಗ್ರಹಿಸುವ ವ್ಯವಸ್ಥೆ ಇದೆಯೆ?

ಅ) ಇದೆ ಆ) ಇಲ್ಲ

೪೬ಆ.ಇದೆ. ಆದಲ್ಲಿ ಸಂಗ್ರಹಿಸಿದ ಹಣವನ್ನು ಹೇಗೆ ವಿನಿಯೋಗಿಸಲಾಗುತ್ತದೆ?

ಅ) ಸರ್ಕಾರೇತರ ಸಂಸ್ಥೆಯ ಠೇವಣಿಯಲ್ಲಿ ತೊಡಗಿಸುವಿಕೆ ಆ) ಸದಸ್ಯರಿಗೆ ಸಾಲವಾಗಿ ನೀಡುವುದು

ಇ) ಸಾರ್ವಜನಿಕ ಸೇವೆಗೆ ವಿನಿಯೋಗ ಈ) ಈ ಮೇಲಿನ ಎಲ್ಲಾವೂ

೪೭. ತಾವು ಸರ್ಕಾರೇತರ ಸಂಸ್ಥೆಯಿಂದ ಪಡೆದ ಹಣಕಾಸು ಸೌಲಭ್ಯ ಸಾಲ ರೂಪದಲ್ಲಿ ಪಡೆದಿದ್ದಲ್ಲಿ ಅದರ ಗರಿಷ್ಠ ಮೊತ್ತ ಎಷ್ಟು?

ಅ) ೧೦,೦೦೦ ಆ) ೧೦೦೦೧ ಇ) ೨೫೦೦೧

ಈ) ೫೦೦೦೧-೧,೦೦,೦೦೦ ಉ) ೧ ಲಕ್ಷಕ್ಕಿಂತ ಮೇಲ್ಪಟ್ಟು

೪೮. ಸರ್ಕಾರೇತರ ಸಂಸ್ಥೆಗಳು ವಾಣಿಜ್ಯ ಬ್ಯಾಂಕ್‌ಗಳಿಗಿಂತ ಅಥವಾ ಸಹಕಾರಿ ಸಂಘಗಳಿಗಿಂತ ಉತ್ತಮವೆಂದು ಅನಿಸುತ್ತದೆಯೇ?

ಅ) ಹೌದು ಇ) ಇಲ್ಲ

೪೮. ಹೌದು ಆದಲ್ಲಿ ಅದಕ್ಕೆ ಕಾರಣ

ಅ) ಅಲ್ಪಕಾಲದಲ್ಲಿ ಸಾಲ ನೀಡಿಕೆ. ಆ) ಕಡಿಮೆ ದಾಖಲೆ ಪತ್ರಗಳು

ಇ) ಕಡಿಮೆ ಬಡ್ಡದರ ಈ) ಸ್ಥಳೀಯ ಮಟ್ಟದಲ್ಲಿ ಸ್ಥಾಪನೆ

ಉ) ಈ ಮೇಲಿನ ಎಲ್ಲಾವೂ

೪೯. ಸರ್ಕಾರೇತರ ಸಂಸ್ಥೆಗಳ ಕಾರ್ಯಕಲಾಪಗಳು ರಾಜಕೀಯ ಪ್ರೇರಿತವಾಗಿದೆಯೇ?

ಅ) ಹೌದು ಆ) ಇಲ್ಲ

೫೦. ಸರ್ಕಾರೇತರ ಸಂಸ್ಥೆಗಳ ಕಾರ್ಯಕಾರೀ ಸಮಿತಿಯ ಸದಸ್ಯರ ವೈಯಕ್ತಿಕ ಹಿತಾಸಕ್ತಿಗಾಗಿ ಸಂಸ್ಥೆಗಳನ್ನು ಬಳಸಲಾಗುತ್ತಿದೆಯೇ?

ಅ) ಹೌದು ಆ) ಇಲ್ಲ

೫೧. ಕಳೆದ ೫ ವರ್ಷಗಳಿಂದ ತಮಗೆ ಸರ್ಕಾರೇತರ ಸಂಸ್ಥೆಗಳಿಂದ ಉಂಟಾಗಿರುವ ಆರ್ಥಿಕ ಪ್ರಯೋಜನಗಳು?

ಅ) ಹಳೆ ಸಾಲ ಮರುಪಾವತಿ ಆ) ಗೃಹನಿರ್ಮಾಣಕ್ಕೆ / ದುರಸ್ಥಿ ಸಹಾಯ ಧನ

ಇ) ಹೆಚ್ಚುವರಿ ಉದ್ಯೋಗ ಅವಕಾಶ ಈ) ಸಾಂಸ್ಕೃತಿಕ ಮತ್ತು ಕೃಷಿಯ ಅಭಿವೃದ್ಧಿ

ಉ) ಈ ಮೇಲಿನ ಎಲ್ಲಾವೂ

೫೨. ತಾವು ಕೃಷಿಯಲ್ಲಿ ತೊಡಗಿಸಿಕೊಂಡಿದ್ದೀರಾ?

ಅ) ಹೌದು ಇ) ಇಲ್ಲ

೫೩. ತಾವು ಸದಸ್ಯರಾಗಿರುವ ಸರ್ಕಾರೇತರ ಸಂಸ್ಥೆಯಿಂದ ಪಡೆದುಕೊಳ್ಳಲಾದ ಹಣಕಾಸಿನ ಸೌಲಭ್ಯವನ್ನು ಸಂಪೂರ್ಣವಾಗಿ ಕೃಷಿಗೆ ಬಳಸಲಾಗಿದೆಯೇ?


ಅ) ಇದೆ　　　ಇ) ಇಲ್ಲ

೫೪. ಕೃಷಿಗೆ ಆಧುನಿಕ ತಾಂತ್ರಿಕತೆಯ ಬಗ್ಗೆ ಮಾಹಿತಿ ನೀಡುತ್ತಾರಾ?

ಅ) ನೀಡುತ್ತಾರೆ　　　ಇ)ಇಲ್ಲ

Kasaragod District Map





Majeshwara Taluk Map

